ಮಾಧ್ಯಮದಲ್ಲಿ ದುಡಿಯುವ ಮಹಿಳೆಯರು-
ದಕ್ಷಿಣ ಕನ್ನಡದಲ್ಲಿ ಒಂದು ಅಧ್ಯಯನ

ಕೆಟಿಎಸ್‌ಎಮ್‌ಡಿಎಸ್ -೦೦೪೪೮

ಹಂಪಿ ಕನ್ನಡ ವಿಶ್ವವಿದ್ಯಾಲಯದ ಎಂ.ಫಿಲ್ ಪದವಿಗಾಗಿ
ಸಾದರಪಡಿಸಿದ ಸಂಪ್ರಬಂಧ

ಸಂಶೋಧಕರು
ರಶ್ಮಿಕುಮಾರಿ ಎ.

ಮಾರ್ಗದರ್ಶಕರು
ಡಾ.ವಿ.ಬಾಸಿಲ್ ಹನ್ಸ್

೨೦೧೦
ಕರ್ನಾಟಕ ಥಿಯೋಲಾಜಿಕಲ್ ಸಂಶೋಧನಾ ಕೇಂದ್ರ
ಬಲ್ಮಠ, ಮಂಗಳೂರು- ೫೭೫೦೦೧

ಮಾಧ್ಯಮದಲ್ಲಿ ದುಡಿಯುವ ಮಹಿಳೆಯರು- ದಕ್ಷಿಣ ಕನ್ನಡದಲ್ಲಿ ಒಂದು ಅಧ್ಯಯನ

ಕೆಟಿಎಸ್‌ಎಮ್‌ಡಿಎಸ್ -೦೦೪೪೮

ಹಂಪಿ ಕನ್ನಡ ವಿಶ್ವವಿದ್ಯಾಲಯದ ಎಂ.ಫಿಲ್ ಪದವಿಗಾಗಿ

ಸಾದರಪಡಿಸಿದ ಸಂಪ್ರಬಂಧ

ಸಂಶೋಧಕರು

ರಶ್ಮಿಕುಮಾರಿ ಎ.

ಮಾರ್ಗದರ್ಶಕರು

ಡಾ.ವಿ.ಬಾಸಿಲ್ ಹನ್ಸ್

೨೦೧೦

ಕರ್ನಾಟಕ ತಿಯೋಲಾಜಿಕಲ್ ಸಂಶೋಧನಾ ಕೇಂದ್ರ

ಬಲ್ಮಠ, ಮಂಗಳೂರು- ೫೭೫೦೦೧

ಯೋಗ್ಯತಾ ಪತ್ರ

ರಶ್ಮಿಕುಮಾರಿ ಎ ಅವರು ನನ್ನ ಸಲಹೆ ಮತ್ತು ಮಾರ್ಗದರ್ಶನದಲ್ಲಿ **'ಮಾಧ್ಯಮದಲ್ಲಿ ದುಡಿಯುವ ಮಹಿಳೆ- ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಒಂದು ಅಧ್ಯಯನ'** ಎಂಬ ಶೀರ್ಷಿಕೆಯ ಈ ಸಂಪ್ರಬಂಧವನ್ನು ಎಂ.ಫಿಲ್ ಪದವಿ ಪ್ರಾಪ್ತಿಗಾಗಿ ಹಂಪಿ ಕನ್ನಡ ವಿಶ್ವವಿದ್ಯಾಲಯಕ್ಕೆ ಸಲ್ಲಿಸಬೇಕೆಂದು ಸಿದ್ಧಪಡಿಸಿದ್ದಾರೆ. ಈ ಸಂಪ್ರಬಂಧವು ಸಂಶೋಧಕರ ಸ್ವಂತ ಪರಿಶ್ರಮ, ವಿಶ್ಲೇಷಣೆ, ಅಭಿಪ್ರಾಯ ಸಂಗ್ರಹ ಮತ್ತು ಸಂಶೋಧನೆಯ ಫಲಸ್ವರೂಪವಾಗಿದೆ. ಇವರು ಸಂಪ್ರಬಂಧದ ವಿಷಯವನ್ನು ಅಥವಾ ಇದರ ಯಾವುದೇ ಭಾಗವನ್ನು ಈ ಮೊದಲು ಯಾವುದೇ ಪದವಿಗಾಗಿ ಅಥವಾ ಇನ್ನಿತರ ಉದ್ದೇಶಗಳಿಗಾಗಿಯಾಗಲಿ ಬಳಸಿಕೊಂಡಿಲ್ಲ.

ಡಾ.ವಿ.ಬಾಸಿಲ್ ಹನ್ಸ್
ಸಂಶೋಧನ ಮಾರ್ಗದರ್ಶಕರು,
ಕರ್ನಾಟಕ ತಿಯಾಲಾಜಿಕಲ್
ಸಂಶೋಧನಾ ಕೇಂದ್ರ ಬಲ್ಮಠ, ಮಂಗಳೂರು.

ದಿನಾಂಕ: ೨೫-೦೮-೨೦೧೦

ಪ್ರಮಾಣ ಪತ್ರ

ಹಂಪಿ ಕನ್ನಡ ವಿಶ್ವವಿದ್ಯಾಲಯದ ಎಂ.ಫಿಲ್ ಪದವಿಗಾಗಿ ಸಾದರಪಡಿಸಿದ **'ಮಾಧ್ಯಮದಲ್ಲಿ ದುಡಿಯುವ ಮಹಿಳೆ- ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಒಂದು ಅಧ್ಯಯನ'** ಶೀರ್ಷಿಕೆಯ ಈ ಸಂಪ್ರಬಂಧವು ನನ್ನ ಸ್ವತಂತ್ರ ಕೃತಿಯಾಗಿದ್ದು, ವಿಶ್ಲೇಷಣೆ ಮತ್ತು ಅಧ್ಯಯನದ ಫಲೋದಯಾವಾಗಿದೆ. ಮಂಗಳೂರಿನ ಕರ್ನಾಟಕ ತಿಯಾಲಾಜಿಕಲ್ ಸಂಶೋಧನಾ ಕೇಂದ್ರದಲ್ಲಿ ಡಾ.ವಿ.ಬಾಸಿಲ್ ಹನ್ಸ್ ಅವರ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿದ ಈ ಸಂಪ್ರಬಂಧವನ್ನು ಬೇರಾವುದೇ ಪದವಿ, ಡಿಪ್ಲೋಮಾ ಅಥವಾ ತತ್ಸಮಾನ ಉಪಾದಿಗಳ ಪ್ರಾಪ್ತಿಗಾಗಿ ಅಥವಾ ಆರ್ಥಿಕ ಲಾಭಕ್ಕಾಗಿ ಇಡಿಯಾಗಿ ಅಥವಾ ಬಿಡಿಯಾಗಿ ಬಳಸಿಕೊಂಡಿಲ್ಲವೆಂದು ನಾನು ಈ ಮೂಲಕ ದೃಢಪಡುಸುತ್ತೇನೆ.

ರಶ್ಮಿಕುಮಾರಿ ಎ.
ಸಂಶೋಧಕರು
ಕರ್ನಾಟಕ ತಿಯಾಲಾಜಿಕಲ್
ಸಂಶೋಧನಾ ಕೇಂದ್ರ
ಬಲ್ಮಠ, ಮಂಗಳೂರು.

ದಿನಾಂಕ: ೨೫-೦೮-೨೦೧೦

ಮಾಧ್ಯಮದಲ್ಲಿ ದುಡಿಯುವ ಮಹಿಳೆಯರು–

ದಕ್ಷಿಣ ಕನ್ನಡದಲ್ಲಿ ಒಂದು ಅಧ್ಯಯನ

ಅಧ್ಯಯನದ ವಿವರಗಳು

ಅಧ್ಯಾಯ ೧

ಅಧ್ಯಯನದ ಮಹತ್ವ, ಉದ್ದೇಶ ಮತ್ತು ವ್ಯಾಪ್ತಿ

ಅಧ್ಯಾಯ ೧

ಅಧ್ಯಯನದ ಮಹತ್ವ ಉದ್ದೇಶ ಮತ್ತು ವ್ಯಾಪ್ತಿ

೧.೧ ಪ್ರವೇಶ

ಸಮೂಹ ಮಾಧ್ಯಮಗಳು ಮನುಷ್ಯನ ಮೂಲಭೂತ ಅವಶ್ಯಕತೆಗಳಲ್ಲಿ ಒಂದಾಗಿದ್ದು ಬೆಳವಣಿಗೆಯ ಹಾದಿಯಲ್ಲಿ ಮುನ್ನಡೆಯುತ್ತಿವೆ. ಬಹುಪ್ರಾಚೀನ ಕಾಲದಿಂದಲೂ ಅಸಡ್ಡೆಗೆ ಗುರಿಯಾದ ಮಹಿಳಾವರ್ಗದ ಕೈಗಳೂ ಮಾಧ್ಯಮಗಳ ಬೆಳವಣಿಗೆಯ ಹಂತಗಳಲ್ಲಿ ಕಾರ್ಯನಿರತವಾಗಿವೆ ಎನ್ನುವುದು ಸರ್ವರಿಗೂ ವೇದ್ಯ. ಸಮೂಹ ಮಾಧ್ಯಮವೆನಿಸಿದ ಬಾನುಲಿ, ದೂರದರ್ಶನ, ಪತ್ರಿಕೆ ಅಥವಾ ಇತರೆ ಜಾನಪದ ಕಲಾಮಾಧ್ಯಮಗಳಲ್ಲಿ ಮಹಿಳೆಯರೂ ಪುರುಷರಂತೆ ವಿಭಿನ್ನ ಸ್ಥರಗಳಲ್ಲಿ ತಮ್ಮ ಕೆಲಸವನ್ನು ಪ್ರಾಮಾಣಿಕತೆಯಿಂದ ನಿರ್ವಹಿಸುತ್ತಿದ್ದು ತಮ್ಮ ಸಾಮರ್ಥ್ಯವನ್ನೂ, ಪ್ರತಿಭೆಯನ್ನೂ ಪ್ರದರ್ಶಿಸುತ್ತಿದ್ದಾರೆ.

ವಿಜ್ಞಾನವೇ ಹೇಳುವಂತೆ ಮಹಿಳೆಯರು ಮತ್ತು ಪುರುಷರು ಸಮಾನವಾಗಿ ಹುಟ್ಟಿರದಿದ್ದರೂ ಅವರ ವಿಶೇಷ ಕೌಶಲಗಳಲ್ಲಿ ಭಿನ್ನತೆಯಿದೆ. ದೈಹಿಕವಾಗಿ ಮಹಿಳೆಯರು ದುರ್ಬಲರಾದರೂ ಬೌದ್ಧಿಕ ಕೌಶಲಗಳಲ್ಲಿ ಅವರು ಉನ್ನತ ಸ್ಥಾನವನ್ನು ಹೊಂದಿದ್ದಾರೆ. ತಮ್ಮ ವಿಶೇಷ ಕೌಶಲಗಳನ್ನು ಸಮೂಹ ಮಾಧ್ಯಮಗಳ ಮೂಲಕ ಪ್ರದರ್ಶಿಸುತ್ತಿರುವುದು ಹೆಮ್ಮೆಯ ವಿಷಯವೇ ಸರಿ. ಇಂತಹ ಮಹಿಳೆಯರು ಸಮೂಹ ಮಾಧ್ಯಮಗಳಲ್ಲಿ ನಿರ್ವಹಿಸುತ್ತಿರುವ ಪಾತ್ರದ ಕುರಿತಾಗಿ ಅವರ ಸ್ಥಾನಮಾನ-ಸ್ಥಿತಿಗತಿ ಕುರಿತಾಗಿ ಮನವರಿಕೆ ಮಾಡಿಕೊಳ್ಳುವ ಅಗತ್ಯತೆಯಿದೆ.

ಪ್ರಸಕ್ತ ಸಂದರ್ಭದಲ್ಲಿ ಹೇಳುವುದಾದರೆ ಮಹಿಳಾ ಸಂಬಂಧಿ ಬದಲಾವಣೆಗಳು, ಅವಕಾಶಗಳು ನಮ್ಮ ಸಮಾಜದಲ್ಲಿ ಕಂಡು ಬರುತ್ತಿವೆ. ಮಹಿಳಾ ಸಾಕ್ಷರತೆಯನ್ನೇ ತೆಗೆದುಕೊಂಡರೆ ನಿರೀಕ್ಷಿಸಿದಷ್ಟು ಪ್ರಗತಿ ಸಾಧಿಸದಿದ್ದರೂ ಸಾಕಷ್ಟು ಮಾರ್ಪಾಡಾಗಿದೆ. ಮಹಿಳೆಯರು ಸಾಧಿಸಿದ ಪ್ರಗತಿ ೧೦೨ ಪ್ರಮುಖ ದೇಶಗಳ ಪೈಕಿ ಭಾರತ ೯೫ನೇ ಸ್ಥಾನದಲ್ಲಿದೆ. ದೇಶದ ವಯಸ್ಕ ಮಹಿಳೆಯರ ಸಾಕ್ಷರತೆ ಕೇವಲ ಶೇಕಡ ೩೭. ೭ರಷ್ಟಿದೆ, ಅಂದರೆ ಶಿಕ್ಷಣ ಕ್ಷೇತ್ರದಲ್ಲಿ ಮಹಿಳೆಯರ ಮುನ್ನಡೆ ಇನ್ನೂ ಕಡಿಮೆಯಿದ್ದು, ಸಾಕಷ್ಟು ಒತ್ತಡ, ಒತ್ತಾಸೆಯ ಮೂಲಕ ಸಾಕ್ಷರತೆಯನ್ನು ಸಾಧಿಸಬೇಕಾಗಿದೆ (ಶಶಿಕುಮಾರ್, ೨೦೦೭).

ಉನ್ನತ ಶಿಕ್ಷಣ ಹಾಗೂ ವೃತ್ತಿಪರ ಶಿಕ್ಷಣಗಳಲ್ಲಿ ಮಹಿಳೆಯರು ಪುರುಷರನ್ನು ಮೀರಿಸಿ ಶರವೇಗದಿಂದ ಮುನ್ನಡೆಯುತ್ತಿದ್ದಾರೆ. ಇಂಜಿನಿಯರಿಂಗ್, ಕಂಪ್ಯೂಟರ್ ಕ್ಷೇತ್ರ ಸೇರಿದಂತೆ ಸಮೂಹ ಮಾಧ್ಯಮ ಕ್ಷೇತ್ರಕ್ಕೆ ಮಹಿಳೆಯರು ಅಡಿಯಿಟ್ಟಿರುವುದು ಸಂತಸದಾಯಕ ವಿಚಾರ. ಸವಾಲುಭರಿತ ಕ್ಷೇತ್ರಗಳಲ್ಲಿ ಮಹಿಳೆಯರ ಪ್ರವೇಶ ಒಂದು ರೀತಿಯ ಬದಲಾವಣೆಯ ಆಶಾಕಿರಣ ಮೂಡಿಸಿದೆ. ಮಹಿಳೆ ಕ್ರೀಡಾಳುವಾಗಿ, ಗಗನಸಖಿಯಾಗಿ, ದೇಶ ರಕ್ಷಿಸುವ ಯೋಧಳಾಗಿ, ಕಾನೂನು–ಶಿಸ್ತು ಕಾಪಾಡುವ ವಕೀಲೆಯಾಗಿ, ಪೊಲೀಸ್ ಅಧಿಕಾರಿಯಾಗಿ, ಪತ್ರಕರ್ತೆಯಾಗಿ ನಿರ್ವಹಿಸುತ್ತಿರುವ ಮಹತ್ತರ ಪಾತ್ರವನ್ನು ಮೆಚ್ಚಲೇ ಬೇಕು.

ಪಂಡಿತ್ ಜವಾಹರಲಾಲ್ ನೆಹರೂರವರ ಮಾತಿನಂತೆ ರಾಷ್ಟ್ರದ ಏಳಿಗೆಗೆ ಮಹಿಳೆಯರು ಅಶಿಕ್ಷಿತರಾಗಿರುವುದು ಹಾಗೂ ಅಲಕ್ಷ್ಯಕ್ಕೀಡಾಗಿರುವುದೇ ಮುಖ್ಯ ತೊಡಕಾಗಿದೆ. ನಮ್ಮ ನಾಗರಿಕತೆ, ಪದ್ಧತಿ, ಕಾನೂನು ಕಟ್ಟಳೆಗಳೆಲ್ಲ ಪುರಷರಿಂದಲೇ ರೂಪಿಸಲ್ಪಟ್ಟಿದ್ದು ಪುರುಷ ತನ್ನ ಸ್ವಹಿತಕ್ಕೋಸ್ಕರ ತನ್ನನ್ನು ತಾನು ಉನ್ನತ ಸ್ಥಾನದಲ್ಲಿರಿಸಿಕೊಂಡು ಮಹಿಳೆಯರನ್ನು ಆಟದ ವಸ್ತುವನ್ನಾಗಿ ಮಾಡಿ ಶೋಷಿಸುತ್ತಿದ್ದಾನೆ.

ಈ ರೀತಿ ಸುದೀರ್ಘವಾಗಿರುವ ಒತ್ತಡ ಮಹಿಳೆಯರ ಏಳಿಗೆಗೆ ಮಾತ್ರವಲ್ಲದೆ, ಸಾಮರ್ಥ್ಯ ವರ್ಧನೆಗೆ ತೊಡಕಾಗಿ ಪರಿಣಮಿಸಿದೆ. ಆದರೂ ಪುರುಷ 'ಮಹಿಳೆ' ಹಿಂದುಳಿದಿದ್ದಾಳೆಂದೇ ಮೂದಲಿಸುತ್ತಿದ್ದಾನೆ. ಇಂತಹ ಪರಿಸ್ಥಿತಿ ಮುಂದುವರಿದಲ್ಲಿ ಸವಾಲೆಸೆಯುವಂತಹ ವೃತ್ತಿಕ್ಷೇತ್ರದಲ್ಲಿ ಮಹಿಳೆಯರಿಗೆ ಸ್ಥಾನ ಲಭಿಸುವುದು ದುರ್ಲಭವೇ ಸರಿ (ವರ್ಮಾ, ೨೦೦೬).

ಮಾಧ್ಯಮ ಹಾಗೂ ಮಹಿಳೆ ಕುರಿತಾಗಿ ಹಲವಾರು ವಿಷಯಗಳು ಚರ್ಚೆಗೊಳಗಾಗಿವೆ. ವಿಶ್ವದಾದ್ಯಂತ ನಡೆದ ಸ್ತ್ರೀವಾದಿ ಚಳುವಳಿಗಳು ಮಹಿಳೆಯರಿಗೆ ಮಾಧ್ಯಮದಲ್ಲಿ ಸಿಗುವ ಉದ್ಯೋಗಾವಕಾಶಗಳು ತುಂಬಾ ಕಡಿಮೆಯಾಗಿದೆ, ಮಾತ್ರವಲ್ಲದೆ ನಿರ್ಧಾರ ತೆಗೆದುಕೊಳ್ಳುವಂತಹ ಸ್ಥಾನ ಆಕೆಗೆ ಲಭಿಸಿಲ್ಲ ಎನ್ನುತ್ತದೆ.

ಪ್ರಾಚೀನ ಕಾಲದಿಂದ ಇತ್ತೀಚಿನವರೆಗೆ ಅಭಿವೃದ್ಧಿ ಹೊಂದುತ್ತಿರುವ ರಾಷ್ಟ್ರಗಳ ಮತ್ತು ಅಭಿವೃದ್ಧಿ ಹೊಂದಿರುವ ದೇಶಗಳಲ್ಲಿನ ಮಾಧ್ಯಮದ ಬೆಳವಣಿಗೆಯನ್ನು ಗಮನಿಸಿದರೆ ಅವೆಲ್ಲವೂ ಪುರುಷ ಪ್ರಧಾನ ಹಿಡಿತದಲ್ಲಿರುವುದು ಗಮನಕ್ಕೆ ಬರುತ್ತದೆ. ಮಹಿಳೆ ಮಾತ್ರ ಬಡತನವನ್ನು ಅನುಭವಿಸುತ್ತಿದ್ದು, ಆರ್ಥಿಕವಾಗಿ, ಸಾಮಾಜಿಕವಾಗಿ ಅನ್ಯಾಯ ಹಾಗೂ ಶೋಷಣೆಗೆ ಗುರಿಯಾಗುತ್ತಿದ್ದಾಳೆ.

ಮಾಧ್ಯಮಗಳಲ್ಲಿನ ಮಹಿಳೆಯರನ್ನು ಪೂರ್ವಾಗ್ರಹಕ್ಕೊಳಗಾಗಿ ವಿಭಿನ್ನ ರೀತಿಯಲ್ಲಿ ಚಿತ್ರಿಸಲಾಗುತ್ತಿದೆ. ಕೆಲವು ಮಾಧ್ಯಮ ವೀಕ್ಷಣಾ ತಂಡಗಳು ಸಮೂಹ ಮಾಧ್ಯಮಗಳಾದ ದೂರದರ್ಶನ, ಸಿನಿಮಾ, ಮುದ್ರಣ ಮಾಧ್ಯಮಗಳಲ್ಲಿ ಮಹಿಳೆಯರನ್ನು ಲೈಂಗಿಕವಾಗಿ, ಅಶ್ಲೀಲವಾಗಿ ಚಿತ್ರಿಸಲಾಗುತ್ತಿದೆ ಎಂದು ಟೀಕಿಸಿವೆ. ಅಲ್ಲದೆ, ೧೯೮೫ರಲ್ಲಿ ಸ್ತ್ರೀವಾದಿ ಚಳುವಳಿ ರೂಪಿಸಿ ನಟಿ ಸಿಮಿಯ "ವಿಮೆನ್ಸ್ ವರ್ಲ್ಡ್" ಭಾನುವಾರದ ಬೆಳಗ್ಗಿನ ಟಿವಿ ಧಾರಾವಾಹಿಯನ್ನು ಪ್ರತಿಭಟಿಸಿದೆ. ಈ ಚಳುವಳಿ ರಾಷ್ಟ್ರದ ಹಲವು ಕಡೆಗಳಲ್ಲಿ ನಡೆಯಿತು (ಬಾಲಸುಬ್ರಹ್ಮಣ್ಯನ್, ೧೯೮೮).

ಒಟ್ಟಿನಲ್ಲಿ ಮಾಧ್ಯಮದಲ್ಲಿ ಮಹಿಳೆಯ ಸ್ಥಾನ ಪ್ರಮುಖವಾಗಿದ್ದು, ಆಕೆ ಲೈಂಗಿಕವಾಗಿ ಅಥವಾ ಮಾನಸಿಕವಾಗಿ ಶೋಷಣೆಗೀಡಾಗುತ್ತಿದ್ದಾಳೆ. ಇಂತಹ ಪರಿಸ್ಥಿತಿಯಲ್ಲಿ ಆಕೆಯ ಸ್ಥಿತಿಗತಿ ಕುರಿತಾಗಿ ಅಧ್ಯಯನ ಮಾಡುವ ಅಗತ್ಯತೆಯಿದೆ. ಅಲ್ಲದೆ ಸಮಸ್ಯೆಗಳಿಗೆ ಪರಿಹಾರೋಪಾಯವನ್ನು ನೀಡಬೇಕಾಗಿದೆ.

೧.೨ ಅಧ್ಯಯನದ ಮಹತ್ವ

'ಮಾಧ್ಯಮದಲ್ಲಿ ದುಡಿಯುವ ಮಹಿಳೆಯರು ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಒಂದು ಅಧ್ಯಯನ' ಈ ಸಂಶೋಧನಾತ್ಮಕ ಅಧ್ಯಯನದಿಂದ ಮಾಧ್ಯಮದಲ್ಲಿ ಪೂರ್ಣಕಾಲಿಕವಾಗಿ ದುಡಿಯುವ ಮಹಿಳೆಯರ ವೈಯಕ್ತಿಕ, ಸಾಮಾಜಿಕ, ಭೌತಿಕ, ವೃತ್ತಿಸಂಬಂಧಿ ವಿಷಯಗಳ ಕುರಿತು ಸ್ಪಷ್ಟ ಮಾಹಿತಿ ದೊರೆಯುವುವು. ಇದು ಅವರ ಅಭಿವೃದ್ಧಿಗಾಗಿ ವಿವಿಧ ರೀತಿಯ ಕಾರ್ಯಯೋಜನೆಗಳನ್ನು ರೂಪಿಸಲು ಸರಕಾರ ಅಥವಾ ಮಾಧ್ಯಮ ಸಂಸ್ಥೆಗಳಿಗೆ ನೆರವಾಗಬಹುದು. ಅಲ್ಲದೆ ಈ ಅಧ್ಯಯನವು ಲೈಂಗಿಕ ಅಥವಾ ಇನ್ನಾವುದೇ ರೀತಿಯಲ್ಲಿ ಕಿರುಕುಳಕ್ಕೊಳಗಾಗುವ ಮಹಿಳೆಯರ ಪರವಾಗಿ ಮಹಿಳಾ ಸಂಘಟನೆಗಳನ್ನು ಬೆಂಬಲಕ್ಕೆ ನಿಲ್ಲುವಂತೆ ಪ್ರೇರೇಪಿಸುವುದು.

ಸಮೂಹ ಸಂವಹನ ಮಾಧ್ಯಮದಲ್ಲಿ ಬಹುಬೇಗನೆ ಹೆಸರು, ಹಣ ಗಳಿಸಬಹುದೆನ್ನುವ ಆಲೋಚನೆ ಜನಮಾನಸದಲ್ಲಿದೆ. ಹೀಗಾಗಿ ಮಾಧ್ಯಮರಂಗದಲ್ಲಿ ದುಡಿಯುವ ಆಸಕ್ತಿಯುಳ್ಳ ಮಂದಿ ದಿನೇದಿನೇ ಹೆಚ್ಚಾಗುತ್ತಿದ್ದಾರೆ. ದೂರದರ್ಶನ, ಚಲನಚಿತ್ರ ಮಾಧ್ಯಮಗಳಂತೂ ಇಂತಹವರನ್ನು ಆಕರ್ಷಿಸುವ ಕೇಂದ್ರಬಿಂದುವೇ ಆಗಿವೆ. ಇಂತಹ ಮಾಧ್ಯಮದಲ್ಲಿ ದುಡಿಯುವ

ಆಸಕ್ತಿಯುಳ್ಳ ಮಹಿಳೆಯರಿಗೆ ಮಾಧ್ಯಮದಲ್ಲಿ ದುಡಿಯುವ ಮಹಿಳೆಯರ ಸ್ಥಿತಿಗತಿ ಕುರಿತಾಗಿ ಸ್ಪಷ್ಟ ಚಿತ್ರಣ ಒದಗಿಸಿ ಅವರಿಗೆ ಪೂರ್ವಸಿದ್ಧತೆಯನ್ನು ಮಾಡಿಕೊಳ್ಳಲು ನೆರವಾಗುವುದು. ಭಾರತದ 'ಕಳೆದು' ಹೋಗಿರುವ ಮಹಿಳೆಯರನ್ನು ಅಭಿವೃದ್ಧಿಯ ಮುಖ್ಯವಾಹಿನಿಗೆ ತರಬೇಕಾದರೆ ಲಿಂಗ ತಾರತಮ್ಯದ ಬೇರು ಮತ್ತು ರೆಂಬೆ-ಕೊಂಬೆಗಳನ್ನು ಮತ್ತು ಫಲಗಳನ್ನು ಅಧ್ಯಯನ/ಸಂಶೋಧನೆಗೆ ಒಳಪಡಿಸುವ ಅಗತ್ಯವಿದೆ (ಹನ್ಸ್, ೨೦೧೦).

ಇಷ್ಟು ಮಾತ್ರವಲ್ಲದೆ, ಮಾಧ್ಯಮ ಶಿಕ್ಷಣವನ್ನು ಪಡೆಯುವ ವಿದ್ಯಾರ್ಥಿಗಳಿಗೆ ಹಾಗೂ ಮಾಧ್ಯಮ ಶಿಕ್ಷಣದ ಬೋಧಕರಿಗೆ ಮಾಧ್ಯಮದಲ್ಲಿ ದುಡಿಯುವ ಮಹಿಳೆಯರ ಸಾಮಾಜಿಕ, ಆರ್ಥಿಕ, ಮಾನಸಿಕ ಹಾಗೂ ವೃತ್ತಿಸಂಬಂಧಿ ಸ್ಥಿತಿಗತಿ ಕುರಿತಾಗಿ ಸ್ಪಷ್ಟ ತಿಳುವಳಿಕೆ ಮೂಡಿಸುವ ಸಾಧ್ಯತೆಯಿದೆ. ಮಾಧ್ಯಮದಲ್ಲಿ ದುಡಿಯುವ ಮಹಿಳೆಯರೆಂದರೆ 'ಎಲ್ಲವನ್ನು ಬಿಟ್ಟುವರು' ಎನ್ನುವ ಜನಸಾಮಾನ್ಯರ ಸಾಮಾನ್ಯ ದೃಷ್ಟಿಯನ್ನು ಬದಲಾಯಿಸುವಲ್ಲಿ ಈ ಅಧ್ಯಯನ ಪ್ರಮುಖ ಪಾತ್ರ ವಹಿಸಬಹುದು.

೧.೩ ಅಧ್ಯಯನದ ಉದ್ದೇಶ

ಆಧುನಿಕ ನಾಗರಿಕ ಜಗತ್ತಿನಲ್ಲಿ ಸಮೂಹ ಮಾಧ್ಯಮಗಳು ಅತೀ ಹೆಚ್ಚು ಮಹತ್ವ ಪಡೆದಿವೆ. ಏಕಕಾಲದಲ್ಲಿ ಅಸಂಖ್ಯಾತ ಜನರಿಗೆ ಸುದ್ದಿಮುಟ್ಟಿಸುವ ವಿಸ್ಮಯಕಾರಿ ಮಾಧ್ಯಮಗಳು ಜನಜೀವನದಲ್ಲಿ ಹಾಸುಹೊಕ್ಕಾಗಿವೆ. ಪ್ರಪಂಚದ ಒಂದು ಮೂಲೆಯ ಸುದ್ದಿ ಅಥವಾ ಘಟನೆ ಇನ್ನಾವುದೋ ಮೂಲೆಯಲ್ಲಿರುವವರಿಗೆ ಕೂಡಲೇ ತಿಳಿಯುವುದು ಪವಾಡ ಸದೃಶ ವೈಜ್ಞಾನಿಕ ತಂತ್ರಜ್ಞಾನದ ಬೆಳವಣಿಗೆಯಿಂದ. ಮಹಿಳೆಯರು ಸಮೂಹ ಮಾಧ್ಯಮಗಳಲ್ಲಿ, ಅವುಗಳಿಂದ ಹಾಗೂ ಅವುಗಳಿಗಾಗಿ ಸ್ತ್ರೀತ್ವವನ್ನು ಹೊಸ ದೃಷ್ಟಿಕೋನದಿಂದ ಜಾಗತಿಕವಾಗಿ ಅಭಿವ್ಯಕಿಗೊಳಿಸುತ್ತಿದ್ದಾರೆ. ಪಾರಿವಾಳದ ಕಾಲಿಗೆ ಕಟ್ಟಿದ ಅಥವಾ ಹಂಸದ ಮೂಲಕ ಕಳುಹಿಸಿದ ಸಂದೇಶಗಳು ಈಗ ದೃಶ್ಯ ಮಾಧ್ಯಮದಲ್ಲಿ ಮಿಂಚುತ್ತವೆ. ಸಂಪರ್ಕ ಸಾಧನಗಳಾಗಿದ್ದ ಸುದ್ದಿ ಪ್ರಕಟಣೆಯ ಸಾಧನಗಳಿಂದು ಎಲ್ಲಾ ವರ್ಗದ ಶ್ರೇಣಿಯ ಜನರ ಮುಖವಾಣಿಗಳಾಗಿವೆ. ಅದೇ ವೇಳೆಗೆ ದನಿ ಇಲ್ಲದವರ ಒಳದನಿಗಳನ್ನು ಪ್ರಚುರಪಡಿಸುವ ವಾಹಕಗಳಾಗಿವೆ. ಹಾಗಿರುವಾಗ ಮಾಧ್ಯಮದಲ್ಲಿ ದುಡಿಯುವ ಮಹಿಳೆಯ ವೈಯಕ್ತಿಕ, ಕೌಟುಂಬಿಕ, ಆರ್ಥಿಕ, ವೃತ್ತಿಸಂಬಂಧಿತ ಅಂಶಗಳನ್ನು ಅಧ್ಯಯನ ಮಾಡುವ ಅಗತ್ಯತೆಯಿದೆ (ಶಶಿಕುಮಾರ್, ೨೦೦೭).

ಸಾಮಾನ್ಯ ಉದ್ದೇಶ

೧. ದಕ್ಷಿಣ ಕನ್ನಡ ಜಿಲ್ಲೆಯಲ್ಲಿನ ಮಾಧ್ಯಮಗಳಲ್ಲಿ ದುಡಿಯುವ ಮಹಿಳೆಯರ ವೃತ್ತಿಪರತೆಯನ್ನು ಕಂಡುಹಿಡಿಯುವುದು.

೨. ಮಾಧ್ಯಮದಲ್ಲಿ ಮಹಿಳೆಯ ಸ್ಥಾನಮಾನ ಹೇಗಿದೆ ಎಂದು ತಿಳಿಯುವುದು.

೩. ಮಹಿಳೆ ಈ ವೃತ್ತಿಯಲ್ಲಿ ಎಷ್ಟು ಸ್ವತಂತ್ರಳು ಎನ್ನುವುದನ್ನು ಕಂಡುಕೊಳ್ಳುವುದು.

೪. ಮಹಿಳೆ ಮಾಧ್ಯಮದಲ್ಲಿ ಯಾವ ರೀತಿಯ ವಾತಾವರಣದಲ್ಲಿ ದುಡಿಯುತ್ತಿದ್ದಾಳೆ ಎನ್ನುವುದನ್ನು ಅರಿಯುವುದು.

೫. ಸಾಮಾನ್ಯ ಮಹಿಳೆಯರ ಉನ್ನತಿ ಮಾಧ್ಯಮದಲ್ಲಿ ದುಡಿಯುವ ಮಹಿಳೆಯರಿಂದ ಸಾಧ್ಯವೇ ಎನ್ನುವುದನ್ನು ತಿಳಿಯುವುದು.

೬. ಮಹಿಳೆಯರು ಧರಿಸುವ ಉಡುಪು/ನಡವಳಿಕೆಗಳು ಹೇಗಿವೆ ಎನ್ನುವುದನ್ನು ಅರಿಯುವುದು.

ನಿರ್ಧಿಷ್ಟ ಉದ್ದೇಶ

೧. ಮಾಧ್ಯಮದಲ್ಲಿ ಸೇವೆಸಲ್ಲಿಸಲು ಮಹಿಳೆಗೆ ಆಸಕ್ತಿ ಮೂಡಿದ ಬಗ್ಗೆ.

೨. ಆಕೆಯ ಆಸಕ್ತ ವಿಷಯ ತಿಳಿಯುವುದು.

೩. ಪುರುಷ ಸಹೋದ್ಯೋಗಿ/ಮೇಲಧಿಕಾರಿಗಳ ನಡುವಿನ ಸಂಬಂಧ, ಮಹಿಳಾ ಸಹೋದ್ಯೋಗಿಗಳ ಸಹಕಾರದ ಬಗ್ಗೆ ತಿಳಿಯುವುದು.

೪. ವೇತನ ಪದೋನ್ನತಿ ಬಗೆಗಿನ ಅತೃಪ್ತಿ ಕುರಿತು ಪರಿಜ್ಞಾನ ಬೆಳೆಸುವುದು.

೫. ಮಾಧ್ಯಮದಲ್ಲಿ ದುಡಿಯುವ ಮಹಿಳೆಯರನ್ನು ಸಮಾಜ ಕಾಣುವ ದೃಷ್ಟಿಕೋನದ ಬಗ್ಗೆ ಮಾಹಿತಿ ಸಂಗ್ರಹಿಸುವುದು.

೬. ವೃತ್ತಿಯಲ್ಲಿ ಪುರುಷ–ಮಹಿಳೆಯರೆಂಬ ತಾರತಮ್ಯ ಇದೆಯೆ ಎನ್ನುವುದನ್ನು ಅರಿಯುವುದು.

೭. ಮಾಧ್ಯಮದಲ್ಲಿ ದುಡಿಯುವ ಮಹಿಳೆಯರಿಗಿರುವ ಕೊರತೆ ಕುರಿತಾಗಿ ತಿಳಿಯುವುದು.

೮. ಮಾಧ್ಯಮದಲ್ಲಿ ದುಡಿಯುವ ಮಹಿಳೆಯರ ಅಭಿವೃದ್ಧಿಗಾಗಿ ಶ್ರಮಿಸುವುದು.

೧.೪ ಅಧ್ಯಯನದ ವ್ಯಾಪ್ತಿ

ಪ್ರಸ್ತುತ ಅಧ್ಯಯನಕ್ಕಾಗಿ ದಕ್ಷಿಣ ಕನ್ನಡ ಜಿಲ್ಲೆಯಲ್ಲಿನ ದೃಶ್ಯ, ಶ್ರವ್ಯ, ಮುದ್ರಣ ಸೇರಿದಂತೆ ಜನಪದ ಕಲಾ ಮಾಧ್ಯಮಗಳಲ್ಲಿ ವೃತ್ತಿನಿರತರಾಗಿರುವ ಮಹಿಳೆಯರನ್ನು ಸಂದರ್ಶಿಸಲು ನಿರ್ಧರಿಸಲಾಯಿತು. ದಕ್ಷಿಣ ಕನ್ನಡ ಜಿಲ್ಲೆಯಲ್ಲಿನ ಸರ್ಕಾರಿ/ಖಾಸಗಿ ದೂರದರ್ಶನ ಮಾಧ್ಯಮಗಳು, ಬಾನುಲಿ ಕೇಂದ್ರಗಳು, ಕನ್ನಡ, ಇಂಗ್ಲಿಷ್, ಕೊಂಕಣಿ, ತುಳು, ಮಲಯಾಳಂ ಭಾಷೆಯ ಮುದ್ರಣ ಮಾಧ್ಯಮಗಳು, ಚಲನಚಿತ್ರ ತಂಡ, ಧಾರಾವಾಹಿತಂಡ, ಯಕ್ಷಗಾನ, ನಾಟಕ, ಬೀದಿ ನಾಟಕ ಮೊದಲಾದ ಜನಪದ ಕಲಾ ಮಾಧ್ಯಮಗಳಲ್ಲಿ ದುಡಿಯುವ ೧೫೪ ಮಂದಿ ಮಹಿಳಾ ಸಂವಾದಿಗಳ ಅಭಿಪ್ರಾಯಗಳನ್ನು ಈ ಅಧ್ಯಯನದಲ್ಲಿ ಗಣನೆಗೆ ತೆಗೆದುಕೊಳ್ಳಲಾಗಿದೆ.

ಇಂದಿನ ಬದಲಾದ ಪರಿಸ್ಥಿತಿಯಲ್ಲಿ ಸಂವಹನ ಕ್ರಾಂತಿ ಅನೇಕ ರೀತಿಯ ಮಾಧ್ಯಮ ಸಂಬಂಧೀ ವೃತ್ತಿ ಅವಕಾಶಗಳನ್ನು ಒದಗಿಸಿದ್ದರೂ ಮಹಿಳೆಯರಿಗೆ ಈ ಅವಕಾಶಗಳು ಬಲು ಸೀಮಿತ ಸಂಖ್ಯೆಯಲ್ಲಿ ದೊರೆಯುತ್ತಿವೆ. ಇದಕ್ಕಿರುವ ಪ್ರಮುಖ ಕಾರಣಗಳೆಂದರೆ ಸಾಮಾಜಿಕ, ಸಾಂಸ್ಕೃತಿಕ ನಂಬುಗೆ, ಹಿನ್ನೆಲೆಗಳು ಹಾಗೂ ಉದ್ಯೋಗಿ ಸಂಸ್ಥೆಗಳಲ್ಲಿನ ವಾಸ್ತವ ಅಂಶಗಳೇ ಆಗಿವೆ.

ಮಾಧ್ಯಮ ವೃತ್ತಿಯಲ್ಲಿ ಪ್ರಗತಿಯನ್ನು ಬಯಸುವ ಮಹಿಳೆಯೊಬ್ಬಳಿಗೆ ಎದುರಾಗುವ ಅತೀ ದೊಡ್ಡ ಸಮಸ್ಯೆಯೆಂದರೆ ಆಳವಾಗಿ ಬೇರು ಬಿಟ್ಟಿರುವ ಸಾಮಾಜಿಕ ಹಾಗೂ ಸಾಂಸ್ಕೃತಿಕ ನಂಬುಗೆಗಳು, ಮದುವೆ ಮತ್ತು ಮಕ್ಕಳನ್ನು ಹೆರುವುದು ಮಹಿಳೆಯರನ್ನು ವೃತ್ತಿ ಕ್ಷೇತ್ರದಲ್ಲಿ ಅವಕಾಶ ವಂಚಿತೆಯರನ್ನಾಗಿ ಮಾಡಿರಬಹುದು. ಅವರಲ್ಲಿ ಎಷ್ಟೇ ಕ್ರಿಯಾಶೀಲತೆಯಿದ್ದರೂ ಕೆಲ ವರ್ಷಗಳವರೆಗೆ ವೃತ್ತಿಯಿಂದ ಹೊರಗಿದ್ದರೆ ಮತ್ತೆ ಅವಕಾಶಗಳಿಗಾಗಿ ಹುಡುಕಾಡಬೇಕಾದ ಪರಿಸ್ಥಿತಿ ಬರುತ್ತದೆ. ವಿಷಯದ ಬಗೆಗಿನ ಜ್ಞಾನವನ್ನು ಅಪೂರ್ಣವೆಂದು ಭಾವಿಸಲಾಗುತ್ತದೆ. ಹೆಚ್ಚಿನ ಸ್ಪರ್ಧಾತ್ಮಕತೆಯ ಪರಿಸರದಲ್ಲಿ ಯಾವುದೇ ಸಮಾನಾವಕಾಶಗಳಿಗೆ ತಿರಸ್ಕೃತಳಾಗಿ ವಾಸ್ತವವನ್ನು ಎದುರಿಸಲಾರದೆ ಇತರೆ ವೃತ್ತಿಗಳತ್ತ ಮುಖ ಮಾಡಬೇಕಾದ ಪರಿಸ್ಥಿತಿ ಎದುರಾಗುತ್ತದೆ.

ಮಾಧ್ಯಮದಲ್ಲಿ ದುಡಿಯುವ ಮಹಿಳೆಯರ ಸ್ಥಿತಿಗತಿಯನ್ನು ಅಧ್ಯಯನ ಮಾಡಲೋಸುಗ ಹಾಗೂ ಆಕೆಯ ಸರ್ವತೋಮುಖ ಅಭಿವೃದ್ಧಿಯ ದೃಷ್ಟಿಯಿಂದ ಈ ಅಧ್ಯಯನವನ್ನು ಕೈಗೊಳ್ಳಲಾಗಿದ್ದು ದಕ್ಷಿಣ ಕನ್ನಡ ಜಿಲ್ಲೆಯ ವಿವಿಧ ಮಾಧ್ಯಮಗಳಲ್ಲಿ ಕಾರ್ಯನಿರತರಾಗಿರುವ ಮಹಿಳೆಯರು ತಮ್ಮ ಅಭಿಪ್ರಾಯ ಅನಿಸಿಕೆಗಳನ್ನು ತಮ್ಮದೇ ಆದ ರೀತಿಯಲ್ಲಿ ತಿಳಿಸಿರುತ್ತಾರೆ.

ಹೆಚ್ಚಿನವರು ಮಹಿಳೆ ಎನ್ನುವ ಕಾರಣಕ್ಕೆ ಮಾಧ್ಯಮದಲ್ಲಿನ ವೃತ್ತಿ ಸಂಬಂಧಿ ಅವಕಾಶಗಳಿಂದ ವಂಚಿತರಾಗಿರುವ ಸಾಧ್ಯತೆಯನ್ನು ತಮ್ಮ ಅಭಿಪ್ರಾಯದಲ್ಲಿ ವ್ಯಕ್ತಪಡಿಸಿದ್ದಾರೆ. ಪುರುಷ ಸಹೋದ್ಯೋಗಿಗಳ ಅಥವಾ ಮೇಲಧಿಕಾರಿಗಳಿಂದ ಲೈಂಗಿಕ ಕಿರುಕುಳಕ್ಕೊಳಗಾದ ಬಗ್ಗೆ ತಮ್ಮ ಅಭಿಪ್ರಾಯವನ್ನು ಮುಕ್ತವಾಗಿ ವ್ಯಕ್ತಪಡಿಸುವುದಕ್ಕೆ ಹಿಂದೇಟು ಹಾಕಿದ್ದಾರೆಂದು ಹೇಳಬಹುದು.

ಈ ಅಧ್ಯಯನದ ಮೂಲಕ ಮಾಧ್ಯಮದಲ್ಲಿ ದುಡಿಯುವ ಮಹಿಳೆಯರ ಮಾನಸಿಕ, ಸಾಮಾಜಿಕ, ಕೌಟುಂಬಿಕ, ಆರ್ಥಿಕ ಸ್ಥಿತಿಗತಿ ಮಾತ್ರವಲ್ಲದೆ, ವೃತ್ತಿ ಸಂಬಂಧಿ ಎಡರುತೊಡರುಗಳ ಕುರಿತಾಗಿ ಬೆಳಕು ಚೆಲ್ಲುವ ಪ್ರಯತ್ನ ಮಾಡಲಾಗಿದೆ. ದಕ್ಷಿಣ ಕನ್ನಡ ಜಿಲ್ಲೆಯ ವ್ಯಾಪ್ತಿಯಲ್ಲಿ ಮಾಧ್ಯಮದಲ್ಲಿ ದುಡಿಯುವ ಮಹಿಳೆಯರ ಸಂಖ್ಯೆ ಪುರುಷರಿಗಿಂತ ಬಹುಕಡಿಮೆಯಿದ್ದು, ಇದು ಆಕೆಗಿರುವ ಅವಕಾಶಗಳು ಎಷ್ಟರ ಮಟ್ಟಿಗೆ ಇವೆ ಎನ್ನುವುದನ್ನು ಸ್ಪಷ್ಟಪಡಿಸುತ್ತದೆ.

ಪ್ರಪಂಚದ ಅನಕ್ಷರಸ್ಥರಲ್ಲಿ ಶೇ.೭೦ರಷ್ಟು ಮಂದಿ ಮಹಿಳೆಯರಿದ್ದಾರೆ. ಇದಕ್ಕೆ ಕಾರಣ ಅವರಿಗೆ ಶಿಕ್ಷಣ, ಸಾಮಾಜಿಕ ಚಟುವಟಿಕೆ, ಸಂವಹನ ಇತ್ಯಾದಿಗಳಲ್ಲಿ ಸಮಾನ ಅವಕಾಶಗಳು ಇಲ್ಲದಿರುವುದೇ ಆಗಿದೆ. ಇತರ ಎಲ್ಲಾ ಕ್ಷೇತ್ರಗಳಲ್ಲಿ ಇರುವಂತೆ ಮಾಧ್ಯಮಗಳಲ್ಲಿಯೂ ಈ ತಾರತಮ್ಯ ಹೆಚ್ಚೆನ್ನಬಹುದು. ಪ್ರಪಂಚದ ಯಾವುದೇ ರಾಷ್ಟ್ರದಲ್ಲಿ ಮಾಧ್ಯಮಗಳ ಬೆಳವಣಿಗೆ ಮಹಿಳೆಯರ ಪಾಲ್ಗೊಳ್ಳುವಿಕೆಯಿಂದ ಬೆಳೆಯಲಿಲ್ಲ ಎನ್ನುವ ಅಂಶ ಗಮನಾರ್ಹ.

ಯುನೆಸ್ಕೊದಿಂದ ಪ್ರಾಯೋಜಿಸಲ್ಪಟ್ಟ ಕೆಲವೊಂದು ಪ್ರಾಥಮಿಕ ಅಧ್ಯಯನಗಳು ಕೆನಡ, ಈಕ್ವೆಡಾರ್, ಈಜಿಪ್ಟ್, ನೈಜೀರಿಯ ಹಾಗೂ ಭಾರತದಲ್ಲಿ ಈ ಸಮಸ್ಯೆ ಹೆಚ್ಚಾಗಿರುವುದನ್ನು ಗುರುತಿಸಿದೆ. ಪುರುಷ ಕ್ಷೇತ್ರ ಎನ್ನುವ ಹಣೆಪಟ್ಟಿಯೊಂದಿಗೆ ಮಾಧ್ಯಮ ತಾಂತ್ರಿಕ ಸ್ಥಾನಮಾನಗಳು ಮಹಿಳೆಯರಿಗೆ ಸಿಗಲೇ ಇಲ್ಲವೇನೋ? ಕೇವಲ ಮಾದಕತೆಯ ಅಂಶಗಳಿಗಾಗಿ ಮಹಿಳೆಯರನ್ನು ತೆರೆಯ ಮೇಲೆ ತರುವುದರಿಂದ ಅವರಿಗೆ ಉನ್ನತ ಸ್ಥಾನಮಾನವನ್ನು ನೀಡಿದಂತಾಗದು ಎನ್ನುವುದು ತಜ್ಞರ ಅಭಿಪ್ರಾಯ. ಹೀಗಿರುವಾಗ ಮಹಿಳೆಯರೂ ಮಾಧ್ಯಮದಲ್ಲಿ ವೃತ್ತಿ ಅವಕಾಶಗಳನ್ನು ಪಡೆಯಲು ಅಗತ್ಯ ಶೈಕ್ಷಣಿಕ ಅರ್ಹತೆ, ತರಬೇತಿ, ಕುಶಲತೆ ಬೆಳೆಸಿಕೊಳ್ಳಬೇಕಾದ್ದು ಅನಿವಾರ್ಯ.

ಪ್ರಸ್ತುತ ಅಧ್ಯಯನವು ಮಾಧ್ಯಮದಲ್ಲಿ ದುಡಿಯುವ ಮಹಿಳೆಯರ ಮಾನಸಿಕ, ಸಾಮಾಜಿಕ, ಆರ್ಥಿಕ ಸ್ಥಿತಿಗತಿಗಳನ್ನು ಅವಲೋಕಿಸುವುದಲ್ಲದೆ, ಅವರು ಪುರುಷ

ಸಹೋದ್ಯೋಗಿಗಳೊಂದಿಗೆ ಯಾವ ರೀತಿ ಕಾರ್ಯ ನಿರ್ವಹಿಸುತ್ತಾರೆ, ಅವರು ಎದುರಿಸುತ್ತಿರುವ ಸಮಸ್ಯೆಗಳೇನು, ಕೌಟುಂಬಿಕ ಪ್ರೋತ್ಸಾಹ ಸಿಗುತ್ತಿಲ್ಲವೇ, ಮಾಧ್ಯಮ ವೃತ್ತಿಯಲ್ಲಿ ಭದ್ರತೆಯನ್ನು ಹೊಂದಿದ್ದಾರೆಯೇ ಎನ್ನುವುದರ ಕುರಿತು ಬೆಳಕು ಚೆಲ್ಲುತ್ತದೆ. ಒಟ್ಟಿನಲ್ಲಿ ಮಾಧ್ಯಮದ ಕಾರ್ಯ ಚಟುವಟಿಕೆಗಳಲ್ಲಿ ಭಾಗಿಯಾಗಿರುವ ಮಾತ್ರವಲ್ಲ, ಕುಟುಂಬ ನಿರ್ವಹಣೆಯ ಹೊಣೆಯನ್ನು ಹೊತ್ತಿರುವ ಮಹಿಳೆಯರ ಏಳಿಗೆಗೆ ನಾಂದಿ ಹಾಡುವ ಮೂಲಕ ಅಳಿಲು ಸೇವೆ ಸಲ್ಲಿಸುವ ಕಾರ್ಯವನ್ನು ಈ ಅಧ್ಯಯನವು ಮಾಡಲಿದೆ.

ಸ್ತ್ರೀ–ಪುರುಷರ ನಡುವಣ ಎಲ್ಲಾ ತಾರತಮ್ಯಗಳನ್ನು ಕಾನೂನು ತೆಗೆದುಹಾಕಿದಲ್ಲಿ ಸಮಾಜದ ಜನರ ಕಣ್ಣು ತೆರೆದೀತು. ಮಹಿಳೆಗೆ ವಿದ್ಯಾಭ್ಯಾಸ, ಉದ್ಯೋಗ ಮತ್ತು ರಾಜಕೀಯ ಕ್ಷೇತ್ರಗಳ ಮೀಸಲಾತಿ ದೊರಕುವಂತಾಗಲು ಸಮೂಹ ಮಾಧ್ಯಮಗಳೂ ಪ್ರಾಮಾಣಿಕತೆಯಿಂದ ಪ್ರಯತ್ನಿಸಬೇಕಾಗಿದೆ. ಮಾತ್ರವಲ್ಲ, ಮಾಧ್ಯಮದಲ್ಲಿ ವೃತ್ತಿ ನಿರತೆಯರಾಗಿರುವ ಮಹಿಳೆಯರು ಮೇಲಧಿಕಾರಿಗಳ ಶೋಷಣೆ ಮತ್ತು ದಬ್ಬಾಳಿಕೆಯನ್ನು ಪ್ರತಿಭಟಿಸುವಂತಾದಾರು. ಸಮೂಹ ಮಾಧ್ಯಮದಲ್ಲಿ ವೃತ್ತಿನಿರತ ಮಹಿಳೆಯರು ಇತರ ಮಹಿಳೆಯರ ಮೇಲಾಗುತ್ತಿರುವ ಶೋಷಣೆಯನ್ನು ನಿಲ್ಲಿಸಲು ಸಾಧ್ಯವಿದೆ. ಮಹಿಳೆಯರು ಪುರುಷರಷ್ಟು ಶ್ರೇಷ್ಠರಲ್ಲ, ಅವರು ಅಬಲೆಯರು ಎನ್ನುವ ಪೂರ್ವಾಗ್ರಹ ಪೀಡೆಯಿಂದ ಸಮಾಜ ಹೊರಬರಬೇಕಾದ ಅನಿವಾರ್ಯತೆಯಿದೆ. ಪುರುಷರೇ ತುಂಬಿಕೊಂಡಿರುವ ಮಾಧ್ಯಮ ಕ್ಷೇತ್ರದಲ್ಲಿ ಹೆಣ್ಣಿಗೆ ಯಾವ ಸ್ಥಾನಮಾನ ದೊರಕೀತು ಎಂಬುದನ್ನು ಪ್ರತ್ಯೇಕವಾಗಿ ವಿವರಿಸಬೇಕಾಗಿಲ್ಲ (ನಂದಾ, ೧೯೯೯).

ಒಟ್ಟಿನಲ್ಲಿ ಹೆಣ್ಣಿನ ಶರೀರವೇ ಆಕೆಗೆ ಶತ್ರುವಾಗುವ ಸಾಧ್ಯತೆಯಿದ್ದು, ಸುದ್ದಿ ಸಂಗ್ರಹಕ್ಕೆ ಹೊರಹೋಗಬೇಕಾದ ಪರಿಸ್ಥಿತಿಯಲ್ಲಿ ಆಕೆಗೆ ಸಮಾಜದ ಜನರನ್ನು ಎದುರಿಸುವ ಸಾಮರ್ಥ್ಯ ಇರಬೇಕಾಗುತ್ತದೆ. ಶಾರೀರಿಕವಾಗಿ ಹೆಣ್ಣು ದುರ್ಬಲಳೇ ಆದರೂ ಆಕೆಯಲ್ಲೂ ಕ್ರಿಯಾಶೀಲತೆ, ಪ್ರತಿಭೆ ಹಾಗೂ ಸಾಮರ್ಥ್ಯಗಳಿವೆ. ನಮ್ಮ ಸಮಾಜ ಮಾಧ್ಯಮದಲ್ಲಿ ದುಡಿಯುವ ಮಹಿಳೆಯರ ಬಗ್ಗೆ ನಕಾರಾತ್ಮಕ ಧೋರಣೆಯನ್ನು ತಳೆಯುತ್ತಿರುವುದು ಆರೋಗ್ಯಕರ ಲಕ್ಷಣವಲ್ಲ. ಆಕೆ 'ಗಂಡುಬೀರಿ', 'ಎಲ್ಲ ಬಿಟ್ಟವಳು', 'ನಾಚಿಕೆ ಇಲ್ಲದವಳು' ಈ ರೀತಿಯ ಚುಚ್ಚುನುಡಿಗಳು ಮಾಧ್ಯಮದಲ್ಲಿ ದುಡಿಯುವ ಮಹಿಳೆಯ ಮನಸ್ಸಿಗೆ ಆಘಾತ ನೀಡುತ್ತದೆ. ಇಂತಹ ಸಂದರ್ಭದಲ್ಲಿ ಮಾಧ್ಯಮದಲ್ಲಿ ದುಡಿಯುವ ಮಹಿಳೆಯರ ಸ್ಥಿತಿಗತಿ ಕುರಿತಾಗಿನ ಈ ಸಂಶೋಧನಾತ್ಮಕ ಅಧ್ಯಯನವು ಅವರ ಏಳಿಗೆಯ ದೃಷ್ಟಿಯಲ್ಲಿ ಕೊಂಚ ಮಟ್ಟಿಗಾದರೂ ನೆರವಾದೀತು.

೧.೫ ಪ್ರಮೇಯಗಳು

೧. ಮಾಧ್ಯಮದಲ್ಲಿ ಪುರುಷ ಪ್ರಾಬಲ್ಯತೆಯಿರುವ ಕಾರಣ ಮಹಿಳೆಯರು ಅಲ್ಲಿ ದುಡಿಯುವ ಆವಕಾಶದಿಂದ ವಂಚಿತರಾಗುತ್ತಾರೆ.

೨. ಮಾಧ್ಯಮದಲ್ಲಿ ದುಡಿಯುವ ಮಹಿಳೆಯರು ಪದೋನ್ನತಿ ಹೊಂದಿದ್ದರೂ ಹೆಚ್ಚಿನ ಸ್ಪರ್ಧಾತ್ಮಕತೆಯಿದೆ.

೩. ಮಾಧ್ಯಮದಲ್ಲಿನ ನೂತನ ಆವಿಷ್ಕಾರಗಳಿಗೆ ಮಹಿಳೆಯರು ಹೊಂದಿಕೊಂಡಿದ್ದಾರೆ.

೪. ಮಾಧ್ಯಮ ಕ್ಷೇತ್ರದಲ್ಲಿ ಭದ್ರತೆಯಿಲ್ಲ ಎನ್ನುವ ಕಾರಣಕ್ಕೆ ಮಾಧ್ಯಮದಲ್ಲಿ ದುಡಿಯುವುದಕ್ಕೆ ಮಹಿಳೆಯರು ಹಿಂಜರಿಯುತ್ತಿಲ್ಲ.

೫. ಕುಟುಂಬ ನಿರ್ವಹಣೆಯ ಜೊತೆಗೆ ಪಂಥಾಹ್ವಾನ ನೀಡುವಂತಿರುವ ಕೆಲಸವನ್ನು ಮಹಿಳೆಯರು ಮಾಧ್ಯಮದಲ್ಲಿ ಮಾಡಬಲ್ಲರು.

೬. ಶಿಕ್ಷಣ, ಸಾಮಾಜಿಕ ಚಟುವಟಿಕೆ, ಸಂವಹನ ಇತ್ಯಾದಿಗಳಲ್ಲಿ ಸಮಾನ ಅವಕಾಶಗಳು ಇಲ್ಲದಿರುವುದು ಮಾಧ್ಯಮ ಕ್ಷೇತ್ರದಲ್ಲಿ ಮಹಿಳೆಯರನ್ನು ತಾರತಮ್ಯಕ್ಕೊಳಗಾಗುವಂತೆ ಮಾಡಿದೆ.

೭. ತನ್ನ ಸಾಮರ್ಥ್ಯವನ್ನು ತೋರಿಸಲು ಮಾಧ್ಯಮದಲ್ಲಿ ದುಡಿಯುವ ಮಹಿಳೆಯರಿಗೆ ಕೌಟುಂಬಿಕ, ಸಾಮಾಜಿಕ ನಿರ್ಬಂಧಗಳು ಅಡ್ಡಿಯಾಗುವುವು.

೮. ಮಾಧ್ಯಮದಲ್ಲಿ ದುಡಿಯುವ ಮಹಿಳೆಯರು ವೃತ್ತಿ ಕ್ಷೇತ್ರದಲ್ಲಿ ಮಾನಸಿಕ/ಲೈಂಗಿಕ ಕಿರುಕುಳಕ್ಕೊಳಗಾದರೂ ಉದ್ಯೋಗದ ಭದ್ರತೆಯ ದೃಷ್ಟಿಯಿಂದ ಮೌನ ವಹಿಸುತ್ತಿದ್ದಾರೆ.

೯. ಮಾಧ್ಯಮ ಸಂಸ್ಥೆಗಳು/ಸರಕಾರಗಳಿಂದ ಮಾಧ್ಯಮ ವೃತ್ತಿ ನಿರತ ಮಹಿಳೆಯರಿಗಾಗಿ ಹೆಚ್ಚಿನ ಸೌಲಭ್ಯ ನೀಡಿದಲ್ಲಿ ಮಾಧ್ಯಮದಲ್ಲಿ ದುಡಿಯುವ ಮಹಿಳೆಯರ ಸಂಖ್ಯೆ ಹೆಚ್ಚಾದೀತು.

೧೦. ಈಗಾಗಲೇ ಮಾಧ್ಯಮದಲ್ಲಿ ನೆಲೆಯೂರಿರುವ ಮಹಿಳೆಯರ ಸಹಾಯ, ಮಾರ್ಗದರ್ಶನ ಹೊಸದಾಗಿ ವೃತ್ತಿಗೆ ಸೇರಬಯಸುವವರಿಗೆ ದೊರಕಿದರೆ ಅವರ ಕಾರ್ಯದಕ್ಷತೆ ಹೆಚ್ಚುವ ಸಾಧ್ಯತೆ ಇದೆ.

೧೧. ಸಮೂಹ ಮಾಧ್ಯಮದಲ್ಲಿ ವೃತ್ತಿ ನಿರತ ಮಹಿಳೆಯರಿಂದ ಮಾಧ್ಯಮಗಳಿಂದಲೇ ಮಹಿಳೆಯರ ಮೇಲಾಗುತ್ತಿರುವ ಶೋಷಣೆಯನ್ನು ನಿಲ್ಲಿಸಲು ಸಾಧ್ಯವಿದೆ.

೧.೬. ಮಾಹಿತಿ ಮೂಲ ಮತ್ತು ವಿಧಾನ

'ಮಾಧ್ಯಮದಲ್ಲಿ ದುಡಿಯುವ ಮಹಿಳೆ–ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಒಂದು ಅಧ್ಯಯನ' ಈ ಸಂಶೋಧನಾತ್ಮಕ ಅಧ್ಯಯನ ಸಮೀಕ್ಷಾ ಸಂಶೋಧನ ತಂತ್ರದ ಆಧಾರದಿಂದ ಹಮ್ಮಿಕೊಳ್ಳಲಾಯಿತು. ಈ ವಿಧಾನವನ್ನು ನೇರಸಂದರ್ಶನ ಮತ್ತು ಪ್ರಶ್ನಾವಳಿ ಮೂಲಕ ದಕ್ಷಿಣ ಕನ್ನಡ ಜಿಲ್ಲೆಯಲ್ಲಿನ ಪ್ರಮುಖ ಸಮೂಹ ಮಾಧ್ಯಮಗಳಾದ ಪತ್ರಿಕೆ, ನಿಯತಕಾಲಿಕೆ, ಬಾನುಲಿ, ದೂರದರ್ಶನ ಹಾಗೂ ಜನಪದ ಕಲಾಮಾಧ್ಯಮಗಳಲ್ಲಿ ದುಡಿಯುವ ಮಹಿಳೆಯರ ಅಭಿಪ್ರಾಯ ಸಂಗ್ರಹಕ್ಕೆ ಬಳಸಲಾಯಿತು. ಅಲ್ಲದೆ ಅವರ ಹಿನ್ನೆಲೆ, ವಿದ್ಯಾಭ್ಯಾಸ, ಮಾಧ್ಯಮದಲ್ಲಿ ಸಿಗುತ್ತಿರುವ ಅವಕಾಶ, ವೇತನ ತಾರತಮ್ಯ, ಭದ್ರತೆ, ವೃತ್ತಿಯಲ್ಲಿನ ಆಂತರಿಕ ಸಮಸ್ಯೆ, ಬಾಹ್ಯ ಸಮಸ್ಯೆಗಳ ಕುರಿತಾಗಿ ಪ್ರಶ್ನೆಗಳನ್ನು ಕೇಳಲಾಗಿದ್ದು, ಸಂವಾದಿಗಳಿಂದ ಬಂದ ಉತ್ತರ ಅವರ ಸ್ಥಿತಿಗತಿಯ ಬಗ್ಗೆ ಸಂಪೂರ್ಣ ಚಿತ್ರಣವನ್ನು ನೀಡಿದೆ. ಇಷ್ಟು ಮಾತ್ರವಲ್ಲದೆ ಆನುಷಂಗಿಕ ಮಾಹಿತಿಯನ್ನು ಈ ಅಧ್ಯಯನಕ್ಕೆ ಅಳವಡಿಸಲಾಗಿದೆ.

ಪ್ರಾಥಮಿಕ ಮಾಹಿತಿಯು ಸಂಶೋಧನೆಗೆ ಒಳಪಡುವ ಸಂಗತಿ, ವ್ಯಕ್ತಿ, ಕುಟುಂಬ, ಸಮುದಾಯ ಇತ್ಯಾದಿಗಳಿಗೆ ಸಂಬಂಧಿಸಿದ ಮಾಹಿತಿಯನ್ನು ನೇರವಾಗಿ ವ್ಯಕ್ತಿ, ಕುಟುಂಬ, ಸಮುದಾಯಗಳಿಂದ ಪಡೆಯುವುದಾಗಿದೆ. ಪ್ರಶ್ನಾವಳಿ, ಸಂದರ್ಶನ, ಅವಲೋಕನ ಮತ್ತು ಗುಂಪುಚರ್ಚೆ ಮೂಲಕ ಪ್ರಾಥಮಿಕ ಮಾಹಿತಿಯನ್ನು ಸಂಗ್ರಹಿಸಬಹುದಾಗಿದ್ದು, ಪ್ರಸ್ತುತ ಅಧ್ಯಯನಕ್ಕೆ ಅದನ್ನು ಅಳವಡಿಸಲಾಗಿದೆ. ಇಲ್ಲಿ ಬಳಸಲಾಗಿರುವ ಪ್ರಶ್ನಾವಳಿ ವಿಧಾನದಲ್ಲಿ ಪ್ರಶ್ನೆಗಳ ಜತೆ ಉತ್ತರ ಮತ್ತು ಉತ್ತರದ ಜತೆಗೆ ಸಂಕೇತಗಳನ್ನು ನೀಡಲಾಗಿದೆ. ಪ್ರಶ್ನಾವಳಿಯನ್ನು ತುಂಬುವವರಿಗೂ ಇದು ಉತ್ತರಿಸಲು ನೆರವಾಗಿದೆ ಎನ್ನಬಹುದು. ಈ ಅಧ್ಯಯನಕ್ಕೆ ಅಳವಡಿಸಲಾದ ಸಂದರ್ಶನ ವಿಧಾನದಲ್ಲಿ ಮಾಧ್ಯಮದಲ್ಲಿ ದುಡಿಯುವ ಮಹಿಳೆಯರನ್ನು ನೇರವಾಗಿ ಭೇಟಿ ಮಾಡಿ ಮತ್ತು ದೂರವಾಣಿ ಮೂಲಕ ಮಾತನಾಡಿಸಿ ಮಾಹಿತಿಯನ್ನು ಸಂಗ್ರಹಿಸಲಾಗಿದೆ. ಸಂದರ್ಶನದ ವಿಧಗಳಲ್ಲಿ ಒಂದಾದ ಚೌಕಟ್ಟುಳ್ಳ ಸಂದರ್ಶನವನ್ನು ಮಾಹಿತಿ ಸಂಗ್ರಹಣೆಗೆ ಉಪಯೋಗಿಸಲಾಗಿದೆ. ಅಲ್ಲದೆ ಪ್ರಾಥಮಿಕ ಮಾಹಿತಿ ವಿಧಾನಗಳಾದ ಸರಳ ಅವಲೋಕನ, ಶಿಸ್ತು ಬದ್ಧ ಅವಲೋಕನ, ಗುಂಪುಚರ್ಚೆಗಳು ಮಾಹಿತಿ ಸಂಗ್ರಹಕ್ಕೆ ನೆರವಾಗಿವೆ.

ಮಾಧ್ಯಮದಲ್ಲಿ ದುಡಿಯುವ ಮಹಿಳೆಯರ ಸ್ಥಿತಿಗತಿಯನ್ನು ತಿಳಿಯಲು ಅನುಷಂಗಿಕ ಮಾಹಿತಿ ಸಂಗ್ರಹ ವಿಧಾನವನ್ನೂ ಈ ಅಧ್ಯಯನದಲ್ಲಿ ಅಳವಡಿಸಲಾಗಿದೆ. "ಸಂಶೋಧನೆಗೆ ಒಳಪಡುವ ಸಂಗತಿಗಳಿಗೆ ಸಂಬಂಧಿಸಿದ ಮಾಹಿತಿಯನ್ನು ಅವುಗಳ ಎರಡನೇ ಮೂಲದಿಂದ ಪಡೆಯುವುದು ಎನ್ನುವ ಅರ್ಥದಲ್ಲಿ ಅನುಷಂಗಿಕ ಮಾಹಿತಿ ಎನ್ನುವ ಪದ ಬಳಕೆಯಾಗುತ್ತದೆ"(ಚಂದ್ರಶೇಖರ, ೨೦೦೧).

ಅನುಷಂಗಿಕ ದಾಖಲೆಗಳ ಪಟ್ಟಿಯಲ್ಲಿ ಬರುವ ಗ್ರಂಥಗಳು, ಪತ್ರಿಕಾಲೇಖನಗಳು, ದಾಖಲೆಗಳು, ವರದಿಗಳು, ವೈಯಕ್ತಿಕ ದಾಖಲೆಗಳು, ಅಂತರ್ಜಾಲದಲ್ಲಿನ ಲೇಖನಗಳನ್ನು ಈ ಅಧ್ಯಯನದಲ್ಲಿ ಉಪಯೋಗಿಸಲಾಗಿದೆ.

೧.೬ ಅಧ್ಯಯನದ ಇತಿಮಿತಿಗಳು

೧. ಈ ಅಧ್ಯಯನದಲ್ಲಿ ಅಳವಡಿಸಲಾದ ನೇರ ಸಂದರ್ಶನ, ಪ್ರಶ್ನಾವಳಿಗಳು ದಕ್ಷಿಣ ಕನ್ನಡ ಜಿಲ್ಲೆಯಲ್ಲಿನ ಮಾಧ್ಯಮದಲ್ಲಿ ದುಡಿಯುವ ಮಹಿಳೆಯರ ಸ್ಥಿತಿಗತಿಯನ್ನು ಸಂಪೂರ್ಣವಾಗಿ ತಿಳಿಸಲಾರದು.

೨. ಮಾನಸಿಕ ಒತ್ತಡ ನೀಡಿಕೆಯ ಕುರಿತಾಗಿನ ಮಾಹಿತಿಯನ್ನು ಮಾಧ್ಯಮದ ವೃತ್ತಿನಿರತ ಮಹಿಳೆಯರು ನೈಜವಾಗಿ ನೀಡಲಾರರು.

೩. ಸಹೋದ್ಯೋಗಿಗಳ/ ಮೇಲಧಿಕಾರಿಗಳ ಲೈಂಗಿಕ ಕಿರುಕುಳದ ಕುರಿತಾಗಿ ಉದ್ಯೋಗದ ಭದ್ರತೆಯ ದೃಷ್ಟಿಯಿಂದ ನೇರವಾಗಿ ಪ್ರಸ್ತಾಪಿಸಲಾರರು.

೪. ನಿಗದಿತವಾಗಿ ದೊರೆಯದ ವೇತನ, ರಜಾ ಸೌಲಭ್ಯ ಇವೇ ಮೊದಲಾದವುಗಳ ಕುರಿತಾಗಿ ನೀಡಿದ ಉತ್ತರಗಳಲ್ಲಿ ಖಚಿತತೆ ಕಡಿಮೆ.

೫. ವಿವಿಧ ಮಾಧ್ಯಮ ಸಂಸ್ಥೆಗಳಲ್ಲಿ ಮಹಿಳೆಯರ ಸ್ಥಿತಿ ಚೆನ್ನಾಗಿದ್ದರೆ, ಇನ್ನು ಕೆಲವು ಸಂಸ್ಥೆಗಳಲ್ಲಿ ಚೆನ್ನಾಗಿಲ್ಲ. ಹಾಗಾಗಿ ಈ ಅಧ್ಯಯನ ಪರಿಪೂರ್ಣ ಅಧ್ಯಯನವಾಗಲಾರದು.

೬. ಜನಪದ ಕಲಾ ಮಾಧ್ಯಮಗಳಾದ ಯಕ್ಷಗಾನ, ನಾಟಕ, ಹರಿಕಥೆ, ಬೀದಿನಾಟಕ ಮೊದಲಾದವುಗಳು ದಕ್ಷಿಣ ಕನ್ನಡ ಜಿಲ್ಲೆಯಲ್ಲಿದ್ದರೂ ಮುದ್ರಣ, ಬಾನುಲಿ, ದೂರದರ್ಶನ(ಖಾಸಗಿ/ಸರಕಾರಿ) ಮಾಧ್ಯಮ ಸಂಸ್ಥೆಗಳು ಅವುಗಳ ವಿಭಾಗೀಯ ಕಚೇರಿಗಳು ಹೆಚ್ಚಿನ ಸಂಖ್ಯೆಯಲ್ಲಿರುವುದರಿಂದ ಅವುಗಳಿಗೆ ಹೆಚ್ಚಿನ ಒತ್ತನ್ನು ನೀಡಲಾಗಿದೆ.

೭. ಹೆಚ್ಚಿನ ಮಹಿಳೆಯರು ದೃಶ್ಯ ಮಾಧ್ಯಮದಲ್ಲಿ ಮಾನಸಿಕ ಒತ್ತಡ ಅಥವಾ ಲೈಂಗಿಕ ಕಿರುಕುಳವನ್ನು ಒಟ್ಟಿನಲ್ಲಿ ಹದಗೆಟ್ಟ ಪರಿಸ್ಥಿತಿಯನ್ನು ಹೆಚ್ಚಾಗಿ ಅನುಭವಿಸುತ್ತಿದ್ದು, ಅಧ್ಯಯನ ಕೈಗೊಳ್ಳಲಾದ ದಕ್ಷಿಣ ಕನ್ನಡ ಜಿಲ್ಲೆಯ ವ್ಯಾಪ್ತಿಯಲ್ಲಿ ಕೆಲವೇ ಕೆಲವು ಉಪಗ್ರಹ ವಾಹಿನಿಗಳ ವಿಭಾಗೀಯ ಕಚೇರಿಗಳಲ್ಲಿ ದುಡಿಯುವ ಮಹಿಳೆಯರ ಸಂಖ್ಯೆ ಗಣನೀಯ ಮಟ್ಟದಲ್ಲಿ ಕಡಿಮೆ ಎನ್ನುವುದು ಅಧ್ಯಯನ ಸಂದರ್ಭದಲ್ಲಿ ತಿಳಿದು ಬಂದ ವಿಷಯ. ಹೀಗಾಗಿ ಟಿ.ವಿ. ಮಾಧ್ಯಮದಲ್ಲಿ ದುಡಿಯುವ ಮಹಿಳೆಯರ ಪರಿಸ್ಥಿತಿಯ ನೈಜ ಚಿತ್ರಣವನ್ನು ನೀಡಲು ಈ ಅಧ್ಯಯನಕ್ಕೆ ಸಾಧ್ಯವಾಗಿಲ್ಲ ಎನ್ನಬಹುದು.

೮. ಸಮೂಹ ಮಾಧ್ಯಮಗಳಾದ ಟಿ.ವಿ. ಹಾಗೂ ಪತ್ರಿಕೆಗಳಲ್ಲಿ ಮಹಿಳೆಯರಿಗೆ ರೆಡಿ ಅಸೈನ್‌ಮೆಂಟ್‌ಗಳನ್ನು ನೀಡುವುದರಿಂದ ಅವರ ವೈಯಕ್ತಿಕ ಅಭಿರುಚಿಗೆ ಅವಕಾಶ ನೀಡಲಾಗುತ್ತಿಲ್ಲ ಎನ್ನುವುದು ಅಧ್ಯಯನದಿಂದ ತಿಳಿದು ಬಂದಿದೆ. ಇದರಿಂದ ಮಹಿಳೆಯರಿಗೆ ಪಂಥಾಹ್ವಾನ ನೀಡುವಂತಿರುವ ಕರ್ತವ್ಯಗಳನ್ನು ಪೂರೈಸಲು ಸಾಮರ್ಥ್ಯವಿದ್ದರೂ ಅದಕ್ಕೆ ಅವಕಾಶ ಸಿಗುವುದಿಲ್ಲ. ಇಂತಹ ಮಿತಿಯು ಈ ಅಧ್ಯಯನಕ್ಕೆ ಸಂಬಂಧಿಸಿದ ಪ್ರಮುಖ ಮಾಹಿತಿಯನ್ನು ಪಡೆಯಲು ತೊಡಕನ್ನುಂಟು ಮಾಡಿದೆ.

೯. ಪ್ರಸ್ತುತ ಅಧ್ಯಯನದ ವ್ಯಾಪ್ತಿಯಲ್ಲಿ ದಕ್ಷಿಣ ಕನ್ನಡ ಜಿಲ್ಲೆಯನ್ನು ಮಾತ್ರ ಗಣನೆಗೆ ತೆಗೆದುಕೊಂಡಿರುವ ಕಾರಣ ಈ ಜಿಲ್ಲೆಯಲ್ಲಿ ಮಾಧ್ಯಮದಲ್ಲಿ ದುಡಿಯುವ ಮಹಿಳೆಯರ ಸಂಖ್ಯೆ ಬೆಂಗಳೂರಿನಂತಹ ನಗರಕ್ಕೆ ಹೋಲಿಸಿದಲ್ಲಿ ಬಹುಕಡಿಮೆಯಿದೆ ಎನ್ನುವುದು ಅಧ್ಯಯನದಿಂದ ಸ್ಪಷ್ಟವಾಗಿದೆ. ಹೀಗಾಗಿ ಅಧ್ಯಯನಕ್ಕೆ ಕಡಿಮೆ ಸಂಖ್ಯೆಯ ಮಹಿಳೆಯರು ಸಿಕ್ಕಿದ ಕಾರಣ ಅವರ ಸಮಸ್ಯೆಗಳ ಸಂಪೂರ್ಣ ಚಿತ್ರಣ ದೊರೆತಿಲ್ಲ.

ಉಲ್ಲೇಖಗಳು

೧. ನವಿಲೂರು ತೇಜಸ್ವಿ, ೨೦೦೭, "ಸಂವಹನ ಸಿದ್ಧಾಂತ ಹಾಗೂ ಸಂಶೋಧನೆ", ಮಾನಸ ಗಂಗೋತ್ರಿ ಪ್ರಕಾಶನ, ಮೈಸೂರು.

೨. ಡಿ.ಎಸ್. ನಂದಾ, ೧೯೯೯, "ಮಹಿಳೆ ಮತ್ತು ಅಗ್ನಿ", ವಿಕಾಸ ಪ್ರಕಾಶನ, ಬೆಂಗಳೂರು.

೩. ಶಶಿಕುಮಾರ್ ಜ್ಯೋತಿ, ೨೦೦೭ "ಮಹಿಳಾ ಸಾಮಾಜಿಕತೆ", ಕನ್ನಡ ವಿ.ವಿ. ಪ್ರಕಾಶನ,ಹಂಪಿ.

೪. ವರ್ಮಾ ಎನ್.ಕೆ. ೨೦೦೬, "ಮೀಡಿಯ ಆ್ಯಂಡ್ ವಿಮನ್", ಮೋಹಿತ್ ಪಬ್ಲಿಕೇಶನ್ಸ್, ನ್ಯೂಡೆಲ್ಲಿ.

೫. ಬಾಲಸುಬ್ರಹ್ಮಣ್ಯನ್ ವಿಮಲ್, ೧೯೮೮, "ಮಿರರ್ ಇಮೇಜ್", ಸಿಇಡಿ ಪಬ್ಲಿಕೇಶನ್ಸ್, ಮುಂಬಯಿ.

೬. ಚಂದ್ರಶೇಖರ್ ಡಿ.ಎಸ್,೨೦೦೧, "ಸಮಾಜ ವಿಜ್ಞಾನಗಳಲ್ಲಿ ಸಂಶೋಧನಾ ವಿಧಾನಗಳು", ಪ್ರಸಾರಾಂಗ ಕನ್ನಡ ವಿ.ವಿ.ಹಂಪಿ ಪ್ರಕಾಶನ ,ಮೈಸೂರು.

೭. ಹನ್ಸ್ ವಿ ಬಾಸಿಲ್, ೨೦೧೦, "ವಿಮೆನ್, ಹೆಲ್ತ್ ಆಂಡ್ ಪ್ರೊಡಕ್ಟಿವಿಟಿ",ಸರ್ಕಾರ್ ಸಿದ್ಧಾರ್ಥ ಮತ್ತು ಐಸಾಕ್ ವ್ಯಾಕು ಅಚೀಂಪಾಂಗ್,"ಜೆಂಡರ್ ಪವರ್ಟಿ ಆಂಡ್ ಸಸ್ಟನೇಬಲ್ ಲೈವ್ಲಿಹುಡ್",ಅರೈಸ್ ಪಬ್ಲಿಷರ್ಸ್ ಆಂಡ್ ದಿಸ್ಟ್ರಿಬ್ಯೂಟರ್ಸ್,ನ್ಯೂಡೆಲ್ಲಿ.

******

ಅಧ್ಯಾಯ ೨

ಮಾಧ್ಯಮ, ಮಹಿಳೆ ಮತ್ತು ಸಮಾಜ

೨.೧ ಸಮೂಹ ಮಾಧ್ಯಮ

೨.೧.೧ ಸಮೂಹ ಮಾಧ್ಯಮದ ಗುಣಲಕ್ಷಣಗಳು

೨.೧.೨ ಸಮೂಹ ಮಾಧ್ಯಮದ ಕಾರ್ಯಗಳು

೨.೧.೩ ಸಮೂಹ ಮಾಧ್ಯಮದ ವಿಧಗಳು

೨.೧.೪ ಸಮೂಹ ಮಾಧ್ಯಮ ಮತ್ತು ಸಾಮಾಜಿಕ ಪರಿವರ್ತನೆ

೨.೧.೫ ಮಾಧ್ಯಮಗಳ ಜಾಗತೀಕರಣ

೨.೨ ಭಾರತದಲ್ಲಿ ಮಾಧ್ಯಮರಂಗ

೨.೨.ಅ ಪತ್ರಿಕಾರಂಗ

೨.೨.ಆ ಬಾನುಲಿ

೨.೨.ಇ ಟೆಲಿಫಿಷನ್

೨.೨.ಈ ಸಿನಿಮಾ

೨.೨.ಉ ಜಾನಪದ ಮಾಧ್ಯಮಗಳು

೨.೨.ಊ ಅಂತರ್ಜಾಲ

೨.೨.೧ ಮಾಧ್ಯಮ ಕಾನೂನು

೨.೨.೨. ಪತ್ರಕರ್ತರ ಕರ್ತವ್ಯಗಳು ಮತ್ತು ಜವಾಬ್ದಾರಿ

೨.೨.೩ ಪತ್ರಿಕೋದ್ಯಮ ಶಿಕ್ಷಣ

೨.೨.೪ ಮಹಿಳೆ, ಶಿಕ್ಷಣ ಮತ್ತು ಸಮಾಜ

೨.೨.೫ ದುಡಿಯುವ ಮಹಿಳೆಯ ಸ್ಥಿತಿಗತಿ

೨.೨.೬ ಮಾಧ್ಯಮದಲ್ಲಿ ಮಹಿಳೆ

೨.೨.೭ ಮಾಧ್ಯಮದಲ್ಲಿ ದುಡಿಯುವ ಮಹಿಳೆ ಎದುರಿಸುತ್ತಿರುವ ಸವಾಲುಗಳು

ಅಧ್ಯಾಯ ೨

ಮಾಧ್ಯಮ, ಮಹಿಳೆ ಮತ್ತು ಸಮಾಜ

೨.೧ ಸಮೂಹ ಮಾಧ್ಯಮ

ಈ ಸಮಕಾಲೀನ ಯುಗವನ್ನು "ಸಂವಹನ ಯುಗ', "ಮಾಹಿತಿಯುಗ', "ಸೈಬರ್ ಯುಗ', "ಸಂಪರ್ಕ ಜಾಲಯುಗ' ಹೀಗೆ ನಾನಾ ಹೆಸರುಗಳಿಂದ ಕರೆಯುವುದಿದೆ. ಹಲವಾರು ಸಮೂಹ ಸಂವಹನಗಳ ಮೂಲಕ ಮಾಹಿತಿಯು ಸ್ಫೋಟವಾಗುವುದು. ಸಮಾಜದ ಅಸಂಖ್ಯಾತ ಬಳಕೆದಾರರಿಗೆ ಮಾಹಿತಿಯನ್ನು ಒದಗಿಸುವಲ್ಲಿ ಮಾಧ್ಯಮಗಳು ಪ್ರಮುಖ ಪಾತ್ರವನ್ನು ವಹಿಸುತ್ತವೆ. ಈ ಸಮೂಹ ಮಾಧ್ಯಮ ಎಂಬ ಪದವನ್ನು "ಸಮೂಹ ಸಂವಹನ' ಎಂಬ ಶಬ್ದದಿಂದ ರೂಪಿಸಲಾಗಿದೆ.

೨.೧.೧ ಸಮೂಹ ಮಾಧ್ಯಮಗಳ ಗುಣಲಕ್ಷಣಗಳು

ಬಹುಹಿಂದೆ ಹಳ್ಳಿಗಳಲ್ಲಿ ತಮ್ಮ ಅಕ್ಕಪಕ್ಕದ ಜನರೊಡನೆ, ಬಂಧುಗಳೊಡನೆ ಜನರು ಮುಖಾಮುಖಿ ಸಂಬಂಧಗಳನ್ನು ಇರಿಸಿಕೊಂಡಿದ್ದರು. ಆದರೆ ಸಂವಹನ ಕ್ರಾಂತಿ, ಸಂಪರ್ಕಕ್ರಾಂತಿಗಳಿಂದಾಗಿ ಜನರಿಗೆ ತಮ್ಮ ಸಮುದಾಯ ಮಾತ್ರವಲ್ಲದೆ, ಹೊರಗಿನ ವ್ಯಕ್ತಿಗಳೊಡನೆ ಸಂಪರ್ಕ ಏರ್ಪಟ್ಟು ಪ್ರಪಂಚವೇ ಒಂದು ಜಾಗತಿಕ ಗ್ರಾಮವಾಗಿ ಮಾರ್ಪಾಟಾಗಿದೆ. ಒಟ್ಟಿನಲ್ಲಿ ಸಮೂಹ ಮಾಧ್ಯಮಗಳು ಸಮಾಜದಲ್ಲಿ ಬದಲಾವಣೆಯನ್ನು ತಂದಿವೆ.

ತಾಂತ್ರಿಕ ಬೆಳವಣಿಗೆಯಿಂದಾಗಿ ಬೃಹತ್ ಪ್ರಮಾಣದಲ್ಲಿ ಉತ್ಪಾದಿಸಲಾದ ಮಾಹಿತಿಯನ್ನು ತಕ್ಷಣವೇ ಜಗತ್ತಿನಾದ್ಯಂತ ವಿತರಿಸಲು ಸಮೂಹ ಮಾಧ್ಯಮಗಳಿಂದ ಸಾಧ್ಯವಾಗಿದೆ. ಇದರಿಂದಾಗಿ ಜನರ ಜೀವನಶೈಲಿ, ಆಶೋತ್ತರಗಳಲ್ಲಿ ಹಲವು ರೀತಿಯ ಬದಲಾವಣೆಗಳಾಗಿವೆ. ಗ್ರಹಿಕೆ, ಪ್ರಚೋದನೆ ಮತ್ತು ಮನೋಪ್ರಕ್ರಿಯೆಗಳನ್ನು ಒಳಗೊಂಡ ಮಾನವ ಸಂಬಂಧವೇ ಸಂವಹನ. ಮಾಧ್ಯಮಗಳು ನೀಡುವಂತಹ ಮಾಹಿತಿಗಳು ಜನರ ಮೇಲೆ ನೇರವಾಗಿ ಅಥವಾ ಪರೋಕ್ಷವಾಗಿ ಪರಿಣಾಮ ಬೀರುತ್ತವೆ.

ಸಂವಹನದ ಉದ್ದೇಶವು ಸಾರ್ವತ್ರಿಕವಾಗಿರುತ್ತದೆ ಅಥವಾ ತ್ವರಿತವಾಗಿರುತ್ತದೆ ಅಥವಾ ಕ್ಷಣಿಕವಾಗಿರುತ್ತದೆ. ತಾಂತ್ರಿಕ ಬೆಳವಣಿಗೆಗಳ ಮೂಲಕ ಮಾಧ್ಯಮಕ್ಕೆ ಹೆಚ್ಚುತ್ತಿರುವ ಬೇಡಿಕೆಗಳನ್ನು ಪೂರೈಸಲು ಸಾಧ್ಯವಾಗಿದೆ. ಸಮೂಹ ಮಾಧ್ಯಮಗಳಲ್ಲಿ ಬರುವ ಸಂದೇಶಗಳು ಹೆಚ್ಚಾಗಿ ಕ್ಷಣಿಕವಾಗಿರುತ್ತವೆ.

೨.೧.೨ ಸಮೂಹ ಮಾಧ್ಯಮಗಳ ಕಾರ್ಯಗಳು

ಸಂವಹನ ವಿಜ್ಞಾನಿ ಹೆರಾಲ್ಡ್ ಲಾಸ್‌ವೆಲ್‌ಪ್ರಕಾರ ಗುರುತಿಸಲಾದ ಸಮೂಹ ಮಾಧ್ಯಮದ ೩ ಕಾರ್ಯಗಳು ಈ ಕೆಳಗಿನಂತಿವೆ.

ಅ. ಪರಿಸರದ ಕಣ್ಗಾವಲು

ಆ. ಮಾಹಿತಿಯ ವ್ಯಾಖ್ಯಾನ

ಇ. ಸಾಮಾಜಿಕ ಪರಂಪರೆಯನ್ನು ಒಂದು ತಲೆಮಾರಿನಿಂದ ಇನ್ನೊಂದು ತಲೆಮಾರಿಗೆ ವರ್ಗಾಯಿಸುವುದು. ಮೇಲಿನ ಮೂರು ಕಾರ್ಯಗಳಲ್ಲದೆ ಮನೋರಂಜನಾ ಕಾರ್ಯವನ್ನೂ ಇತ್ತೀಚೆಗೆ ಗುರುತಿಸಲಾಗಿದೆ (ಜೋಸೆಫ್, ೨೦೦೭).

೨.೧.೩ ಸಮೂಹ ಮಾಧ್ಯಮದ ವಿಧಗಳು

ಸಾಮಾನ್ಯವಾಗಿ ಸಮೂಹ ಮಾಧ್ಯಮಗಳಲ್ಲಿ ೫ ರೀತಿಯ ಗುಂಪುಗಳನ್ನು ಕಾಣಬಹುದು.

ಅ. ಮುದ್ರಣ ಮಾಧ್ಯಮ

ಆ. ಸಿನಿಮಾ

ಇ. ರೇಡಿಯೊ

ಈ. ಟೆಲಿವಿಷನ್

ಇತ್ತೀಚೆಗೆ ಈ ಗುಂಪಿಗೆ ನ್ಯೂ ಮೀಡಿಯಾ(ನವ ಮಾಧ್ಯಮ)ದ ಸೇರ್ಪಡೆಯಾಗಿದೆ. ಸೆಲ್ಯುಲರ್ ಫೋನ್, ಉಪಗ್ರಹಗಳು, ಕಂಪ್ಯೂಟರ್‌ಗಳು, ವಿದ್ಯುನ್ಮಾನ ಟಪಾಲು ಮತ್ತು ಅಂತರ್ಜಾಲ ಈ ಗುಂಪಿಗೆ ಸೇರುತ್ತವೆ. ಈ ಪ್ರಕ್ರಿಯೆಯಲ್ಲಿ ಮರುಮಾಹಿತಿ, ಮಾಹಿತಿ ವಿನಿಮಯ ಮತ್ತು ಪಾಲ್ಗೊಳ್ಳುವಿಕೆಗೆ ಅವಕಾಶವಿರುತ್ತದೆ.

೨.೧.೪ ಮಾಧ್ಯಮಗಳು ಮತ್ತು ಸಾಮಾಜಿಕ ಪರಿವರ್ತನೆ

"ಅಭಿವೃದ್ಧಿಹೊಂದಿದ ದೇಶಗಳಲ್ಲಿನ ಜನರ ಕರ್ತವ್ಯಗಳು ಅಭಿವೃದ್ಧಿಶೀಲ ದೇಶಗಳ ಜನರಿಗಿಂತ ಭಿನ್ನವಾಗಿರುತ್ತವೆ. ಉದಾಹರಣೆಗೆ, ಅಭಿವೃದ್ದಿ ಹೊಂದಿದ ದೇಶಗಳ ಸಮೂಹ ಮಾಧ್ಯಮಗಳಿಗೆ ಬಹುದೊಡ್ಡ ಓದುಗ, ವೀಕ್ಷಕ ಸಮೂಹವಿದ್ದರೆ ಅಭಿವೃದ್ಧಿಶೀಲ ರಾಷ್ಟ್ರಗಳಲ್ಲಿ ಚಿಕ್ಕ ಹರಹನ್ನು ಹೊಂದಿರುತ್ತವೆ. ಅಲ್ಲದೆ, ಅಭಿವೃದ್ಧಿ ಶೀಲ ದೇಶಗಳಲ್ಲಿ ಸಾಕಷ್ಟು ಅಂತರ್‌ದ್ವಂದ್ವಗಳಿದ್ದು, ಅಲ್ಲಿನ ಉನ್ನತ ವರ್ಗವು ಮಾತ್ರ ಅಭಿವೃದ್ಧಿ ಹೊಂದಿದ ದೇಶಗಳ ಜನರಿಗೆ ಸಮಾನವಾದಷ್ಟು ಹೆಚ್ಚಿನ ಪ್ರಮಾಣದಲ್ಲಿ ಮಾಧ್ಯಮಗಳು ತೆರೆದುಕೊಂಡಿದ್ದರೆ, ಬಹಳಷ್ಟು ಜನರಿಗೆ ಮಾಧ್ಯಮಗಳು ತಲುಪುವುದೇ ಇಲ್ಲ. ಮುದ್ರಣ ಮಾಧ್ಯಮಗಳಾದ ವೃತ್ತಪತ್ರಿಕೆಗಳು ಮತ್ತು ನಿಯತಕಾಲಿಕಗಳಿಗಿಂತ ಎಲೆಕ್ಟ್ರಾನಿಕ್ ಮಾಧ್ಯಮಕ್ಕೆ ಹೆಚ್ಚು ಶ್ರೋತೃ ಮತ್ತು ವೀಕ್ಷಕ ವೃಂದ ಇರುತ್ತದೆ. ಸಾಮಾಜಿಕ ಪರಿವರ್ತನೆಯ ಮತ್ತು ಆಧುನೀಕರಣದ ಪ್ರಕ್ರಿಯೆಯಲ್ಲಿ ಸಮೂಹ ಮಾಧ್ಯಮಗಳು ವೇಗವರ್ಧಕಗಳಾಗಿ ಕೆಲಸಮಾಡುತ್ತವೆ ಎಂಬುದು ಅಭಿವೃದ್ಧಿ ವಿಶೇಷಜ್ಞರ ಅಭಿಪ್ರಾಯ.

ಇಥೀ ದಿ ಸೋಲಾಪೂಲ್‌ರ ಪ್ರಕಾರ, "ಬಹಳಷ್ಟು ಬಾರಿ ಯೋಜನಾಕಾರರು ಉಕ್ಕಿನ ಕಾರ್ಖಾನೆಗಳು, ಸಿಮೆಂಟ್ ಫ್ಯಾಕ್ಟರಿಗಳು, ವಿದ್ಯುತ್ ಉತ್ಪಾದನೆ, ಅಣೆಕಟ್ಟುಗಳ ನಿರ್ಮಾಣ ಮುಂತಾದ ಸ್ಪಷ್ಟವಾಗಿ ಗೋಚರವಾಗುವ ಅಭಿವೃದ್ಧಿ ಯೋಜನೆಗಳಿಗೆ ಕೊಟ್ಟಷ್ಟು ಪ್ರಾಮುಖ್ಯತೆಯನ್ನು ಸಮೂಹ ಮಾಧ್ಯಮಗಳಿಗೆ ನೀಡಲಿಲ್ಲ" (ನವಿಲೂರು, ೨೦೦೭).

ಸಾಮಾಜಿಕ ಅಭಿವೃದ್ಧಿ ಮತ್ತು ಆಧುನೀಕರಣಕ್ಕೆ ಸಮೂಹ ಮಾಧ್ಯಮಗಳ ಬಳಕೆ ಅತ್ಯಗತ್ಯ. ಯಾಕೆಂದರೆ, ವ್ಯಕ್ತಿ ವ್ಯಕ್ತಿಗಳ ನಡುವಿನ ಸಂವಹನ ಮಾರ್ಗಗಳು ಬೃಹತ್ ಜನ ಸಮೂಹಗಳನ್ನು ತಲುಪಲು ಸಾಕಾಗದು. ಮಾತ್ರವಲ್ಲದೆ, ಮಾಧ್ಯಮ ತಂತ್ರಜ್ಞಾನ ಮತ್ತು ಸಂಪರ್ಕಗಳಲ್ಲಿ ಆಗಿರುವ ಬದಲಾವಣೆಗಳು ಯಾವುದೇ ದೇಶದ ಮೂಲೆಮೂಲೆಗಳಲ್ಲಿರುವ ಜನರಿಗೆ ಸಮೂಹ ಮಾಧ್ಯಮಗಳ ಸವಲತ್ತುಗಳನ್ನು ತಲುಪಿಸಬಲ್ಲುದು ಹಾಗೂ ಅವಶ್ಯವಾದ ತೀರ್ಮಾನಗಳನ್ನು ತೆಗೆದುಕೊಳ್ಳುವಂತೆ ಅವರಿಗೆ ಪ್ರೇರಣೆ ನೀಡಬಲ್ಲುದು. ಮಾಧ್ಯಮಕ್ಕೆ ಹೆಚ್ಚು ತೆರೆದುಕೊಂಡ ಮಂದಿ ಮಾಧ್ಯಮಗಳಿಗೆ ಹೆಚ್ಚು ತೆರೆದುಕೊಳ್ಳದ ಮಂದಿಗಿಂತ ಅಭಿವೃದ್ಧಿಯೋಜನೆಗಳಲ್ಲಿ ಸಕಾರಾತ್ಮಕವಾಗಿ ಪಾಲ್ಗೊಳ್ಳುತ್ತಿರುವುದೇ ಇದಕ್ಕೆ ನಿದರ್ಶನ.

ಸಮೂಹ ಮಾಧ್ಯಮಗಳಾದ ವೃತ್ತಪತ್ರಿಕೆಗಳು, ನಿಯತಕಾಲಿಕೆಗಳು, ಚಲನಚಿತ್ರಗಳು, ರೇಡಿಯೊ ಮತ್ತು ಟೆಲಿವಿಷನ್‌ಗಳು ಹೊರಪ್ರಪಂಚದ ಅನುಭವಗಳನ್ನು ಹೆಚ್ಚು ಆಪ್ತವಾಗುವಂತೆ ಮಾಡಿವೆ. ಹೀಗಾಗಿ ದೇಶದ ಸಮೂಹ ಮಾಧ್ಯಮಗಳು ರಾಷ್ಟ್ರದ ಸಾಮಾಜಿಕ, ಆರ್ಥಿಕ, ರಾಜಕೀಯ ಕ್ಷೇತ್ರಗಳಲ್ಲಿನ ಬೆಳವಣಿಗೆಗೆ ಕಾರಣವಾಗುತ್ತವೆ. ಸಮೂಹ ಮಾಧ್ಯಮಗಳು ಸಾಮಾಜಿಕ ಪರಿವರ್ತನೆ ಮತ್ತು ಆಧುನೀಕರಣದ ಸೂಚಿಯೂ ಆಗಿವೆ. ಆಧುನಿಕ ಸಮಾಜವು ಸಮರ್ಥವಾಗಿ ಕಾರ್ಯನಿರ್ವಹಿಸಲು ಸಮೂಹ ಮಾಧ್ಯಮಗಳು ಅಗತ್ಯವಾಗಿವೆ.

೨.೧.೫ ಮಾಧ್ಯಮಗಳ ಜಾಗತೀಕರಣ

ಇತ್ತೀಚಿನ ಬೆಳವಣಿಗೆಯಲ್ಲಿ ಜಾಗತಿಕ ಮಾಧ್ಯಮಗಳ ಉದಯವೂ ಒಂದಾಗಿದೆ. ಮಾಧ್ಯಮಗಳು ಹೊರದೇಶಗಳಲ್ಲೂ ಕಾರ್ಯಾಚರಣೆ ನಡೆಸುತ್ತಿವೆ. ಹಲವು ವರ್ಷಗಳಿಂದ ಪುಸ್ತಕ, ಚಲನಚಿತ್ರ ಹಾಗೂ ಸಂಗೀತ ನಿರ್ಮಾಣಗಳನ್ನು ಟ್ರ್ಯಾನ್ಸ್‌ನ್ಯಾಶನಲ್ ಕಾರ್ಪೊರೇಶನ್‌ಗಳು(ಟಿಎನ್‌ಸಿ) ಮಾಡುತ್ತಿವೆ. ಟಿಎನ್‌ಸಿಗಳು ಹಲವು ದೇಶಗಳಲ್ಲಿ ತಮ್ಮ ಮೂಲಸೌಕರ್ಯವನ್ನು ಹೊಂದಿವೆ. ಮಾತ್ರವಲ್ಲ, ಅವು ಹಲವು ದೇಶಗಳ ನಿಟ್ಟಿನಿಂದ ಯೋಚಿಸಿ ಮಾಡುವಂತಹುದಾಗಿದೆ ಮತ್ತು ಜಾಗತೀಕರಣಕ್ಕೆ ದಾರಿ ಮಾಡಿವೆ ಎನ್ನಬಹುದು.

ಜಾಗತಿಕ ಮಾರುಕಟ್ಟೆಗೆ ಕೊಡುಗೆ ಸಲ್ಲಿಸಿದ ಮೊದಲ ಮಾಧ್ಯಮವೆಂದರೆ ಚಲನಚಿತ್ರೋದ್ಯಮ. ಹಾಲಿವುಡ್‌ನ ಚಿತ್ರಗಳಲ್ಲಿ ಡಿಸ್ನಿಯ ಪಾತ್ರಗಳು ಮತ್ತು ಪಾಶ್ಚಿಮಾತ್ಯ ಜನಪ್ರಿಯ ಸಂಗೀತಗಳು ಜಾಗತಿಕ ಮಾಧ್ಯಮಗಳಿಗೆ ನಿಜವಾದ ಉದಾಹರಣೆಗಳು. "ಉಪಗ್ರಹ ಪ್ರಸಾರ, ವಿಡಿಯೊ ಕ್ಯಾಸೆಟ್ ರೆಕಾರ್ಡರ್‌ಗಳು, ಫೈಬರ್ ಆಪ್ಟಿಕ್ ಕೇಬಲ್‌ಗಳು ಮತ್ತು ದೂರವಾಣಿ ವ್ಯವಸ್ಥೆಗಳ ಅಭಿವೃದ್ಧಿಯಲ್ಲಿ ಆಗಿರುವ ತಂತ್ರಜ್ಞಾನದ ಬದಲಾವಣೆಗಳ ಫಲಿತಾಂಶವೇ ಜಾಗತಿಕ ಮಾಧ್ಯಮಗಳು"(ನವಿಲೂರು, ೨೦೦೭).

೨.೨ ಭಾರತದಲ್ಲಿ ಮಾಧ್ಯಮ ರಂಗ

ಎರಡನೇ ಮಹಾಯುದ್ಧದ ಬಳಿಕ ಏಷ್ಯಾ, ಆಫ್ರಿಕ ಮತ್ತು ಲ್ಯಾಟಿನ್ ಅಮೆರಿಕದ ಅನೇಕ ದೇಶಗಳು ರಾಜಕೀಯ ಸ್ವಾತಂತ್ರ್ಯವನ್ನು ಗಳಿಸಿಕೊಂಡವು. ಕೆಲವು ದೇಶಗಳಲ್ಲಿ ಸಂವಹನ ಸೌಕರ್ಯಗಳು ಗಮನಾರ್ಹ ಬೆಳವಣಿಗೆಯನ್ನು ಕಂಡರೆ, ಇನ್ನಿತರ ಬಹುಪಾಲು ದೇಶಗಳಲ್ಲಿ

ಅವುಗಳ ಕೊರತೆ ಎದ್ದು ಕಾಣುತ್ತಿತ್ತು.ಭಾರತದಲ್ಲಿ ಮಾಹಿತಿ ಕ್ರಾಂತಿಯ ಪ್ರಾರಂಭ ತುಸು ನಿಧಾನಗತಿಯಲ್ಲಿ ಪ್ರಾರಂಭವಾಯಿತೆನ್ನಬಹುದು.

ಭಾರತದ ಬಹುಮುಖ್ಯ ಗುಣಲಕ್ಷಣವೆಂದರೆ, ಅದರ ಗ್ರಾಮೀಣ ಸ್ವರೂಪ. ದೇಶದ ಶೇ.೭೦ಕ್ಕೂ ಹೆಚ್ಚು ಜನರು ಸುಮಾರು ೬ ಲಕ್ಷ ಹಳ್ಳಿಗಳಲ್ಲಿ ವಾಸಿಸುತ್ತಿದ್ದು, ವ್ಯವಸಾಯವನ್ನೇ ನಂಬಿದ ರೈತಾಪಿ ಜನರಾಗಿದ್ದಾರೆ. ಕೃಷಿ ಕಾರ್ಮಿಕರು, ಸಣ್ಣ ಹಿಡುವಳಿದಾರರು, ಕುಶಲಕರ್ಮಿಗಳೇ ಹೆಚ್ಚಾಗಿರುವ ಗ್ರಾಮೀಣ ಭಾರತದ ಜನತೆಗೆ ಆಧುನಿಕ ತಂತ್ರಜ್ಞಾನ ಹಾಗೂ ಟಿವಿಗಳಂತಹ ಸಮೂಹ ಮಾಧ್ಯಮಗಳು ಮಾಹಿತಿ ಪಸರಿಸುವಲ್ಲಿ ನಿರ್ಣಾಯಕ ಪಾತ್ರ ವಹಿಸಿವೆ.ಭಾರತದಲ್ಲಿ ಮಾಧ್ಯಮರಂಗ ಯಾವ ರೀತಿ ಬೆಳವಣಿಗೆ ಹೊಂದಿತೆಂಬುದನ್ನು ತಿಳಿಯಲು ವಿವಿಧ ಮಾಧ್ಯಮಗಳಲ್ಲಿ ಮುಖ್ಯವಾಗಿ ಪತ್ರಿಕಾರಂಗ, ಬಾನುಲಿ, ಟೆಲಿವಿಷನ್, ಸಿನಿಮಾ, ಜನಪದ ಮಾಧ್ಯಮ, ಅಂತರ್ಜಾಲದ ಅಭಿವೃದ್ಧಿಯ ಹಂತಗಳನ್ನು ಮನದಟ್ಟು ಮಾಡಿಕೊಳ್ಳಬೇಕಾಗಿದೆ.

೨.೨.ಅ ಪತ್ರಿಕಾರಂಗ

ಪತ್ರಿಕಾರಂಗ ಸಮೂಹಮಾಧ್ಯಮಗಳಲ್ಲಿ ಅತ್ಯಂತ ಹಳೆಯದು. ಯಾವುದೇ ಪ್ರಜಾಪ್ರಭುತ್ವವಾದಿ ಸಮಾಜದಲ್ಲಿ ನೈತಿಕತೆ ಹಾಗೂ ಸಾಮಾಜಿಕ ಸ್ವಾಸ್ಥ್ಯವನ್ನು ಎತ್ತಿಹಿಡಿಯಲು ಪತ್ರಿಕಾರಂಗವು ಅತ್ಯಂತ ಪ್ರಭಾವಶಾಲಿಯಾದುದು. ಪತ್ರಿಕೆಗಳು ಸಮಾಜದ ಆಗುಹೋಗುಗಳ ಮೇಲೆ ನಿರಂತರವಾಗಿ ಕಣ್ಣಿಟ್ಟಿರುವ 'ಕಾವಲುಭಟ'ರಂತೆ ವರ್ತಿಸುತ್ತವೆ. ಮಾತ್ರವಲ್ಲ, ಅವು ಸಮಾಜದ ಕಣ್ಣು ಹಾಗೂ ಕಿವಿಗಳೇ ಆಗಿವೆ (ನವಿಲೂರು, ೨೦೦೭ಇ).

ಮಾನವ ಜೀವಿಗಳ ಸ್ವಯಂ ಅಭಿವ್ಯಕ್ತಿ, ವಿಷಯಗಳ, ಘಟನಾವಳಿಗಳ ಬಗೆಗಿನ ವಿವರಗಳನ್ನು ತಿಳಿದುಕೊಳ್ಳುವ ಕುತೂಹಲದ ಗುಣದಿಂದಾಗಿ ಪತ್ರಿಕೋದ್ಯಮ ಹುಟ್ಟಿತೆನ್ನಬಹುದು. ಇದು ಇತರ ಸಮೂಹ ಮಾಧ್ಯಮಗಳಾದ ಬಾನುಲಿ, ಟೆಲಿವಿಷನ್, ಸಿನಿಮಾಗಳಂತೆ ಬೆಳವಣಿಗೆಯ ಹಲವಾರು ಹಂತಗಳನ್ನು ದಾಟಿ ಬಂದಿದೆ. ಆರಂಭದ ಹಂತದಲ್ಲಿ ಪತ್ರಿಕೆಗಳು ಅಭಿವ್ಯಕ್ತಿಯ ವಾಹಕಗಳಾಗಿ ಅದರಲ್ಲೂ ಸಾಹಿತ್ಯ ಹಾಗೂ ವೈಯಕ್ತಿಕ ಅನಿಸಿಕೆಗಳ ಮಾಧ್ಯಮಗಳಾಗಿ ಹೊರಹೊಮ್ಮಿದವು. ಎರಡನೆಯ ಹಂತದಲ್ಲಿ ಪತ್ರಿಕೆಗಳು ಸಮೂಹ ಮಾಧ್ಯಮಗಳಾಗಿ ಹೊರಹೊಮ್ಮಿ ಬಹುಸಂಖ್ಯೆಯಲ್ಲಿ ಜನರನ್ನು ತಲುಪಲು ಮೊದಲಾದವು. ಆರಂಭದಲ್ಲಿ ಪತ್ರಿಕೆಗಳನ್ನು ಹೊರತುಪಡಿಸಿದರೆ ಇನ್ಯಾವುದೇ ಸಮೂಹ ಮಾಧ್ಯಮಗಳಿರಲಿಲ್ಲ.

ಉಳಿದ ಸಮೂಹ ಮಾಧ್ಯಮಗಳು ೧೯ನೇ ಶತಮಾನದ ಕೊನೆಯ ಹಾಗೂ ೨೦ನೆಯ ಶತಮಾನದ ಪ್ರಾರಂಭದಲ್ಲಿ ಅಡಿಯಿಡಲು ಪ್ರಾರಂಭಿಸಿದವು. ಪತ್ರಿಕಾರಂಗವು ತನ್ನ ಬೆಳವಣಿಗೆಯ ೩ನೆಯ ಹಂತದಲ್ಲಿ ವ್ಯಾಪಾರಿ ಗುಣಲಕ್ಷಣಗಳನ್ನು ಪಡೆದುಕೊಂಡು ವಾಣಿಜ್ಯ ಮಾಧ್ಯಮವಾಗಿ ಹೊರಹೊಮ್ಮಿತು. ನಾಲ್ಕನೆಯ ಹಂತದಲ್ಲಿ ಪತ್ರಿಕೆಯು ಗ್ರಾಹಕ ಸಮೂಹದ ಅಗತ್ಯತೆಗಳನ್ನು ಪೂರೈಸುವ ಸಮರ್ಥ ಮಾಧ್ಯಮವಾಗಿ ಕಾರ್ಯಾಚರಿಸುತ್ತಿದೆ.

ಪತ್ರಿಕೆಗಳನ್ನು 'ಉತ್ತಮ ಪ್ರದರ್ಶನ ಪೆಟ್ಟಿಗೆ' ಎಂದು ಪರಿಗಣಿಸಲಾಗುತ್ತದೆ. ದಿನಪತ್ರಿಕೆ ಅಥವಾ ನಿಯತಕಾಲಿಕೆಗಳ ಪುಟಗಳನ್ನು ನೋಡುತ್ತಿದ್ದಂತೆ ಓದುಗರು ಅದರಲ್ಲಿರುವ ವಸ್ತು ವಿಷಯಗಳನ್ನು ತಕ್ಷಣ ಗುರುತಿಸಿ ತಮ್ಮ ಸುತ್ತಮುತ್ತ ಏನಾಗುತ್ತಿದೆ ಎಂಬುದನ್ನು ತಿಳಿದುಕೊಳ್ಳುತ್ತಾರೆ. ಇದಕ್ಕೆ ಪ್ರಮುಖ ಕಾರಣವೆಂದರೆ ಸುದ್ದಿ ಅಂಶಗಳ ಮೇಲೆ ಇತರ ಮಾಧ್ಯಮಗಳಿಗಿಂತ ಪತ್ರಿಕೆಗಳಿಗಿರುವ ಉತ್ತಮ ಹಿಡಿತವೇ ಆಗಿದೆ. ಪತ್ರಿಕಾ ಮಾಧ್ಯಮವು ಯಾವುದೇ ವಿಷಯಕ್ಕೆ ಸಂಬಂಧಪಟ್ಟಂತೆ ಶಾಶ್ವತವಾಗಿ ದಾಖಲಿಸುವ ಕೆಲಸವನ್ನು ಮಾಡುತ್ತದೆ. ಆದರೆ ಓದುಗರಲ್ಲಿ ಸಾಕ್ಷರತೆ ಇರಲೇಬೇಕಾಗುತ್ತದೆ.

ಪ್ರಪ್ರಥಮ ಬಾರಿಗೆ ಭಾರತದಲ್ಲಿ ಮುದ್ರಣ ಕಲೆಯ ಪ್ರದರ್ಶನ ಸೆಪ್ಟೆಂಬರ್ ೬, ೧೬೫೬ರಲ್ಲಿ ಕ್ರಿಶ್ಚಿಯನ್ ಧರ್ಮಗುರುಗಳು ಬಿಟ್ಟುಹೋದ ಮುದ್ರಣ ಯಂತ್ರವನ್ನು ಬಳಸಿಕೊಂಡು ನೀಡಲಾಯಿತು. ಇದೇ ಯಂತ್ರವನ್ನು ಬಳಸಿಕೊಂಡು ಸೈಂಟ್ ಫ್ರಾನ್ಸಿಸ್ ಝೇವಿಯರ್ ಬರೆದ "ದೌತ್ರೀನಾ ಕ್ರಿಸ್ತಾ' ಪ್ರಶ್ನೋತ್ತರ ಭೋಧನೆಯನ್ನು ೧೫೫೭ರಲ್ಲಿ ಮುದ್ರಿಸಲಾಯಿತು. ಭಾರತದ ಎರಡನೇ ಮುದ್ರಣ ಯಂತ್ರ ೧೫೭೭ರಲ್ಲಿ ತಮಿಳುನಾಡಿನ ತಿರುನಲ್ವೇಲಿ ಜಿಲ್ಲೆಯ ಪುಣೆಕಾಲ್ ಎಂಬಲ್ಲಿ ಸ್ಥಾಪಿಸಲಾಯಿತು. ಅನಂತರ ೩ನೆಯ ಯಂತ್ರ ೧೬೭೪ರಲ್ಲಿ ಮುಂಬೈನಲ್ಲಿ ಕಾರ್ಯಾರಂಭ ಮಾಡಿತು.

ಮುಂಬೈಯಲ್ಲಿ ಸ್ಥಾಪಿಸಲಾದ ಮುದ್ರಣ ಯಂತ್ರವನ್ನು ಈಸ್ಟ್‌ಇಂಡಿಯಾ ಕಂಪೆನಿಯ ನೆರವಿನೊಂದಿಗೆ ಗುಜರಾತಿ ವರ್ತಕ ಭೀಮ್‌ಜಿ ಪಾರಿಖ್ ಆರಂಭಿಸಿದರು. ನಂತರ ಡ್ಯಾನಿಶ್ ಧರ್ಮ ಪ್ರಚಾರಕರು ೧೭೧೨ರಲ್ಲಿ ಅಂದಿನ ಮದ್ರಾಸ್ ಪ್ರೆಸಿಡೆನ್ಸಿಯ ಟ್ರಂಕ್‌ಬಾರ್ ಎಂಬಲ್ಲಿ ತಮ್ಮದೇ ಮುದ್ರಣ ಯಂತ್ರ ಸ್ಥಾಪಿಸಿದರು. ಡಾ. ವಿಯಂ ಕ್ಯಾರಿ ಎಂಬಾತ ೧೮೧೭ರಲ್ಲಿ ಡ್ಯಾನಿಶ್ ಧರ್ಮಪ್ರಚಾರಕರಿಗೋಸ್ಕರ ಕನ್ನಡ ಭಾಷಾ ವ್ಯಾಕರಣ ಪುಸ್ತಕಗಳನ್ನು ಅಪಾರ ಸಂಖ್ಯೆಯಲ್ಲಿ ಮುದ್ರಿಸಿದನು.

ಈಸ್ಟ್ ಇಂಡಿಯ ಕಂಪೆನಿಯಲ್ಲಿ ಸೇವೆ ಸಲ್ಲಿಸಿ ನಿವೃತ್ತನಾಗಿದ್ದ ವಿಲಿಯಂಬೋಲ್ಟ್ಸ್ ಮೊದಲಬಾರಿಗೆ ಭಾರತದಲ್ಲಿ ವೃತ್ತಪತ್ರಿಕೆ ಆರಂಭಿಸಲು ಯೋಚಿಸಿದ ವ್ಯಕ್ತಿಯಾಗಿದ್ದಾನೆ. ಇದನ್ನು ತಿಳಿದ ಬಂಗಾಳದ ಈಸ್ಟ್ ಇಂಡಿಯಾ ಸರಕಾರ ತಕ್ಷಣ ಮುನ್ನೆಚ್ಚರಿಕೆ ಕ್ರಮಗಳನ್ನು ಜಾರಿಮಾಡಿ ಆತನನ್ನು ಭಾರತ ಬಿಟ್ಟು ಯುರೋಪ್‌ಗೆ ತೆರಳುವಂತೆ ಮಾಡಿತು. ಹೀಗೆ ಸುದ್ದಿ ಪ್ರಸಾರಕ್ಕಾಗಿ ವೃತ್ತಪತ್ರಿಕೆಯೊಂದನ್ನು ಆರಂಭಿಸುವ ಮೊದಲ ಪ್ರಯತ್ನವನ್ನು ಬ್ರಿಟಿಷ್ ಆಡಳಿತ ಹೊಸಕಿ ಹಾಕಿತು.

ಇದಾದ ೧೪ ವರ್ಷಗಳ ನಂತರ ೧೭೮೦ ಜನವರಿ ೨೯ರಂದು ಕಲ್ಕತ್ತಾದಲ್ಲಿ ಜೇಮ್ಸ್ ಆಗಸ್ಟ್ ಹಿಕ್ಕಿಸ್ "ದಿ ಬೆಂಗಾಲ್ ಗಝೆಟ್' ಎಂಬ ಪತ್ರಿಕೆಯನ್ನು ಆರಂಭಿಸಿದರು. ಇದು ಕೇವಲ ೨ ವರ್ಷಗಳಲ್ಲಿ ಸ್ಥಗಿತಗೊಂಡಿತು. ಆದರೂ ಹಿಕ್ಕಿಯನ್ನು 'ಭಾರತೀಯ ಪತ್ರಿಕೋದ್ಯಮದ ಪಿತಾಮಹ'ನೆಂದೇ ಗುರುತಿಸಲಾಗುತ್ತಿದೆ. ನಂತರ 'ದಿ ಇಂಡಿಯಾ ಗಝೆಟ್' ೧೭೮೦ರಲ್ಲಿ ಹಾಗೂ 'ದಿ ಕಲ್ಕತ್ತಾ ಗಝೆಟ್' ೧೭೮೪ರಲ್ಲಿ ಪ್ರಾರಂಭವಾಯಿತು. ಭಾರತದ ಮೊದಲ ಮಾಸಪತ್ರಿಕೆ 'ದಿ ಓರಿಯೆಂಟಲ್ ಮ್ಯಾಗಝಿನ್' ೧೭೮೫ರಲ್ಲಿ ಅಡಿಯಿಟ್ಟಿತು. ೧೭೮೫ರಲ್ಲಿ ಮದ್ರಾಸ್ ಪ್ರಾಂತ್ಯದ ಮೊದಲ ಪತ್ರಿಕೆ 'ದಿ ಮದ್ರಾಸ್ ಕೊರಿಯರ್', ೧೭೯೫ರಲ್ಲಿ ವಾರಪತ್ರಿಕೆ 'ಮದ್ರಾಸ್ ಗಝೆಟ್' ಹಾಗೂ 'ಇಂಡಿಯಾ ಹೆರಾಲ್ಡ್' ಪತ್ರಿಕೆ, ೧೭೮೯ರಲ್ಲಿ ಆಂಗ್ಲ ವಾರಪತ್ರಿಕೆ 'ದಿ ಬಾಂಬೆ ಹೆರಾಲ್ಡ್', ೧೭೯೦ರಲ್ಲಿ 'ಬಾಂಬೆ ಕೊರಿಯರ್', ೧೭೯೧ರಲ್ಲಿ 'ಬಾಂಬೆ ಗಝೆಟ್' ಕಲ್ಕತ್ತಾದಲ್ಲಿ ೧೭೯೪ರಲ್ಲಿ 'ಏಷ್ಯಾಟಿಕ್ ಮಿರರ್', ೧೭೯೫ರಲ್ಲಿ 'ಇಂಡಿಯಾ ವರ್ಲ್ಡ್', 'ಕಲ್ಕತ್ತಾ ಕೊರಿಯರ್', 'ಇಂಡಿಯನ್ ಅಪೋಲೊ' ಪ್ರಾರಂಭವಾದವು. ನಂತರ 'ದಿ ಬೆಂಗಾಲ್ ಟೆಲಿಗ್ರಾಫ್', ೧೭೯೦ರಲ್ಲಿ 'ದಿ ಕಲ್ಕತ್ತಾ ಮಾರ್ನಿಂಗ್ ಮೋಸ್ಟ್', 'ಓರಿಯೆಂಟಲ್ ಸ್ಟಾರ್', ೧೮೧೮ರಲ್ಲಿ 'ಕಲ್ಕತ್ತಾ ಜರ್ನಲ್' ಪ್ರಕಟಗೊಂಡಿತು.

ಭಾರತೀಯ ಭಾಷಾ ಪತ್ರಿಕೋದ್ಯಮಕ್ಕೆ ರಾಜರಾಮ ಮೋಹನರಾಯ್ ಅವರ ಕೊಡುಗೆ ಅಪಾರ. ಅವರು 'ಬ್ರಾಹ್ಮಣಿಕಲ್ ಮ್ಯಾಗಝಿನ್' ಹೊರತಂದರು. ೧೮೨೧ರಲ್ಲಿ ಮೋಹನ್‌ರಾಯ್ 'ಸಂಬಂಧ್ ಕೌಮುದಿ' ಪ್ರಾರಂಭಿಸಿದರು. ನಂತರ ಅವರು 'ಮಿರಾತ್ ಉಲ್ ಅಕ್ಬಾರ್', 'ಬೆಂಗಾಲ್ ಹೆರಾಲ್ಡ್' ಪತ್ರಿಕೆಗಳನ್ನು ಹುಟ್ಟುಹಾಕಿದರು. ರಾಜಾರಾಮ್ ಮೋಹನ್‌ರಾಯ್ ಭಾರತೀಯ ಭಾಷಾಪತ್ರಿಕೋದ್ಯಮದ "ಪಿತಾಮಹ"ರೇ ಆಗಿದ್ದಾರೆ. ೧೮೮೨ರ ಕೊನೆಗೆ ಬಾಲಗಂಗಾಧರ ತಿಲಕರು 'ಕೇಸರಿ', ೧೯೧೬ರಲ್ಲಿ ಹೋಂ ರೂಲ್ ಲೀಗ್ ಆರಂಭಿಸಿದ

ಅನಿಬೆಸೆಂಟ್ 'ನ್ಯೂ ಇಂಡಿಯಾ'ಆರಂಭಿಸಿದರು. ಇದು ಹೋಂ ರೂಲ್ ಚಳುವಳಿಯ ಪ್ರಬಲ ಅಸ್ತ್ರವಾಯಿತು. ಮಾತ್ರವಲ್ಲ, ಭಾರತದ ಸಮಗ್ರ ಪತ್ರಿಕೋದ್ಯಮಕ್ಕೆ ನಾಂದಿಯಾಯಿತು.

ಸ್ವಾತಂತ್ರ್ಯ ಚಳುವಳಿಯ ಇತಿಹಾಸದಲ್ಲಿ ಅನೇಕ ಪತ್ರಿಕೆಗಳು ಮತ್ತು ಪತ್ರಕರ್ತರನ್ನು ತನ್ನ ವೀರತನ ಮತ್ತು ತ್ಯಾಗಗಳಿಂದ ನೆನಪಿಸಿಕೊಳ್ಳಲಾಗುತ್ತಿದೆ. ೧೯೧೯ ಮತ್ತು ೧೯೪೭ರ ನಡುವಿನ ಅವಧಿಯು ಭಾರತೀಯ ಪತ್ರಿಕೋದ್ಯಮ ಗಾಂಧೀಜಿಯವರ ಸ್ವಾತಂತ್ರ್ಯ ಸಂದೇಶದಿಂದ ತುಂಬಿತ್ತು. ಒಟ್ಟಿನಲ್ಲಿ ಭಾರತೀಯ ಪತ್ರಿಕೋದ್ಯಮದ ಮೇಲೆ ಅಗಾಧ ಪ್ರಭಾವ ಬೀರಿದವರಲ್ಲಿ ಗಾಂಧೀಜಿಯವರನ್ನು ಪ್ರಮುಖರೆನ್ನಬಹುದು. ಸ್ವಾತಂತ್ರ್ಯಾನಂತರದ ದಿನಗಳಲ್ಲಿ ಪತ್ರಿಕೋದ್ಯಮದಲ್ಲಿ ಕ್ರಿಯಾಶೀಲತೆ ಹೆಚ್ಚಿತೆನ್ನಬಹುದು. ಪತ್ರಿಕೋದ್ಯಮವು ಭಾರತದಲ್ಲಿ ಒಂದು ಗೌರವಯುತ ವೃತ್ತಿಯಾಗಿದ್ದು, ಹೆಚ್ಚಿನ ಶಿಕ್ಷಿತ ಯುವಕ –ಯುವತಿಯರು ಈ ವೃತ್ತಿಯನ್ನೇ ಆರಿಸಿಕೊಳ್ಳುತ್ತಿದ್ದಾರೆ.

ಆಧುನಿಕ ಪತ್ರಿಕೋದ್ಯಮಕ್ಕಿರುವ ಜವಾಬ್ದಾರಿ ಹಾಗೂ ಕಾರ್ಯಚಟುವಟಿಕೆಗಳು ಅಪಾರವೆನ್ನಬಹುದು. ಅದರಲ್ಲಿ ಪ್ರಮುಖವಾದ ಕಾರ್ಯಚಟುವಟಿಕೆಗಳು ಈ ಕೆಳಗಿನಂತಿವೆ.

ಅ. ಮಾಹಿತಿ ಪ್ರಸರಣ

ಆ. ಶಿಕ್ಷಣ

ಇ. ಮನರಂಜನೆ

ಈ. ಸಂಸ್ಕೃತಿ ವಾಹನೆ/ಸಾಮಾಜಿಕ ಒಡನಾಟ

ಉ. ಪ್ರೇರೇಪಣೆ ಮತ್ತು ಒಗ್ಗೂಡಿಸುವಿಕೆ

ಪತ್ರಿಕೆಗಳ ವಸ್ತು ವಿಷಯವನ್ನಾಧರಿಸಿಕೊಂಡು ಅವುಗಳನ್ನು ಸಾಮಾನ್ಯ ಆಸಕ್ತಿಯ ಪತ್ರಿಕೆಗಳು, ನಿಯತಕಾಲಿಕೆಗಳು ಮತ್ತು ಸಾಂಸ್ಥಿಕ ಪ್ರಕಟಣೆಗಳೆಂದು ವಿಂಗಡಿಸಬಹುದಾಗಿದೆ. ಸಾಮಾನ್ಯ ಆಸಕ್ತಿಯ ದಿನಪತ್ರಿಕೆಗಳು ಪ್ರಕಟಗೊಳ್ಳುವ ಸಮಯವನ್ನಾಧರಿಸಿ ಬೆಳಗ್ಗಿನ ದಿನಪತ್ರಿಕೆಗಳು, ಮಧ್ಯಾಹ್ನದ ದಿನಪತ್ರಿಕೆಗಳು, ಸಂಜೆ ಪತ್ರಿಕೆಗಳೆಂದು ಗುರುತಿಸಬಹುದು. ನಿಯತಕಾಲಿಕೆಗಳನ್ನು ಸಾಮಾನ್ಯ ಆಸಕ್ತಿಯ ನಿಯತಕಾಲಿಕೆಗಳು, ವಿಶೇಷ ಆಸಕ್ತಿಯ ನಿಯತಕಾಲಿಕೆಗಳೆಂದು ವಿಭಾಗಿಸಬಹುದಾಗಿದೆ. ನಮ್ಮ ದೇಶದಲ್ಲಿ ಕಂಡು ಬರುವ ನಿಯತಕಾಲಿಕೆಗಳ ಪ್ರಮುಖ ವರ್ಗೀಕರಣಗಳೆಂದರೆ ಸುದ್ದಿ ನಿಯತಕಾಲಿಕೆಗಳು, ಆರ್ಥಿಕ

ನಿಯತಕಾಲಿಕೆಗಳು, ಕ್ರೀಡಾ ನಿಯತಕಾಲಿಕೆಗಳು, ಅಪರಾಧ ನಿಯತಕಾಲಿಕೆಗಳು, ಸಾಹಿತ್ಯ ನಿಯತಕಾಲಿಕೆಗಳು, ಕೃಷಿ ನಿಯತಕಾಲಿಕೆಗಳು, ವಿಜ್ಞಾನ ಮತ್ತು ತಂತ್ರಜ್ಞಾನ ನಿಯತಕಾಲಿಕೆಗಳು, ವಾಣಿಜ್ಯ ವಿಷಯ ಸಂಬಂಧಿ ನಿಯತಕಾಲಿಕೆಗಳು, ಆರೋಗ್ಯ ನಿಯತಕಾಲಿಕೆಗಳು, ರಾಜಕೀಯ ನಿಯತಕಾಲಿಕೆಗಳು ಇತ್ಯಾದಿ.

ಇಂದು ಪತ್ರಿಕೋದ್ಯಮದಲ್ಲಿ ಆಸಕ್ತಿಯುಳ್ಳ ವಿದ್ಯಾರ್ಥಿಗಳಿಗಾಗಿ ಹಲವಾರು ವಿಶ್ವವಿದ್ಯಾನಿಲಯಗಳು ಪತ್ರಿಕೋದ್ಯಮ ಮತ್ತು ಸಮೂಹ ಸಂವಹನದಲ್ಲಿ ಸ್ನಾತಕ ಮತ್ತು ಸ್ನಾತಕೋತ್ತರ ಕೋರ್ಸ್‌ಗಳನ್ನು ನಡೆಸಿ ಮಾಹಿತಿ, ಕುಶಲತೆ ಹಾಗೂ ವೃತ್ತಿ ಜ್ಞಾನವನ್ನು ಪಸರಿಸುತ್ತಿದೆ. ಹೀಗಾಗಿ ಮಾಧ್ಯಮ ವೃತ್ತಿನಿರತರು ಹೆಚ್ಚಾಗುತ್ತಿದ್ದಾರೆ.

೨.೨.ಆ ಬಾನುಲಿ

ಇತರ ಸಮೂಹ ಮಾಧ್ಯಮಗಳಿಗೆ ಹೋಲಿಸಿದರೆ ಬಾನುಲಿ ಪ್ರಪಂಚದಾದ್ಯಂತ ಆವರಿಸಿಕೊಂಡಿರುವ ಮಾಧ್ಯಮ. ಮನುಕುಲದ ಮಾಹಿತಿಯ ಅಗತ್ಯತೆಯನ್ನು ಹೊಸದಾದ ಮತ್ತು ಕೈಗೆಟಕುವ ಮಾಧ್ಯಮದಲ್ಲಿ ತಲುಪಿಸಲು ಬಾನುಲಿಯಿಂದ ಸಾಧ್ಯವಾಯಿತು. ಮಾಹಿತಿ, ಶಿಕ್ಷಣ, ಮನರಂಜನೆಯನ್ನು ನೀಡುವ ಮಾಧ್ಯಮ ಬಾನುಲಿ. ರೇಡಿಯೊದ ಜನಕನೆಂದೇ ಹೆಸರಾದ ಗೂಗ್ಲಿಲ್ಮೊ ಮಾರ್ಕೊನಿ ತಂತಿಗಳ ಸಹಾಯವಿಲ್ಲದೆ ವಿದ್ಯುದಯಸ್ಕಾಂತೀಯ ತರಂಗಗಳನ್ನು ಬಳಸಿ ಶಬ್ದವನ್ನು ಒಂದೆಡೆಯಿಂದ ಇನ್ನೊಂದೆಡೆ ರವಾನಿಸುವಲ್ಲಿ ಯಶಸ್ವಿಯಾದನು. ಹೀಗಾಗಿ ಪ್ರಸಾರದ ಸಾಧ್ಯತೆಗಳ ಕುರಿತಾಗಿ ಅನೇಕರು ಆಸಕ್ತಿ ತೋರಿದರು. ಅಮೆರಿಕದಲ್ಲಿ ಅನೇಕ ವಿಜ್ಞಾನಿಗಳು ಹಾಗೂ ಎಂಜಿನಿಯರುಗಳು ಅಸಂಖ್ಯಾತ ಪ್ರಯೋಗ ಪ್ರಯತ್ನಗಳ ನಂತರ ೧೯೧೬ರಲ್ಲಿ ಗಮನಾರ್ಹವಾದ ಸಾಧನೆ ತೋರಿ ಮೊದಲ ಪ್ರಸಾರ ಮಾದರಿಯನ್ನು ನಿರ್ಮಿಸುವಲ್ಲಿ ಯಶಸ್ವಿಯಾದರು. ೧೯೨೦ರ ಪ್ರಾರಂಭದಲ್ಲಿ ಅಮೆರಿಕದ ಪಿಟ್ಸ್‌ಬರ್ಗ್‌ನಲ್ಲಿ ಪ್ರಪಂಚದ ಮೊಟ್ಟ ಮೊದಲ ಬಾನುಲಿ ಪ್ರಸಾರ ವ್ಯವಸ್ಥೆಯನ್ನು ಸ್ಥಾಪಿಸಲಾಯಿತು. ಅದೇ ವರ್ಷ ಫೆಬ್ರವರಿ ೨೩ರಂದು ಇಂಗ್ಲೆಂಡ್ ಚೆಲ್ಮ್ಸ್‌ಫೋರ್ಡ್ ನಲ್ಲಿ ಮಾರ್ಕೊನಿ ಕಂಪೆನಿ ಇನ್ನೊಂದು ಪ್ರಸಾರ ವ್ಯವಸ್ಥೆಯನ್ನು ಸ್ಥಾಪಿಸಿ ಯಶಸ್ವಿಯಾಗಿ ಮೊಟ್ಟ ಮೊದಲ ರೇಡಿಯೊ ಕಾರ್ಯಕ್ರಮವನ್ನು ಬಿತ್ತರಿಸಿದರು.

ಭಾರತದಲ್ಲಿ ಆಗಸ್ಟ್ ೧೯೨೧ರಲ್ಲಿ ಅಂಚೆ ಮತ್ತು ತಂತಿ ಇಲಾಖೆಯ ಸಹಯೋಗದೊಡನೆ "ದಿ ಟೈಮ್ಸ್ ಆಫ್ ಇಂಡಿಯಾ" ಪತ್ರಿಕೆ ತನ್ನ ಮುಂಬೈ ಕಚೇರಿ ಕಟ್ಟಡದ ಮೇಲೆ ಸ್ಥಾಪಿಸಲಾದ ಪ್ರಸಾರ ವ್ಯವಸ್ಥೆಯನ್ನು ಉಳಿಸಿ ಸಂಗೀತ ಕಾರ್ಯಕ್ರಮವನ್ನು ಯಶಸ್ವಿಯಾಗಿ ಬಿತ್ತರಿಸಿತು. ನಂತರ ಮುಂಬೈ, ಕೊಲ್ಕತ್ತಾ ಮತ್ತು ಚೆನ್ನೈ ನಗರಗಳಲ್ಲಿ ಕೆಲ ಖಾಸಗಿ ರೇಡಿಯೊ ಕ್ಲಬ್‌ಗಳು ಅಸ್ತಿತ್ವಕ್ಕೆ ಬಂದವು. ೧೯೨೭ರಲ್ಲಿ ವ್ಯವಸ್ಥಿತ ಪ್ರಸಾರದ ಮೊದಲ ಪ್ರಯತ್ನವಾಗಿ 'ಇಂಡಿಯನ್ ಬ್ರಾಡ್ ಕಾಸ್ಟಿಂಗ್ ಕಂಪೆನಿ' ಸ್ಥಾಪಿಸಲ್ಪಟ್ಟಿತು. ೧೯೩೦ರಿಂದ ಭಾರತದಲ್ಲಿನ ಬಾನುಲಿ ಪ್ರಸಾರವು ಸರಕಾರದ ನೇರ ಆಡಳಿತಕ್ಕೆ ಒಳಗಾಯಿತು. ೧೯೩೬ರಲ್ಲಿ ಇಂಡಿಯನ್ ಬ್ರಾಡ್‌ಕಾಸ್ಟಿಂಗ್ ಕಂಪೆನಿಯ ಹೆಸರನ್ನು ಬದಲಾಯಿಸಿ 'ಆಲ್ ಇಂಡಿಯಾ ರೇಡಿಯೊ' ಎಂದು ಮರುನಾಮಕರಣ ಮಾಡಲಾಯಿತು. ಪ್ರಸ್ತುತ 'ಆಲ್ ಇಂಡಿಯಾ ರೇಡಿಯೊ' ಎಂಬುದು ಬಳಕೆಯಲ್ಲಿದ್ದರೂ ಒಟ್ಟು ವ್ಯವಸ್ಥೆಯನ್ನು ೧೯೯೭ರಿಂದ "ಪ್ರಸಾರ ಭಾರತಿ"ಎಂಬ ಹೆಸರಿನಿಂದ ಗುರುತಿಸಲಾಗುತ್ತದೆ (ನವಿಲೂರು, ೨೦೦೭ಙ).

ಆಲ್ ಇಂಡಿಯಾ ರೇಡಿಯೊದ ಇತಿಹಾಸವನ್ನು ಭಾರತದಲ್ಲಿನ ಬಾನುಲಿಯ ಇತಿಹಾಸವೆಂದೇ ಪರಿಗಣಿಸಲಾಗುತ್ತಿದೆ. ದೇಶದ ಒಟ್ಟಗಲಕ್ಕೂ ಹರಡಿರುವ ಸುಮಾರು ೨೦೮ಕ್ಕಿಂತಲೂ ಹೆಚ್ಚು ಬಾನುಲಿ ಕೇಂದ್ರಗಳು ದೇಶದ ೯೮.೫ರಷ್ಟು ಪ್ರದೇಶವನ್ನು ತಲುಪುತ್ತಿವೆ. ಭಾರತ ದೇಶದ ಜನಸಂಖ್ಯೆಯ ಪ್ರತಿ ೮ ಮಂದಿಗೆ ೧ ರಂತೆ ಇರುವ ರೇಡಿಯೊ ಸೆಟ್‌ಗಳು ಈ ಮಾಧ್ಯಮದ ಪ್ರಬಲತೆಗೆ ಸಾಕ್ಷಿಯಾಗಿವೆ. ಆಲ್ ಇಂಡಿಯಾ ರೇಡಿಯೊ ೨೪ ಭಾಷೆಗಳ ಹಾಗೂ ೧೪೬ ಭಾಷೆಗಳಲ್ಲಿ ಕಾರ್ಯಕ್ರಮ ಬಿತ್ತರಿಸುತ್ತಿದೆ. ದೇಶದ ೧೦೬ ಕೋಟಿ ಜನಸಂಖ್ಯೆಯಲ್ಲಿ ಶೇಕಡ ೪೦ರಷ್ಟು ಮಂದಿ ಅನಕ್ಷರಸ್ಥರು ಇರುವ, ಶೇಕಡ ೩೦ರಷ್ಟು ಮಂದಿ ಬಡತನ ರೇಖೆಗಿಂತ ಕೆಳಗಿರುವ ಹಾಗು ಶೇ.೭೦ರಷ್ಟು ಎಲ್ಲೆಡೆ ಚದುರಿ ಹೋಗಿರುವ ೫,೭೫,೦೦೦ ಹಳ್ಳಿಗಳಲ್ಲಿ ವಾಸಿಸುವ ಗ್ರಾಮೀಣ ಜನಸಮೂಹಕ್ಕೆ ಮಾಹಿತಿ ನೀಡುವ, ಶಿಕ್ಷಣ ನೀಡುವ ಹಾಗೂ ಮನರಂಜನೆ ಒದಗಿಸುವ ಬೃಹತ್ ಕಾರ್ಯದ ಜವಾಬ್ದಾರಿ ಹೆಗ್ಗಳಿಕೆಯನನ್ನು ಆಲ್ ಇಂಡಿಯಾ ರೇಡಿಯೊ ವಹಿಸಿದೆ. 'ಬಾನುಲಿ ಅತ್ಯದ್ಭುತ ಶಕ್ತಿ, ಅದರಲ್ಲಿ ಶಕ್ತಿದೇವತೆಯ ಸ್ವರೂಪವನ್ನು ಕಾಣುತ್ತೇನೆ' ಎಂಬ ಮಹಾತ್ಮಾ ಗಾಂಧಿಯವರ ಮಾತು ಬಾನುಲಿಯ ಪಾತ್ರವನ್ನು ಎತ್ತಿ ತೋರಿಸುವಂತಿದೆ. ಇದೀಗ ದೇಶದಾದ್ಯಂತ ಹಲವಾರು ಬಾನುಲಿ ಎಫ್‌ಎಂ ಕೇಂದ್ರಗಳು ಕಾರ್ಯಾಚರಿಸುತ್ತಿದ್ದು, ಇಂದಿನ ಜನತೆಗೆ ತಕ್ಕುದಾದ ಸುದ್ದಿ ಹಾಗೂ ಕಾರ್ಯಕ್ರಮಗಳನ್ನು ನೀಡುತ್ತಿದೆ ಮಾತ್ರವಲ್ಲ ಆಸಕ್ತಿಯುಳ್ಳವರಿಗೆ ಉದ್ಯೋಗಾವಕಾಶವನ್ನು ಒದಗಿಸಿದೆ ಎನ್ನಬಹುದು.

೨.೨.ಇ ಟೆಲಿವಿಷನ್

ಟೆಲಿವಿಷನ್ ಮಾಧ್ಯಮಕ್ಕೆ ಬೇರೆ ಮಾಧ್ಯಮಗಳಿಗಿಂತ ಮಿಗಿಲಾದ ಗುಣಗಳಿರುವುದರಿಂದ ಅದು ಅತ್ಯಂತ ಜನಪ್ರಿಯವಾದ ಮಾಧ್ಯಮವಾಗಿದೆ. ಮಾನವನು ತನ್ನ ಮೇಲೆ ಪ್ರಯೋಗಿಸಿಕೊಂಡಿರುವ ಅತ್ಯಂತ ಪ್ರಭಾವಶಾಲಿಯಾದ ಶಕ್ತಿಗಳಲ್ಲಿ ಟೆಲಿವಿಷನ್ ಒಂದು ಎಂದು ನಿಕೊಲಸ್ ಜಾಕ್‌ನ್‌ಸನ್ ಹೇಳಿದ್ದಾರೆ. ಆ ಮೂಲಕ ನಮ್ಮ ಜೀವನದಲ್ಲಿ ಹೊಂದಿರುವ ಪ್ರಾಮುಖ್ಯತೆಯನ್ನು ಮತ್ತು ನಮ್ಮ ಸಮಾಜದಲ್ಲಿ ಅದು ತಂದಿರುವ ನಾಟಕೀಯವಾದ ಪರಿವರ್ತನೆಗಳನ್ನು ಅವರು ಗುರುತಿಸಿದ್ದಾರೆ (ನವಿಲೂರು, ೨೦೦೭ಅ).

ಟೆಲಿವಿಷನ್ ವಸ್ತು ವಿಷಯ ವೈವಿಧ್ಯತೆ, ಮನವೊಲಿಕೆಯ ಗುಣ, ಸಂವಹನಶೀಲಗುಣ ಹಾಗೂ ಸಮೂಹ ಶ್ರೋತೃಗಣವನ್ನು ಹೊಂದಿರುವ ದೃಶ್ಯಶ್ರಾವ್ಯ ಮಾಧ್ಯಮ. ಇದು ಮಾಹಿತಿಯನ್ನು ಪ್ರಚಲಿತ ವಿದ್ಯಮಾನಗಳ ವಾರ್ತೆಗಳ ಮೂಲಕ ಸಂವಾದ ಕಾರ್ಯಕ್ರಮಗಳ ಮೂಲಕ ಬೋಧನೆ ಮಾಡುವ ವಿಶೇಷ ಶ್ರೋತೃಗಣವನ್ನು ಹೊಂದಿದೆ. ಅಲ್ಲದೆ ಶಿಕ್ಷಣ ನೀಡುವ, ಕ್ರೀಡೆ, ಸಂಗೀತ, ಚಲನಚಿತ್ರ, ಗೇಮ್‌ಶೋ, ಮೆಗಾ ಧಾರಾವಾಹಿಗಳ ಮೂಲಕ ಮನರಂಜನೆ ನೀಡುವ ಟೆಲಿವಿಷನ್ ಆರ್ಥಿಕ ಶಕ್ತಿಯೇ ಆಗಿದೆ ಮಾತ್ರವಲ್ಲ, ಅಭಿವೃದ್ಧಿಗೆ ಪೂರಕವಾಗಿ ಕಾರ್ಯನಿರ್ವಹಿಸುತ್ತದೆ. ಟೆಲಿವಿಷನ್ ಅಭಿವೃದ್ಧಿ ಮತ್ತು ಪ್ರಸಾರ ಕ್ಷೇತ್ರದಲ್ಲಿ ಯುನೈಟೆಡ್ ಕಿಂಗ್‌ಡಂ, ಅಮೆರಿಕ ಸಂಯುಕ್ತ ಸಂಸ್ಥಾನ, ರಷ್ಯಾ ಮತ್ತು ಐರೋಪ್ಯ ರಾಷ್ಟ್ರಗಳು ಮುಂಚೂಣಿಯಲ್ಲಿದ್ದವು. ಹಾಗಾಗಿ ಟೆಲಿವಿಷನ್ ಅನ್ವೇಷಣೆಯ ಯಶಸ್ಸನ್ನು ಯಾವುದೇ ಒಬ್ಬ ವ್ಯಕ್ತಿಗೆ ನೀಡುವುದು ಬಹಳ ಕಷ್ಟ.

ಸಮಾಜದ ಮೇಲೆ ಟೆಲಿವಿಷನ್ ಪ್ರಭಾವ ಮತ್ತು ಅದರ ಸಂವಹನದ ಸಾಮರ್ಥ್ಯದ ಹಿರಿಮೆ ಕುರಿತಂತೆ ಬೇರೆಡೆಗಳಿಂದ ಬಂದ ಯಶಸ್ವಿ ಪ್ರಕರಣಗಳು ಭಾರತ ಸರಕಾರವೂ ಟೆಲಿವಿಷನ್ ಸೇವೆಯನ್ನು ಪ್ರಾರಂಭಿಸುವಂತೆ ಪ್ರಚೋದನೆ ನೀಡಿತು. ಹೀಗಾಗಿ ೧೯೫೬ರಲ್ಲಿ ದೆಹಲಿಯಲ್ಲಿ ನಡೆದ ಯುನೆಸ್ಕೊದ ಸಾಮಾನ್ಯ ಮಹಾಧಿವೇಶನದಲ್ಲಿ ತೆಗೆದುಕೊಳ್ಳಲಾದ ನಿರ್ಣಯದ ಆಧಾರದ ಮೇಲೆ ಸೆಪ್ಟೆಂಬರ್ ೧೫, ೧೯೫೯ರಲ್ಲಿ ಟೆಲಿವಿಷನ್‌ನ್ನು ನವದೆಹಲಿಯಲ್ಲಿ ಪರಿಚಯಿಸಲಾಯಿತು. ಪ್ರಯೋಗಾತ್ಮಕವಾಗಿ ಆರಂಭಿಸಲಾದ ಈ ಸೇವೆಗೆ ಬಹಳ ಹೆಚ್ಚಿನ ಬಂಡವಾಳದ ಅವಶ್ಯಕತೆ ಇದ್ದುದರಿಂದ ಯುನೆಸ್ಕೊ ೨೦,೦೦೦ ಅಮೆರಿಕನ್ ಡಾಲರ್‌ಗಳಷ್ಟು

ಆರ್ಥಿಕ ಸಹಾಯವನ್ನು ಒದಗಿಸಿತು. ಭಾರತದ ಮನೆಮನೆಗಳಲ್ಲಿ ಟೆಲಿವಿಷನ್ ಸೆಟ್‌ಗಳು ಇಲ್ಲದಿದ್ದ ಕಾರಣ ೧೮೦ ಟೆಲಿವಿಷನ್ ವೀಕ್ಷಣೆ ಅಂದಿನ ಸಂದರ್ಭದಲ್ಲಿ ಒಂದು ವಿಶೇಷ ಅನುಭವವೇ ಆಗಿತ್ತು. ದೆಹಲಿಯ ಮಾಧ್ಯಮಿಕ ಶಾಲೆಗಳಲ್ಲಿಯೂ ಸುಮಾರು ೬೦೦ ಟ.ವಿ. ಸೆಟ್‌ಗಳನ್ನು ಸ್ಥಾಪಿಸಿ ಶೈಕ್ಷಣಿಕ ಕಾರ್ಯಕ್ರಮಗಳನ್ನು ಪ್ರಸಾರ ಮಾಡಲಾಯಿತು.

ಗ್ರಾಮೀಣ ಅಭಿವೃದ್ಧಿಗೂ ಬಳಸಲಾದ ಈ ಮಾಧ್ಯಮ ಹಸಿರು ಕ್ರಾಂತಿಯನ್ನು ಸಾಧಿಸುವಲ್ಲಿ ಪ್ರಮುಖ ಪಾತ್ರ ವಹಿಸಿತು. ಎರಡನೆ ಟ.ವಿ,ಕೇಂದ್ರವು ಅಕ್ಟೋಬರ್ ೨, ೧೯೭೨ರಂದು ಶ್ರೀನಗರ, ಕಾಶ್ಮೀರಗಳಲ್ಲಿ ಕೊಲ್ಕತ್ತ, ಚೆನ್ನೈ, ಪುಣೆ, ಲಕ್ನೋ ಮೊದಲೆಡೆ ಪ್ರಸರಣ ಜಾಲವನ್ನು ವಿಸ್ತರಿಸಲಾಯಿತು. ತಂತ್ರಜ್ಞಾನದ ಮಹಾನ್ ಗಾರುಡಿಗರಾಗಿದ್ದ ಡಾ.ವಿಕ್ರಮ ಸಾರಾಭಾಯ್ ಅವರು ೧೯೬೯ರಷ್ಟು ಹಿಂದೆಯೇ ಪ್ರಾರಂಭಿಸಿದ್ದ ಒಂದು ಒಪ್ಪಂದದ ಅನ್ವಯವಾಗಿ ಪ್ರತಿಷ್ಠಿತ ‘ಉಪಗ್ರಹ ಟೆಲಿವಿಷನ್ ಬೋಧನಾ ಪ್ರಯೋಗ’ಕ್ಕೆ ಭಾರತವನ್ನು ಆಯ್ಕೆ ಮಾಡಿದಾಗ ೧೯೭೫ರಲ್ಲಿ ಟೆಲಿವಿಷನ್ ಪ್ರಸಾರವು ಹೆಚ್ಚಿನ ಶಕ್ತಿ ಪಡೆಯಿತು. ಎಸ್‌ಐಟಿಇ ಕುಟುಂಬಕಲ್ಯಾಣ, ಶಾಲಾ ವಿದ್ಯಾಭ್ಯಾಸ, ಶಿಕ್ಷಕರ ತರಬೇತಿ ಮತ್ತು ಕೃಷಿ ಪ್ರೋತ್ಸಾಹಧನಕ್ಕೆ ಸಂಬಂಧಿಸಿದಂತೆ ವಿಶ್ವದ ಅತ್ಯಂತ ದೊಡ್ಡ ಟಿ.ವಿ. ಪ್ರಯೋಗವಾಗಿತ್ತು. ಟೆಲಿವಿಷನ್‌ಗೆ ಸ್ವತಂತ್ರ ಸ್ಥಾನಮಾನಗಳನ್ನು ಮನಗಂಡು ೧೯೭೬ರಲ್ಲಿ ಮಾಹಿತಿ ಮತ್ತು ಪ್ರಸಾರ ಸಚಿವಾಲಯವು ದೂರದರ್ಶನವನ್ನು ಸ್ಥಾಪಿಸಿತು. ಭಾರತದ ದೂರದರ್ಶನವು ೧೯೭೬ರಲ್ಲಿ ವಾಣಿಜ್ಯೀಕರಣಗೊಂಡಿತು. ೮ ಕೇಂದ್ರಗಳಿಗೆ ಹೆಚ್ಚುವರಿಯಾಗಿ ಜೈಪುರ, ಹೈದರಾಬಾದ್, ರಾಯಪುರ, ಗುಲ್ಬರ್ಗ, ಸಂಬಾಲ್‌ಪುರ ಮತ್ತು ಮುಝುಫರ್‌ಪುರಂಗಳಲ್ಲಿ ಭೂಪ್ರಸಾರ ಕೇಂದ್ರಗಳನ್ನು ಸ್ಥಾಪಿಸುವ ಮೂಲಕ ಜನವರಿ ೧೯೭೭ರಲ್ಲಿ ಟೆಲಿವಿಷನ್ ಸೇವೆಗಳನ್ನು ವಿಸ್ತರಿಸಲಾಯಿತು.

ಕಪ್ಪು ಬಿಳುಪಿನಿಂದ ಬಣ್ಣದ ಟೆಲೆವಿಷನ್ ಪ್ರಸಾರಕ್ಕೆ ಬದಲಾಗುವ ಪ್ರಮುಖ ಕಾರ್ಯನೀತಿಯ ನಿರ್ಣಯವನ್ನು ೧೯೮೨ರಲ್ಲಿ ತೆಗೆದುಕೊಂಡ ಶ್ರೇಯಸ್ಸು ಮಾಜಿ ಪ್ರಧಾನಿ ಇಂದಿರಾ ಗಾಂಧಿಯವರಿಗೆ ಸಲ್ಲುತ್ತದೆ. ೧೯೮೩ರಲ್ಲಿ ನಾಸಾದಿಂದ ಉಡಾವಣೆಗೊಂಡ ಇನ್ಸಾಟ್–೧ ಬಿ ಯು ಭಾರತೀಯ ಟೆಲಿವಿಷನ್‌ನ ಪ್ರಸಾರ ಬಹಳ ದೊಡ್ಡ ಪ್ರಮಾಣದಲ್ಲಿನ ವಿಸ್ತರಣೆಯನ್ನು ಸಾಧ್ಯವಾಗಿಸಿರುವ ದೇಶದಲ್ಲಿ ಟೆಲಿವಿಷನ್ ಕ್ರಾಂತಿಯನ್ನು ತಂದಂತಹ ಕೇಬಲ್ ಟಿ.ವಿಯನ್ನು ಮುಂಬೈಯಲ್ಲಿ ೧೯೮೫ರಲ್ಲಿ ಪ್ರಾರಂಭಿಸಲಾಯಿತು.

ಭಾರತದಲ್ಲಿ ಉಪಗ್ರಹ ಟೆಲಿವಿಷನ್‌ನ ಆಗಮನವನ್ನು ೧೯೯೧ನೆಯ ಇಸವಿ ಸೂಚಿಸಿತು. ಖಾಸಗಿ ಒಡೆತನದ, ಹೊರದೇಶಗಳಲ್ಲಿ ನೆಲೆಯುಳ್ಳ ಉಪಗ್ರಹ ವಾಹಿನಿಗಳು ಭಾರತದಲ್ಲಿ ತಮ್ಮ ಕಾರ್ಯಾಚರಣೆಯನ್ನು ಪ್ರಾರಂಭಿಸಿದವು. ೨೦ನೆಯ ಶತಮಾನದ ಕೊನೆಯ ದಶಕವನ್ನು ಭಾರತದ ಉಪಗ್ರಹ ಮತ್ತು ಕೇಬಲ್ ಟಿವಿಯ ಸ್ವರ್ಣಯುಗವೆಂದು ಕರೆಯಲಾಗುತ್ತದೆ. ೨೦೦೦ನೆಯ ಇಸವಿಯ ಹೊತ್ತಿಗೆ ಹೆಚ್ಚಾಗಿ ದೇಶ ೮೭ ಕಾರ್ಯಕ್ರಮ ತಯಾರಿಕಾ ಕೇಂದ್ರಗಳಿಂದ, ವಿವಿಧ ಶಕ್ತಿ ಪ್ರಮಾಣದ ಪ್ರಸಾರಗಳ ಸಹಾಯದಿಂದ ದೂರದರ್ಶನವು ವಿಶ್ವದಲ್ಲೇ ಅತಿದೊಡ್ಡ ಪ್ರಸಾರ ಜಾಲವನ್ನು ಸ್ಥಾಪನೆ ಮಾಡಿತ್ತು. ೧೯೯೯-೨೦೦೦ದಲ್ಲಿ ದೂರದರ್ಶನ ಕಾರ್ಯಕ್ರಮಗಳು ೬೦೦ ಕೋಟಿ ರೂ.ಗಳಷ್ಟಿತ್ತು. ಇಂದು ಸುಮಾರು ೫೫,೦೦೦ ಕೋಟಿ ರೂ.ಗಳಷ್ಟು ಆಸ್ತಿಯುಳ್ಳ "ಪ್ರಸಾರದೈತ್ಯ"ವಾಗಿ ದೂರದರ್ಶನ ಬೆಳೆದು ನಿಂತಿದೆ ಎನ್ನಬಹುದು. ಮಾತ್ರವಲ್ಲ ಉದ್ಯೋಗಾವಕಾಶದ ಸೃಷ್ಟಿಗೂ ಕಾರಣವಾಯಿತು.

೨.೨ ಈ ಸಿನಿಮಾ

ಸಿನಿಮಾ ಒಂದು ಶಕ್ತಿಶಾಲಿ ಸಂವಹನ ಮಾಧ್ಯಮ. ಅತ್ಯಂತ ಪ್ರಭಾವಶಾಲಿಯಾದ ಈ ಮಾಧ್ಯಮ ನೋಡುಗನ ಗಮನ ಸೆಳೆದು ಆತನ ಲಕ್ಷ್ಯವನ್ನು ಹಿಡಿದಿಟ್ಟುಕೊಳ್ಳುವ ಸಾಮರ್ಥ್ಯ ಹೊಂದಿದೆ. ಸಿನಿಮಾದ ಅತ್ಯದ್ಭುತ ಬೆಳವಣಿಗೆಗೆ ಅನೇಕ ರಾಷ್ಟ್ರಗಳ ಸಿನಿಮಾಸಕ್ತ ವಿಜ್ಞಾನಿಗಳ ನೇರ ಹಾಗೂ ಪರೋಕ್ಷ ಕೊಡುಗೆಯೇ ಕಾರಣ.

ಸೋವಿಯತ್ ಸಿನಿಮಾ ಪಿತಾಮಹ ಪುಡೋವ್ಕಿನ್ "ಸಿನಿಮಾ – ಮಾತನಾಡುವ, ನೋಡುವ ಯೋಜಿಸಿರುವ ಪ್ರಕ್ರಿಯೆಗಳ ಅಪ್ರತಿಮ ಸಮ್ಮಿಲನ. ಜಗತ್ತಿನಲ್ಲಿ ನಾವು ಕಾಣುವ ಎಲ್ಲಾ ಅಂಶಗಳನ್ನು ಒಂದು ಹೊಸ ಕಲಾಪ್ರಕಾರಕ್ಕೆ ಅಳವಡಿಸಿಕೊಳ್ಳಲು ನಮಗೆ ಸಿಕ್ಕಿರುವ ಅವಕಾಶ. ಸಿನಿಮಾ ಇಲ್ಲಿಯವರೆಗೆ ಮಾನವಕುಲ ಕಂಡಿರುವ ಎಲ್ಲಾ ಕಲಾ ಪ್ರಕಾರಗಳನ್ನು ಹಿಂದಕ್ಕೆ ಹಾಕಿದೆ. ಹಾಗೆಯೇ ಇನ್ನು ಮುಂದೆ ನಮ್ಮನ್ನು ನಾವು ಅಭಿವ್ಯಕ್ತಗೊಳಿಸಲು ಇರುವ ಅತ್ಯುತ್ತಮ ಮಾಧ್ಯಮವೆಂದರೆ ಸಿನಿಮಾ" ಎಂದಿದ್ದಾರೆ (ನವಿಲೂರು, ೨೦೦೭ಃ೩).

ಫ್ರಾನ್ಸ್‌ನ ಲೂಮಿಯೇರ ಸಹೋದರರು, ಜರ್ಮನಿಯ ಸ್ಕ್ಲಾಡನಾವ್‌ಸ್ಕಿ ಮತ್ತು ಅಮೆರಿಕ ಸಂಯುಕ್ತ ಸಂಸ್ಥಾನದ ಥಾಮಸ್ ಆಲ್ವಾ ಎಡಿಸನ್ ಸಿನಿಮಾ ಮಾಧ್ಯಮದ ಅಭಿವೃದ್ಧಿಗೆ ಕಾರಣರಾಗಿದ್ದಾರೆ.ಚಲನೆಯನ್ನು ಛಾಯಾಚಿತ್ರಗಳಲ್ಲಿ ಸೆರೆಹಿಡಿದ ಮೊದಲ

ಛಾಯಾಚಿತ್ರಗ್ರಾಹಕನೆಂದರೆ ಎಡ್ವರ್ಡ್ ಮೆಯ್‌ಬ್ರಿಡ್ಜ್.ಪ್ರಾರಂಭದ ದಿನಗಳಲ್ಲಿ ಥಾಮಸ್ ಆಲ್ವಾ ಎಡಿಸನ್ ತನ್ನ ಬ್ಲಾಕ್ ಮಾರಿಯಾ ಸ್ಟುಡಿಯೊದಲ್ಲಿ ತಯಾರಿಸಿದ ಹಲವಾರು ಸ್ಮರಣಾರ್ಹ ಕಿರುಚಿತ್ರಗಳನ್ನು ತನ್ನ ಕೈನೆಟೊಸ್ಕೋಪ್ ಪ್ರದರ್ಶನಾಲಯಗಳ ಮೂಲಕ ಸಾರ್ವಜನಿಕ ವೀಕ್ಷಣೆಗೆ ಅನುವು ಮಾಡಿದ್ದನು.

ಗಾಜಿನ ಅಥವಾ ತಾಮ್ರದ ಹಲಗೆಗಳ ಬದಲಾಗಿ ಸುರುಳಿ ನೆಗೆಟಿವ್ ಮೇಲೆ ಛಾಯಾಚಿತ್ರವನ್ನು ತೆಗೆಯುವ ತಾಂತ್ರಿಕತೆ ಹಾಗೂ ತೆರೆಯ ಮೇಲೆ ಚಿತ್ರಗಳನ್ನು ಬಿಂಬಿಸುವ ಪ್ರಕ್ಷೇಪಕ ವಿಧಾನಗಳು ಸಿನಿಮಾ ಬಹುಬೇಗ ಸಂವಹನ ಮಾಧ್ಯಮವಾಗಿ ನೆಲೆನಿಲ್ಲಲು ಕಾರಣವಾದವು. ಜಾಗತಿಕ ಯುದ್ಧದ ಅವಧಿಯಲ್ಲಿ ಕೆಲಕಾಲ ಸಿನಿಮಾ ಉದ್ಯಮ ಕೆಲಮಟ್ಟಿಗೆ ಕಳೆಗುಂದಿದರೂ ಹೊಸ ನಿರ್ದೇಶಕರು ಹಾಗೂ ನಿರ್ಮಾಪಕರ ಆಗಮನದೊಂದಿಗೆ ಮರಳಿ ಚೈತನ್ಯ ಪಡೆಯಿತು. ಚಾರ್ಲಿಚಾಪ್ಲಿನ್, ತನ್ನ ಕಾಮಿಡಿಗಳಿಂದ ಮನೆ ಮಾತಾದನು. ಕಾಲಕ್ರಮೇಣ ಸಿನಿಮಾದ ಹೊಸ ಪ್ರಕಾರಗಳು ಬಳಕೆಗೆ ಬಂದವು. ಸೋವಿಯತ್ ಮೊಂಟಾಜ್ ಶೈಲಿ, ಸ್ಟ್ರೈಕ್, ಬ್ಯಾಟಲ್‌ಶಿಪ್ ಪೊಟೆಂಕಿನ್, ಮದರ್, ದಿ ಎಂಡ್ ಆಫ್ ಸೇಂಟ್ ಪೀಟರ್ಸ್‌ಬರ್ಗ್ ಮುಂತಾದ ನೆನಪಿನಲ್ಲುಳಿಯುವಂತಹ ಚಿತ್ರಗಳನ್ನು ನೀಡಿತು.

೧೯೧೦ರಲ್ಲಿ ಭಾರತದಲ್ಲಿ ದುಂಡಿರಾಜ್ ಗೋವಿಂದ್ ಫಾಲ್ಕೆ ನಿರ್ಮಿಸಿದ "ರಾಜಾ ಹರಿಶ್ಚಂದ್ರ" ಭಾರೀ ಯಶಸ್ಸು ಗಳಿಸಿತು. ಅನಂತರ ರಾಮಾಯಣ ಮತ್ತು ಮಹಾಭಾರತದ ಕಥೆಗಳನ್ನಾಧರಿಸಿದ ಚಿತ್ರಗಳು ತೆರೆಕಂಡವು. ಕ್ಷೀಣಗೊಳ್ಳುತ್ತಿದ್ದ ಸಿನಿಮಾ ನೋಡುಗರ ಸಂಖ್ಯೆ ಶಬ್ದದ ಅಳವಡಿಕೆಯೊಂದಿಗೆ ವೃದ್ಧಿ ಕಂಡಿತು. ತದನಂತರ ಹಾಲಿವುಡ್ ಜಾಗತಿಕ ಸಿನಿಮಾ ಉದ್ಯಮದ ರಾಜಧಾನಿಯೆಂದು ಗುರುತಿಸಲ್ಪಟ್ಟಿತು. ೧೯೩೦ರ ದಶಕದಲ್ಲಿ ಚಲನಚಿತ್ರಕ್ಕೆ ವರ್ಣದ ಅಳವಡಿಕೆಯೊಂದಿಗೆ ವಾಸ್ತವವನ್ನು ತೆರೆಯ ಮೇಲೆ ಬಿಂಬಿಸಿರುವ ಪ್ರಯತ್ನಕ್ಕೆ ಹೊಸ ಆಯಾಮ ತೆರೆದುಕೊಂಡಿತು.

ಇದೀಗ ಅತ್ಯಾಧುನಿಕ ತಂತ್ರಜ್ಞಾನದೊಂದಿಗೆ ಸಮಕಾಲೀನ ಚಿತ್ರೋದ್ಯಮ ಪ್ರತಿವರ್ಷ ಸಾವಿರಾರು ಚಿತ್ರಗಳನ್ನು ತೆರೆಗೆ ಅರ್ಪಿಸುತ್ತಿದೆ. ಬೆರಳೆಣಿಕೆಯ ಸಂಖ್ಯೆಯನ್ನು ಬಿಟ್ಟರೆ ಉಳಿದೆಲ್ಲ ಚಿತ್ರಗಳು ವಾಣಿಜ್ಯ ಹಿತಾಸಕ್ತಿಯುಳ್ಳವುಗಳಾಗಿ ನಿರ್ದಿಷ್ಟ ನೋಡುಗ ವರ್ಗವನ್ನೂ ತಲುಪಲು ತಯಾರಾಗುತ್ತಿವೆ. ಭಾರತೀಯ ಚಿತ್ರೋದ್ಯಮ ಅತ್ಯಂತ ಹೆಚ್ಚು ಚಿತ್ರಗಳನ್ನು ತಯಾರಿಸುತ್ತಿದ್ದು ಹಲವಾರು ಮಂದಿಗೆ ಉದ್ಯೋಗಾವಕಾಶಗಳನ್ನೂ ನೀಡಿದೆ ಎಂದರೆ ತಪ್ಪಾಗಲಾರದು.

ಸತ್ಯಜೀತ್‌ರಾಯ್, ಮೃಣಾಲ್‌ಸೇನ್, ಶ್ಯಾಮ್ ಬೆನಗಲ್, ಸತ್ಯು, ಅಡೂರು ಗೋಪಾಲಕೃಷ್ಣನ್, ಅರವಿಂದನ್, ಜಾನ್ ಅಬ್ರಹಾಂ, ಗಿರೀಶ್ ಕಾರ್ನಾಡ್, ಗಿರೀಶ್ ಕಾಸರವಳ್ಳಿ ಮುಂತಾದವರು ಭಾರತೀಯ ಸಿನಿಮಾ ಪರಂಪರೆಯನ್ನು ಎತ್ತಿಹಿಡಿದವರಾಗಿದ್ದಾರೆ. ಒಟ್ಟಿನಲ್ಲಿ ಇದೇ ಪ್ರಪಂಚದಲ್ಲಿ ಅತಿ ಹೆಚ್ಚಿನ ಸಂಖ್ಯೆಯಲ್ಲಿ ಚಲನಚಿತ್ರಗಳನ್ನು ನಿರ್ಮಿಸುವ ರಾಷ್ಟ್ರವಾಗಿದೆ ಭಾರತ.

೨.೨.೮ ಜಾನಪದ ಮಾಧ್ಯಮಗಳು

ಜನಪದ ಮಾಧ್ಯಮಗಳು ಭಿನ್ನ ರೀತಿಯ ಮಾಧ್ಯಮಗಳಾಗಿದ್ದು ಸಾಮಾಜಿಕವಾಗಿ ಪ್ರಾಮುಖ್ಯತೆಯನ್ನು ಪಡೆದಿರುವಂತಹ ಮಾಹಿತಿಗಳನ್ನು ಪ್ರಸಾರಿಸಲು ಬಳಸುವಂಥವು. ಇವುಗಳನ್ನು ಸಾಂಪ್ರದಾಯಿಕ ಮಾಧ್ಯಮಗಳು, ಸಾಂಸ್ಕೃತಿಕ ಮಾಧ್ಯಮಗಳು, ಗ್ರಾಮೀಣ ಮಾಧ್ಯಮಗಳು, ಜನಪದ ಮಾಧ್ಯಮಗಳು, ಮೂಲಸ್ತರದ ಮಾಧ್ಯಮಗಳು, ಸ್ವದೇಶಿ ಮಾಧ್ಯಮ, ಸ್ಥಳೀಯ ಮಾಧ್ಯಮಗಳು ಇತ್ಯಾದಿ ಹೆಸರುಗಳಿಂದ ಗುರುತಿಸಲಾಗುತ್ತದೆ.

ಶತಮಾನಗಳಿಂದ ಅಸ್ತಿತ್ವದಲ್ಲಿದ್ದು, ಇಂದಿಗೂ ಮುಖ್ಯವಾಗಿ ಗ್ರಾಮೀಣ ಪ್ರದೇಶಗಳಲ್ಲಿ ಪ್ರಮುಖ ಸಂಪರ್ಕ ವಾಹಿನಿಗಳಾಗಿಯೂ ಸ್ವದೇಶೀಯವಾದ, ಸ್ಥಳೀಯವಾದ, ಸಾಂಪ್ರದಾಯಿಕವಾದ ಮನರಂಜನಾ ವಿಧಾನಗಳು ಎಂದು ಕಾಫರ್ಡ್ ಮತ್ತು ರೊನ್ನಿ ಅಧಿಕಾರ್ಯ ಜನಪದ ಮಾಧ್ಯಮಗಳ ಅರ್ಥವಿವರಣೆ ನೀಡಿದ್ದಾರೆ. ಜನಪದಗೀತೆಗಳು, ಜಾನಪದ ನೃತ್ಯಗಳು, ಜಾನಪದ ನಾಟಕ ರೂಪಗಳು ಮತ್ತು ಜನಪದ ಸಂಪ್ರದಾಯಗಳನ್ನೂ ಅವು ಹೊಂದಿರುತ್ತವೆ (ನವಿಲೂರು, ೨೦೦೭ಬ).

ಜಾನಪದ ಮಾಧ್ಯಮಗಳು, ಸಾಂಪ್ರದಾಯಿಕ ಜನಪದ ಮಾಧ್ಯಮಗಳು ಹಾಸುಹೊಕ್ಕಾಗಿವೆ. ಅವುಗಳ ಪ್ರಮುಖ ಗುಣಲಕ್ಷಣಗಳೆಂದರೆ ಸರಳತೆ, ನಮ್ರತೆ, ವಿಶ್ವಾಸಾರ್ಹತೆ, ವೈಯಕ್ತಿಕತೆ ಮತ್ತು ಸ್ಥಳೀಯತೆಯ ಗುಣಗಳು. ೨೦ನೆಯ ಶತಮಾನದ ಮೊದಲಲ್ಲಿ, ಬ್ರಿಟಿಷರ ಆಳ್ವಿಕೆಯ ವಿರುದ್ಧ ಭಾರತೀಯರ ಜನಮನವನ್ನು ಜಾಗೃತಗೊಳಿಸಲು ಉತ್ತರ ಪ್ರದೇಶದ ಜನಪ್ರಿಯ ಕಥಾಗೀತವಾದ "ಅಲ್ಹಾ", ಮಾಹಾರಾಷ್ಟ್ರದ "ಲಾವಣಿ", ಕರ್ನಾಟಕದ "ಗೀಗೀಪದ", ತಮಿಳು ನಾಡಿನ "ವಿಲ್ಲುಪಾಟ್ಟು", ಗುಜರಾತಿನ "ಬಾವ್ನಿಭಾವೈ", ಬಂಗಾಳದ "ಕಬಿಗಾನ್" ಇವೆಲ್ಲವನ್ನು

ಬಳಸಿಕೊಳ್ಳಲಾಗಿತ್ತು. ಮೊದಲನೆಯ ಮಹಾಯುದ್ಧದ ಕಾಲದಲ್ಲಿ ಪೂರ್ವ ಪಂಜಾಬ್‌ನ ಪ್ರಸಿದ್ಧ ಗ್ರಾಮೀಣ ನಾಟಕ "ಸ್ವಾಂಗ್"ನ ಜನಪ್ರಿಯ ರಚನಕಾರರಲ್ಲಿ ಒಬ್ಬರಾದ ದೀಪ್‌ಚಂದ್, ಜಾನಪದ ನಾಟಕ ತಂಡವನ್ನು ಕಟ್ಟಿಕೊಂಡು ಹರಿಯಾಣದ ಹಲವು ಯುವಕರು ಸ್ವಾತಂತ್ರ್ಯ ಸಂಗ್ರಾಮದಲ್ಲಿ ಸೇರುವಂತೆ, ಅವರ ಮನವೊಲಿಸುವಲ್ಲಿ ಯಶಸ್ವಿಯಾದರು ಎಂಬುದನ್ನು ಚರಿತ್ರೆಕಾರರು ದಾಖಲಿಸಿದ್ದಾರೆ.

೧೯೪೦ರ ದಶಕದಲ್ಲಿ ರಾಜಕೀಯ ಮತ್ತು ಸಾಂಸ್ಕೃತಿಕ ಅಭಿವೃದ್ಧಿ ಕಾರ್ಯಕ್ರಮಗಳಲ್ಲಿ ಜನರ ಸಹಭಾಗಿತ್ವವನ್ನು ಪ್ರಚೋದಿಸಲು ಭಾರತೀಯ ಕಮ್ಯುನಿಸ್ಟ್ ಪಕ್ಷದ ಸಾಂಸ್ಕೃತಿಕ ರಂಗವಾದ 'ಇಂಡಿಯನ್ ಪೀಪಲ್ಸ್ ಥಿಯೇಟರ್ ಅಸೋಸಿಯೇಶನ್', ಬಂಗಾಳದ "ಜಾತ್ರಾ", ಗುಜರಾತ್‌ನ "ಭಾವೈ" ಮತ್ತು ಆಂಧ್ರಪ್ರದೇಶ "ಬುರ್ರಕಥಾ"ದಂತಹ ಜಾನಪದ ರೂಪಗಳನ್ನು ಪರಿಣಾಮಕಾರಿಯಾಗಿ ಬಳಸಿಕೊಳ್ಳುವ ಪ್ರಯತ್ನ ಮಾಡಿತು. ಸ್ವಾತಂತ್ರ್ಯ ಸಂಗ್ರಾಮದಲ್ಲಿ ಜನಪದ ಮಾಧ್ಯಮಗಳು ವಹಿಸಿದ ಧನಾತ್ಮಕ ಪಾತ್ರದಿಂದ ಪ್ರೋತ್ಸಾಹಗೊಂಡು ಭಾರತ ಸರಕಾರವು ಪಂಚವಾರ್ಷಿಕ ಯೋಜನೆಗಳನ್ನು ಜನಪ್ರಿಯಗೊಳಿಸಲು ೧೯೫೪ರ ಜನವರಿಯಲ್ಲಿ "ಗೀತ ಮತ್ತು ನಾಟಕ ವಿಭಾಗ" ಎಂಬ ಪ್ರತ್ಯೇಕ ಇಲಾಖೆಯನ್ನೇ ಸ್ಥಾಪಿಸಿತು. ಅಲ್ಲದೆ, ಸಂವಹನಕ್ಕೋಸ್ಕರ ಭಾರತದಲ್ಲಿ ಜನಪದ ಮಾಧ್ಯಮಗಳ ಪುನರುತ್ಥಾನ ಮಾಡುವ ಸಾಧ್ಯತೆಗಳನ್ನು ಪರೀಕ್ಷಿಸಲು ೧೯೬೪ರಲ್ಲಿ 'ಅಮರನಾಥ ವಿದ್ಯಾಲಂಕಾರ ಸಮಿತಿ'ಯನ್ನು ನೇಮಕ ಮಾಡಲಾಯಿತು. ಕುಟುಂಬ ಯೋಜನಾ ಕಾರ್ಯಕ್ರಮಗಳಲ್ಲಿ ಜನಪದ ಮಾಧ್ಯಮಗಳನ್ನು ಬಳಸಿಕೊಳ್ಳಲಾಯಿತು. ಭಾರತದಲ್ಲಿ ಹೆಚ್ಚು ಪ್ರಚಲಿತದಲ್ಲಿರುವ ಜನಪದ ರೂಪಗಳೆಂದರೆ ತಮಾಶಾ, ಜಾತ್ರಾ, ಭಾವೈ, ನೌಟಂಕಿ, ಹರಿಕಥಾ, ಬುರ್ರಕಥಾ, ತೇರುಕೊಟ್ಟು, ಕಥಾಗೀತಗಳು, ಬೀದಿ ನಾಟಕಗಳು, ಗೊಂಬೆಯಾಟ, ಯಕ್ಷಗಾನ, ಗೀಗೀಪದ, ಕಥಕ್ಕಳಿ, ಪೊವಾಡಾ, ಗರ್‌ಬಾ, ರಾಸ್‌ದಾಂಡಿಯಾ, ಲಾವಣಿ ಇತ್ಯಾದಿ. ಒಟ್ಟಿನಲ್ಲಿ ಇಂದಿಗೂ ಜನಪದ ಮಾಧ್ಯಮಗಳು ಸಾಮಾಜಿಕ ಪರಿವರ್ತನೆ, ರಾಜಕೀಯ ಸುಧಾರಣೆ ಮತ್ತು ರಾಷ್ಟ್ರೀಯ ಪುನರ್‌ನಿರ್ಮಾಣದ ಸಾಧನಗಳಾಗಿವೆ.

೨.೨.ಊ ಅಂತರ್ಜಾಲ

ಅಂತರ್ಜಾಲವು ಯಂತ್ರಾಂಶ ಮತ್ತು ತಂತ್ರಾಂಶ ತಂತ್ರಜ್ಞಾನಗಳು ಹಾಗೂ ತತ್ಸಂಬಂಧಿಯಾದ ಸೇವೆಗಳೆರಡರ ಸಂಗ್ರಹವಾಗಿದ್ದು ಜಗತ್ತಿನಲ್ಲಿ ಮಹಾಕ್ರಾಂತಿಯನ್ನೇ ಉಂಟುಮಾಡಿದೆ. ಅಂತರ್ಜಾಲದ ಪ್ರಮುಖ ಸೇವೆಗಳಲ್ಲಿ ಪ್ರಮುಖವಾದವುಗಳೆಂದರೆ ವಿದ್ಯುನ್ಮಾನ

ಅಂಚೆ(ಇ–ಮೈಲ್)ಗಳು, ಅಂಚೆಪಟ್ಟಿ(ಮೈಲಿಂಗ್ ಲಿಸ್ಟ್)ಗಳು, ಯೂಸ್‌ನೆಟ್, ನ್ಯೂಸ್‌ಗ್ರೂಪ್‌ಗಳು ಇತ್ಯಾದಿ.

ಮೂಲತಃ ಬಳಕೆದಾರರಲ್ಲಿ ಒಬ್ಬರಿಗೊಬ್ಬರಿಗೆ ಮತ್ತು ದೂರದ ಗಣಕಯಂತ್ರಗಳನ್ನು ಜೋಡಿಸುವ ಪಾರಸ್ಪರಿಕವಾದ ದ್ವಿಮುಖ ಸಂವಹನ ಜಾಲ ಎಂದು ಅಂತರ್ಜಾಲದ ಗುಣಲಕ್ಷಣವನ್ನು ವಿವರಿಸಬಹುದು. ಭಾರತದಲ್ಲಿ ಅಂತರ್ಜಾಲ ವ್ಯಾಪಕತೆಯು ೧೯೯೮ರ ನವೆಂಬರ್‌ನಲ್ಲಿದ್ದ ಕೇವಲ ೧,೭೦,೦೦೦ ಗ್ರಾಹಕರ ಆಧಾರ ಸಂಖ್ಯೆಯಿಂದ ಜೂನ್ ೨೦೦೦ಕ್ಕೆ ೧.೪ದಶಲಕ್ಷಕ್ಕೆ ಹೆಚ್ಚಿದೆ ಎಂಬುದನ್ನು ೨೦೦೦ನೆ ಜೂನ್–ಜುಲೈನಲ್ಲಿ ಭಾರತದ ೬೮ ನಗರ–ಪಟ್ಟಣಗಳಲ್ಲಿ ನಡೆಸಲಾದ ಸರ್ವೇಕ್ಷಣೆಯಿಂದ ತಿಳಿದುಬರುತ್ತದೆ (ನವಿಲೂರು, ಸತ್ಯೇಂದ್ರ ರಾವ್, ೨೦೦೬).

ಪ್ರಸ್ತುತ ವೃತ್ತಪತ್ರಿಕೆಗಳ ಭವಿಷ್ಯವು ಅಂತರ್ಜಾಲದ ಮೇಲೆ ಅವಲಂಬಿತವಾಗುತ್ತಿದೆ. ಈಗಾಗಲೇ ವೃತ್ತಪತ್ರಿಕೆಗಳು ಹಾಗೂ ಇತರ ಮಾಧ್ಯಮ ಸಂಸ್ಥೆಗಳು ತಮ್ಮ ನಿಯತವಾದ ಸೇವೆಗಳೊಂದಿಗೆ ಅಂತರ್ಜಾಲ ಆವೃತ್ತಿಗಳನ್ನು ಆಯ್ಕೆಮಾಡಿಕೊಂಡಿವೆ. ಆನ್‌ಲೈನ್ ವೃತ್ತ ಪತ್ರಿಕೆಗಳು ಬಳಕೆದಾರರಿಗೆ ಮಾಹಿತಿ ಒದಗಿಸುವಲ್ಲಿ ಪ್ರಧಾನ ಪಾತ್ರವನ್ನೇ ವಹಿಸಿವೆ.

ಮಾಧ್ಯಮ ವೃತ್ತಿನಿರತರು ಗಣಕಯಂತ್ರದ ಬಳಕೆಯನ್ನು ಕಲಿಯಬೇಕಾದ ಅಗತ್ಯತೆಯಿದೆ. ಯಾವುದೇ ಆಧುನಿಕ ಮಾಧ್ಯಮ ಸಂಸ್ಥೆಯನ್ನು ಗಣಕ ಯಂತ್ರವಿಲ್ಲದೆ ಊಹಿಸಿಕೊಳ್ಳುವುದೂ ಸಾಧ್ಯವಿಲ್ಲ. ಮಾಧ್ಯಮ ವೃತ್ತಿನಿರತರು ವಿಂಡೋಸ್‌ನ ಬಳಕೆ ಕುರಿತಾಗಿ, ಮೌಸ್‌ನ ಬಳಕೆ, ಸ್ಟಾರ್ಟ್ ಬಟನ್‌ನ ಬಳಕೆ, ಅಡೋಬ್ ಫೋಟೊಶಾಪ್‌ನ ಬಳಕೆ, ಚಿತ್ರಗ್ರಹಿಕೆಯ ವಿಧಾನ, ಕ್ವಾರ್ಕ್ ಎಕ್ಸ್‌ಪ್ರೆಸ್ ಪುಟ ವಿನ್ಯಾಸ ತಂತ್ರಾಂಶದ ಬಳಕೆ ಕುರಿತಾಗಿ ಜ್ಞಾನ ಬೆಳೆಸಿಕೊಳ್ಳಬೇಕಾದ ಅಗತ್ಯತೆಯಿದೆ.

೨.೨.೧ ಮಾಧ್ಯಮ ಕಾನೂನು

ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಮಾಧ್ಯಮಗಳನ್ನು ನಾಲ್ಕನೆಯ ಆಧಾರ ಸ್ತಂಭ ಎಂದು ಕರೆಯಲಾಗಿದೆ. ಆದರೆ ಮಾಧ್ಯಮಗಳ ಸಿಬ್ಬಂದಿಗಳು ಸಾಮಾನ್ಯ ಪ್ರಜೆಗಳು ಹೊಂದಿರುವಂತಹ ಅರ್ಹ ಮತ್ತು ಸೀಮಿತ ಅಭಿವ್ಯಕ್ತಿ ಸ್ವಾತಂತ್ರ್ಯಗಳನ್ನು ಹೊಂದಿದ್ದಾರೆ. ಅಮೆರಿಕ ಸಂಯುಕ್ತ ಸಂಸ್ಥಾನದಲ್ಲಿ ಸಂವಿಧಾನವು ಮಾಧ್ಯಮ ಪ್ರತಿನಿಧಿಗಳು ಮತ್ತು ಪ್ರಜೆಗಳಿಗೆ ಪರಿಪೂರ್ಣ ಸ್ವಾತಂತ್ರ್ಯ

ನೀಡಿದೆ. ಆದರೆ ಭಾರತದಲ್ಲಿ ಅಂತಹ ಪರಿಪೂರ್ಣ ಸ್ವಾತಂತ್ರ್ಯವನ್ನು ಸಂವಿಧಾನ ಶಿಲ್ಪಿಗಳು ನೀಡಿಲ್ಲವಾದರೂ ಮಾಧ್ಯಮಗಳು ಜವಾಬ್ದಾರಿಯುತ ವಿರೋಧಪಕ್ಷದ ನಾಯಕನಂತೆ ಕಾರ್ಯ ನಿರ್ವಹಿಸುವ ಎಲ್ಲಾ ಅವಕಾಶಗಳನ್ನು ನಮ್ಮ ಸಂವಿಧಾನ ಕಲ್ಪಿಸಿಕೊಟ್ಟಿದೆ ಎನ್ನಬಹುದು.

ಭಾರತೀಯ ಮಾಧ್ಯಮದ ಪ್ರತಿನಿಧಿಗಳು ಬಹುಮುಖ್ಯವಾಗಿ ದೇಶದಾದ್ಯಂತ ಚಾಲ್ತಿಯಲ್ಲಿರುವ ಪತ್ರಿಕಾ ಕಾನೂನುಗಳು, ಸಂವಿಧಾನಾತ್ಮಕ ಅವಕಾಶಗಳು ಮತ್ತು ಇತರ ನಿಯಮಾವಳಿಗಳ ಬಗ್ಗೆ ತಿಳಿದಿರಬೇಕಾಗುತ್ತದೆ. ಅಂತಹ ಪ್ರಮುಖ ಕಾನೂನುಗಳೆಂದರೆ ವೃತ್ತಪತ್ರಿಕೆಗಳ ನೋಂದಣಿ ಕಾಯ್ದೆ, ವಾಕ್ ಮತ್ತು ಅಭಿವ್ಯಕ್ತಿ ಸ್ವಾತಂತ್ರ್ಯ, ಮಾನಹಾನಿ ಕಾಯ್ದೆ, ರಾಜ್ಯದ್ರೋಹ ಕಾಯ್ದೆ, ಅಶ್ಲೀಲತೆ, ಗ್ರಂಥಸ್ವಾಮ್ಯ ಕಾಯ್ದೆ, ಅಧಿಕೃತ ರಹಸ್ಯ ಕಾಯ್ದೆ, ನ್ಯಾಯಾಂಗ ನಿಂದನೆ ಕಾಯ್ದೆ, ಶಾಸಕಾಂಗ ನಿಂದನೆಕಾಯ್ದೆ, ಖಾಸಗಿಜೀವನದ ಹಾಗೂ ಏಕಾಂತತೆಯ ಹಕ್ಕು, ಸರಕಾರ ಉರುಳಿಸುವ ಸಂಚು, ಧರ್ಮನಿಂದನೆ, ಕೋಮು ಸೌಹಾರ್ದತೆಗೆ ಭಂಗ ಉಂಟು ಮಾಡುವುದು, ಯುವಜನರಿಗೆ ಮಾರಕವಾಗುವಂತೆ ನಡೆದುಕೊಳ್ಳುವುದು ಇತ್ಯಾದಿ (ಮಹೇಶ್ಚಂದ್ರಗುರು,೨೦೦೭,ನವಿಲೂರು, ೨೦೦೭).

ಕಾನೂನುಗಳು ಭಾರತೀಯ ಸಂವಿಧಾನ, ಭಾರತೀಯ ದಂಡಸಂಹಿತೆ ಮೊದಲಾದ ಗ್ರಂಥಗಳಲ್ಲಿ ನಮೂದಿಸಲ್ಪಟ್ಟಿವೆ. ಅಲ್ಲದೆ ಪತ್ರಿಕೋದ್ಯಮ ನೀತಿ ಸಂಹಿತೆ, ಪ್ರಸಾರ ನೀತಿ ಸಂಹಿತೆ, ಜಾಹೀರಾತು ನೀತಿ ಸಂಹಿತೆ, ಸಾರ್ವಜನಿಕ ಸಂಪರ್ಕ ನೀತಿ ಸಂಹಿತೆ ಮೊದಲಾದ ನೀತಿ ಸಂಹಿತೆಗಳನ್ನು ರೂಪಿಸಲಾಗಿದೆ.ಇವುಗಳನ್ನು ಚಾಚೂ ತಪ್ಪದೆ ಪಾಲಿಸಬೇಕಾದ್ದು ಅತ್ಯವಶ್ಯ.

ಅತಂತ್ರ ಮತ್ತು ಅಸಂಘಟಿತ ಪತ್ರಕರ್ತರಿಗೆ ಕಾನೂನುಬದ್ಧವಾಗಿ ನ್ಯಾಯೋಚಿತ ವೇತನ, ಉದ್ಯೋಗ ಭದ್ರತೆ ಮತ್ತಿತರ ಮೂಲಭೂತ ಸೌಲಭ್ಯಗಳನ್ನು ಒದಗಿಸುವ ನಿಟ್ಟಿನಲ್ಲಿ ಕೇಂದ್ರಸರಕಾರ ೧೯೫೫ರಲ್ಲಿ ಕಾರ್ಯನಿರತ ಪತ್ರಕರ್ತರ ಕಾಯ್ದೆಯನ್ನು ಜಾರಿಗೆ ತಂದಿತು. ಈ ಕಾಯ್ದೆ ಕಾರ್ಯನಿರತ ಪತ್ರಕರ್ತರ ವೇತನ ಮಂಡಳಿ ಮತ್ತು ಇತರ ಪತ್ರಿಕಾ ನೌಕರರ ವೇತನ ಮಂಡಳಿಗಳನ್ನು ರಚಿಸಲು ಅವಕಾಶ ನೀಡಿತು. ಇದು ಪತ್ರಕರ್ತರ ವೇತನ, ರಜೆ, ಮತ್ತಿತರ ಸೌಲಭ್ಯಗಳ ಅನುಕೂಲ ಒದಗಿಸಿದೆ.

೨.೨.೨ ಪತ್ರಕರ್ತರ ಕರ್ತವ್ಯಗಳು ಮತ್ತು ಜವಾಬ್ದಾರಿ

ಆಧುನಿಕ ಸಮಾಜದಲ್ಲಿ ಪತ್ರಕರ್ತನ ಪಾತ್ರ ಮಹತ್ವವುಳ್ಳದ್ದು. ಪತ್ರಕರ್ತರು ಮಾಹಿತಿಯನ್ನು ಕಲೆಹಾಕಿ ಅದರ ಪ್ರಸಕ್ತತೆ ಹಾಗೂ ಉಪಯುಕ್ತತೆಗೆ ಅನುಗುಣವಾಗಿ ಪಸರಿಸುತ್ತಾನೆ.ಪ್ರತಿಯೊಂದು ಕ್ಷಣದಲ್ಲಿ ಬೇಡಿಕೆಯಲ್ಲಿರುವ ಸುದ್ದಿಗಳನ್ನು ಜನರು ಪಡೆಯಲು ಸಹಕರಿಸುವಂತಹ ಕೆಲಸಗಳನ್ನು ನಿರ್ವಹಿಸುವುದು ಪತ್ರಕರ್ತನ ಮುಖ್ಯ ಕೆಲಸ. ಬೃಹತ್ ಸಂಖ್ಯೆಯ ಓದುಗರಿಗೆ ಪತ್ರಕರ್ತನೇ ಸ್ನೇಹಿತ ಹಾಗೂ ಮಾರ್ಗದರ್ಶಿ.

ಪತ್ರಿಕೆ ಮುದ್ರಿಸಿರುವುದನ್ನು ಅನಕ್ಷರಸ್ಥರೂ ಪೂರ್ಣವಾಗಿ ನಂಬುತ್ತಾರೆ. ಗಾಳಿಸುದ್ದಿ ಪ್ರಕಟಿಸುವುದು ಯೋಗ್ಯವಲ್ಲ. ಪತ್ರಕರ್ತರ ಚಟುವಟಿಕೆಗಳನ್ನು ಸಾಮಾಜಿಕ, ರಾಜಕೀಯ, ಸಾಂಸ್ಕೃತಿಕ ಹಾಗೂ ಆರ್ಥಿಕ ಕಾರ್ಯಗಳಂತಹ ಕೆಲಸಗಳಲ್ಲಿ ಗುರುತಿಸಬಹುದು. ಪತ್ರಕರ್ತರು ವಸ್ತುನಿಷ್ಠ ಸುದ್ದಿಸಂಗ್ರಹ ಮತ್ತು ಸರಳ, ನೇರ, ಸತ್ಯನಿಷ್ಠ ಸಮರ್ಪಣೆಗೆ ಮಹತ್ವ ನೀಡಬೇಕಾಗುತ್ತದೆ.. ಪತ್ರಕರ್ತರು ಸ್ವಂತ ಅಭಿಪ್ರಾಯಗಳನ್ನು ಓದುಗರಿಗೆ ನೀಡಲಾಗದು. ಆದರೆ ಅವರು ಸಂಪಾದಕೀಯ ಬರಹಗಾರರಾಗಿದ್ದಾಗ, ಅಂಕಣಕಾರರಾಗಿದ್ದಾಗ ಹಾಗೂ ವಿವರಣೆಕಾರರಾಗಿದ್ದಾಗ ಮಾತ್ರ ಅದು ಸಾಧ್ಯ. ಸುದ್ದಿ ಪುಟಗಳಲ್ಲಿ ವರದಿಗಾರರ ಮತ್ತು ಉಪಸಂಪಾದಕರ ಸ್ವಂತ ಅಭಿಪ್ರಾಯ ಖಂಡಿತಾ ಸಲ್ಲದು.

ನಾಲ್ಕನೆ ಅಂಗವೆಂದು ಕರೆಯಲ್ಪಡುವ ಪತ್ರಿಕೋದ್ಯಮ ಸಾರ್ವಜನಿಕ ಹಿತಾಸಕ್ತಿಯ ಎಲ್ಲಾ ವಿಷಯಗಳ ಮೇಲೆ, ಎಲ್ಲ ಘಟನೆಗಳ ಬಗ್ಗೆ ಸತ್ಯನಿಷ್ಠ ಮಾಹಿತಿಯನ್ನು ಸಂಗ್ರಹಿಸಿ, ಪಸರಿಸುವ ಮಹತ್ವಪೂರ್ಣ ಜವಾಬ್ದಾರಿಯನ್ನು ಹೊಂದಿದೆ. ಪತ್ರಿಕೋದ್ಯಮ ಹಣಗಳಿಸಲು ಅಥವಾ ಹೆಸರು ಗಳಿಸಲು ಇರುವ ವೃತ್ತಿಯಲ್ಲ. ಪತ್ರಕರ್ತರು ತಾವು ಸಮಾಜಕ್ಕೆ ಹೊಣೆಗಾರರು ಎಂಬುದನ್ನು ಅರ್ಥೈಸಿಕೊಂಡು ವಿಷಯಗಳ ಬಗ್ಗೆ, ಘಟನಾವಳಿಗಳ ಬಗ್ಗೆ ಸತ್ಯನಿಷ್ಠತೆ, ವಸ್ತುನಿಷ್ಠತೆಯಿಂದಿದ್ದು ಹೆದರಿಕೆ, ಪೂರ್ವಾಗ್ರಹಗಳಿಗೆ ಬಲಿಬೀಳದಿರುವುದು ಜವಾಬ್ದಾರಿಯುತ ಪತ್ರಕರ್ತರ ಹೆಗ್ಗುರುತುಗಳಾಗಿವೆ (ನವಿಲೂರು, ೨೦೦೭).

೨.೨.೩ ಪತ್ರಿಕೋದ್ಯಮ ಶಿಕ್ಷಣ

ಭಾರತದಲ್ಲಿ ೧೯೫೦ರ ನಂತರ ಪತ್ರಿಕೋದ್ಯಮದ ತರಗತಿಗಳನ್ನು ವಿವಿಧ ಕಾಲೇಜುಗಳಲ್ಲಿ ಆರಂಭಿಸಲಾಯಿತು. ಆಗಿನ ಸಂದರ್ಭದಲ್ಲಿ ಕೇವಲ ಸರ್ಟಿಫಿಕೇಟ್ ಕೋರ್ಸ್‌ಗಳನ್ನು ನೀಡುವಲ್ಲಿ ಕಾಲೇಜುಗಳು ಯಶಸ್ವಿಯಾದವು. ಹೈದರಾಬಾದ್ ವಿಶ್ವವಿದ್ಯಾನಿಲಯದ ಸಮೂಹ ಸಂವಹನ ವಿಭಾಗದ ಪ್ರಾಧ್ಯಾಪಕರು ಹಾಗೂ ಭಾರತೀಯ ಸಮೂಹ ಸಂವಹನ ಸಂಸ್ಥೆಯ ನಿರ್ದೇಶಕರು ೧೯೪೧ರಲ್ಲಿ ಪಂಜಾಬ್ ವಿಶ್ವವಿದ್ಯಾನಿಲಯದಲ್ಲಿ ಪತ್ರಿಕೋದ್ಯಮ ಶಿಕ್ಷಣ ಆರಂಭವಾದ ಸಮಯವನ್ನು ಪತ್ರಿಕೋದ್ಯಮ ಶಿಕ್ಷಣದ ವಜ್ರಮಹೋತ್ಸವದ ವರ್ಷ ಎಂದಿದ್ದಾರೆ.

ಅಲ್ಲದೆ ಶ್ರೀಮತಿ ಅನಿಬೆಸೆಂಟ್ ಅವರಿಂದ ಭಾರತದಲ್ಲಿ ಮೊತ್ತ ಮೊದಲ ಬಾರಿಗೆ ಅಡ್ಯಾರ್‌ನ ರಾಷ್ಟ್ರೀಯ ವಿಶ್ವವಿದ್ಯಾನಿಲಯದಲ್ಲಿ ಪತ್ರಿಕೋದ್ಯಮ ಶಿಕ್ಷಣವನ್ನು ಆರಂಭಿಸಲಾಯಿತೆಂದು ೧೯೩೮ರಲ್ಲಿ ಅಲಿಘರ್ ವಿಶ್ವವಿದ್ಯಾನಿಲಯದಲ್ಲಿ ಪತ್ರಿಕೋದ್ಯಮದ ಸಲಹಾಕೋರ್ಸನ್ನು ಪರಿಚಯಿಸಲಾಯಿತೆಂದು ಅಭಿಪ್ರಾಯ ಪಡುತ್ತಾರೆ (ಮುಪ್ಪಿಡಿ, ೨೦೦೮).

೧೯೭೦ ರಿಂದ ೮೦ರಲ್ಲಿ ಸಮೂಹ ಸಂವಹನ ಮತ್ತು ಪತ್ರಿಕೋದ್ಯಮದ ತರಗತಿಗಳು ವಿವಿಧ ಕಾಲೇಜುಗಳಲ್ಲಿ ಆರಂಭವಾದವು. ಮಾತ್ರವಲ್ಲ, ಸಂವಹನ, ಸಾರ್ವಜನಿಕ ಸಂಪರ್ಕ, ಜಾಹೀರಾತು ಅಂಶಗಳನ್ನು ಅವು ಒಳಗೊಂಡಿದ್ದವು. ಪ್ರಸ್ತುತ ಪದವಿ ಹಾಗೂ ಸ್ನಾತಕೋತ್ತರ ಪದವಿ ಶಿಕ್ಷಣದಲ್ಲಿ ಪತ್ರಿಕೋದ್ಯಮದ ತರಗತಿಗಳಿದ್ದು, ಲಕ್ಷಾಂತರ ವಿದ್ಯಾರ್ಥಿಗಳು ಅದರ ಪ್ರಯೋಜನವನ್ನು ಪಡೆದುಕೊಂಡಿದ್ದಾರೆ. ಖಾಸಗಿ ಶಿಕ್ಷಣ ಸಂಸ್ಥೆಗಳಲ್ಲಿಯೂ ಪತ್ರಿಕೋದ್ಯಮದ ಸರ್ಟಿಫಿಕೇಟ್ ಕೋರ್ಸುಗಳು, ಡಿಪ್ಲೊಮಾ ಕೋರ್ಸುಗಳು, ಸ್ನಾತಕೋತ್ತರ ಡಿಪ್ಲೊಮಾ ಕೋರ್ಸುಗಳು ಲಭ್ಯವಿವೆ. ಅಲ್ಲದೆ, ನಿರಂತರವಾಗಿ ತರಗತಿಗೆ ತೆರಳಿ ಪತ್ರಿಕೋದ್ಯಮದ ಶಿಕ್ಷಣವನ್ನು ಪಡೆಯಲಾಗದವರಿಗೆ ದೇಶದ ವಿವಿಧ ಮುಕ್ತ ವಿಶ್ವವಿದ್ಯಾನಿಲಯಗಳಲ್ಲಿ ಈ ಸೌಲಭ್ಯವನ್ನು ಒದಗಿಸಲಾಗಿದೆ.ಮಾಧ್ಯಮ ಕ್ಷೇತ್ರಕ್ಕೆ ಸಂಬಂಧಿಸಿದ ತಾಂತ್ರಿಕ ಕೋರ್ಸುಗಳನ್ನು, ಉದಾಹರಣೆಗೆ, ಸಂಕಲನ, ಛಾಯಾಗ್ರಹಣ, ವಿದ್ಯುನ್ಮಾನ ಶಿಕ್ಷಣವನ್ನು ಆಸಕ್ತಿಯಿರುವವರು ಪಡೆದು ಮಾಧ್ಯಮ ಕ್ಷೇತ್ರಕ್ಕೆ ಕಾಲಿರಿಸಬಹುದಾಗಿದೆ.

೨.೨.೪ ಮಹಿಳೆ, ಶಿಕ್ಷಣ ಮತ್ತು ಸಮಾಜ

ಪ್ರಾಚೀನ ಕಾಲದ ಮಹಿಳೆಯರ ಸ್ಥಾನಮಾನ, ಸ್ಥಿತಿಗತಿ ಕುರಿತಾಗಿ ವೇದಗಳು ಹೆಚ್ಚಿನ ಮಾಹಿತಿಯನ್ನು ನೀಡುತ್ತವೆ. ಋಗ್ವೇದ, ಯಜುರ್ವೇದ, ಸಾಮವೇದ, ಅಥರ್ವವೇದ ಮೊದಲಾದವುಗಳು ಒಂದೇ ಕಾಲದಲ್ಲಿ ರಚಿತವಾದ ಧಾರ್ಮಿಕ ಗ್ರಂಥಗಳಲ್ಲ. ಒಟ್ಟಿನಲ್ಲಿ ವೈದಿಕ ಕಾಲದಲ್ಲಿ ಬಾಲ್ಯವಿವಾಹ ಆಚರಣೆಯಲ್ಲಿರಲಿಲ್ಲ. ಮಾತ್ರವಲ್ಲ, ವಿಧವಾ ಪುನರ್ವಿವಾಹವೂ ಇತ್ತು ಹಾಗೂ ಯಜ್ಞಸಭೆ–ಸಮಾರಂಭ ಮೊದಲಾದ ಚಟುವಟಿಕೆಗಳಲ್ಲಿ ಮಹಿಳೆ ಪುರುಷರೊಂದಿಗೆ ಭಾಗವಹಿಸುತ್ತಿದ್ದಳೆಂಬುದನ್ನು ವೇದಗಳು ಹೇಳುತ್ತವೆ.

ವೈದಿಕ ಕಾಲದ ಅಂತ್ಯ ಭಾಗದಲ್ಲಿ ಪುತ್ರನೇ ಧಾರ್ಮಿಕ ಕ್ರಿಯೆಗಳನ್ನು ಮಾಡಿ ಮೃತರ ಆತ್ಮಗಳಿಗೆ ಸದ್ಗತಿ ಕಾಣಿಸುವವನು ಎನ್ನುವ ನಂಬಿಕೆ ಹೆಚ್ಚಿ ಗಂಡು ಸಂತಾನಕ್ಕಾಗಿ ಹಾತೊರೆಯಲು, ಹೆಣ್ಣು ಹುಟ್ಟಿದರೆ ದೌರ್ಭಾಗ್ಯವೆಂದು ದುಃಖಿಸುವುದು ಪ್ರಾರಂಭವಾಯಿತೆನ್ನಬಹುದು. ಉಪನಿಷತ್ತುಗಳಲ್ಲಿ ಮಹಿಳೆಯರಿಗೆ ಓದು ಬರಹ ಕಲಿಸುತ್ತಿದ್ದರೆಂದೂ, ಅವರು ಪತಿಯೊಂದಿಗೆ ಧಾರ್ಮಿಕ ಕಾರ್ಯದಲ್ಲಿ ಭಾಗವಹಿಸುತ್ತಿದ್ದರೆಂದೂ ಹೇಳಲಾಗಿದೆ. ರಾಮಾಯಣ–ಮಹಾಭಾರತದಲ್ಲೂ ವಿಧವಾ ವಿವಾಹ, ಪ್ರೇಮ ವಿವಾಹ, ಸ್ವಯಂವರ ಅಂದರೆ ಪತಿಯನ್ನು ಆಯ್ಕೆ ಮಾಡುವ ಸ್ವಾತಂತ್ರ್ಯವಿತ್ತೆಂದು ಪ್ರಸ್ತಾಪಿಸಲಾಗಿದೆ.

ಮಹಿಳೆಯ ವಿಚಾರದಲ್ಲಿ ಸ್ಮೃತಿಕಾರ ಮನು ತುಂಬ ನಿರ್ದಯಿ ಹಾಗೂ ಪುರುಷ ಪಕ್ಷಪಾತಿ. ಮತ್ತೊಬ್ಬ ಶಾಸ್ತ್ರಕಾರ ಅತ್ರಿ, ಪತ್ನಿಗೆ ಪತಿಯೇ ದೈವ. ಆದರೂ ಅವಳಿಗೆ ಶಿಕ್ಷಣ ಅಗತ್ಯ ಎಂದಿದ್ದಾನೆ. 'ಬೃಹತ್ ಸಂಹಿತೆ'ಯಲ್ಲಿ ವರಾಹಮಿಹಿರ ಎಂಬ ಲೇಖಕ ಜನ್ಮ ಕೊಟ್ಟ ಮಹಿಳೆಗೆ ಪುರುಷ ಕೃತಜ್ಞನಾಗಿರಬೇಕು. ಆಕೆಯ ಆದರ್ಶ ತಾಯ್ತನ, ಆಕೆ ಪೂಜಾರ್ಹಳು ಎಂದು ಹೆಣ್ಣಿಗೆ ಉನ್ನತ ಸ್ಥಾನವನ್ನು ನೀಡಿದ್ದಾನೆ ಎನ್ನಲಾಗಿದೆ. ಕೌಟಿಲ್ಯನ ಅರ್ಥಶಾಸ್ತ್ರದಲ್ಲಿ ಅರಮನೆ ಮತ್ತು ರಾಜಧಾನಿಗಳಲ್ಲಿ ಮಹಿಳಾ ಅಧಿಕಾರಿಗಳಿದ್ದರು ಎಂದು ಪ್ರಸ್ತಾಪಿಸಲಾಗಿದೆ. ಆದರೂ, ಕ್ರಮೇಣ ಹಿಂದೂ ಧರ್ಮದಲ್ಲಿ ಮೇಲು–ಕೀಳು, ಪವಿತ್ರ–ಅಪವಿತ್ರ ಮುಂತಾದ ವಿಚಾರಗಳು ಹುಟ್ಟಿ ಅನೇಕ ಅನ್ಯಾಯ–ಅನಾಚಾರಗಳು, ಮೂಢನಂಬಿಕೆಗಳು ಪ್ರಾರಂಭವಾಯಿತೆಂದೂ ಬೌದ್ಧ ಧರ್ಮವು ಸ್ತ್ರೀಯರು ಪುರುಷರಿಗಿಂತ ಕೀಳೆಂದು ಸ್ಪಷ್ಟಪಡಿಸಿತು (ಪಟ್ಟಾಭಿ, ೨೦೦೦).

ಬ್ರಿಟಿಷರ ಕಾಲದಲ್ಲಿ ಸತಿ ಪದ್ಧತಿ, ಪರದಾ ಪದ್ಧತಿ, ಬಾಲ್ಯ ವಿವಾಹ ಮುಂತಾದವುಗಳನ್ನು ಕಾಯ್ದೆಗಳ ಮೂಲಕ ತಡೆಗಟ್ಟಲಾಯಿತು. ಆರ್ಯಸಮಾಜ ಮತ್ತು ಬ್ರಹ್ಮಸಮಾಜದ ಅನುಯಾಯಿಗಳು ಸ್ತ್ರೀಶಿಕ್ಷಣದ ಪುರಸ್ಕೃತರು. ಇಂದೂರಿನ ಅಹಲ್ಯಾಬಾಯಿ, ಬೆಳವಡಿ ಮಲ್ಲಮ್ಮ, ಕೆಳದಿಯ ಚೆನ್ನಮ್ಮಾಜಿ,ದಕ್ಷಿಣ ಕನ್ನಡ ಜಿಲ್ಲೆಯ ಉಳ್ಳಾಲದ ರಾಣಿ ಅಬ್ಬಕ್ಕ ರಾಜ್ಯಭಾರ ಮಾಡಿದರೆ, ಸ್ವಾತಂತ್ರ್ಯ ಕಹಳೆಯನ್ನು ಮೊದಲು ಮೊಳಗಿದ ಕೀರ್ತಿ ಕಿತ್ತೂರಿನ ರಾಣಿ ಚೆನ್ನಮ್ಮಳಿಗೆ ಸಲ್ಲುತ್ತದೆ.

೧೮ನೆ ಶತಮಾನದ ಅಂತ್ಯಭಾಗದಲ್ಲಿ ಹೆತ್ತವರು ಹೆಣ್ಣುಮಕ್ಕಳ ವಿವಾಹಕ್ಕೆ ಪ್ರಾಮುಖ್ಯತೆ ಕೊಟ್ಟರು. ಅವಿವಾಹಿತ ಹೆಣ್ಣಿಗೆ ಸಮಾಜದಲ್ಲಿ ಗೌರವವಿರಲಿಲ್ಲ. ಭಾರತದಲ್ಲಿನ ಬ್ರಿಟಿಷ್ ಆಡಳಿತ ಕೇವಲ ರಾಜಕೀಯ ಆಡಳಿತ ಮಾತ್ರವಾಗದೆ, ಭಾರತದ ಅರ್ಥವ್ಯವಸ್ಥೆ, ಸಾಮಾಜಿಕ, ಶೈಕ್ಷಣಿಕ, ಸಾಂಸ್ಕೃತಿಕ ವ್ಯವಸ್ಥೆಗಳಲ್ಲಿ ಪರಿಣಾಮ ಬೀರಿತು. ಸ್ತ್ರೀಯರ ಶಿಕ್ಷಣದ ಪರಿಕಲ್ಪನೆಯು ಬ್ರಿಟಿಷ್ ಆಡಳಿತದ ಮಹತ್ವದ ಪರಿಣಾಮ ಎನ್ನಬಹುದು.

ರಾಜಾರಾಮ್ ಮೋಹನ ರಾಯ್, ಈಶ್ವರಚಂದ್ರ ವಿದ್ಯಾಸಾಗರ, ಕೇಶವಚಂದ್ರ ಸೇನ್, ಎಂ.ಜಿ.ರಾನಡೆ, ದಯಾನಂದ ಸರಸ್ವತಿ, ಮಹಾತ್ಮಾ ಜ್ಯೋತಿರಾವ್ ಫುಲೆ, ರಾವ್ ಬಹದ್ದೂರ್, ಡಿ.ಜಿ.ಖಾರ್ವೆ, ಅನ್ನಿ ಬೆಸೆಂಟ್, ಸರೋಜಿನಿ ನಾಯ್ಡು, ಕಮಲಾದೇವಿ ಚಟ್ಟೋಪಾಧ್ಯಾಯ, ಮಾರ್ಗರೆಟ್ ಕಸಿನ್ಸ್, ಪಂಡಿತ ರಮಾಬಾಯಿ, ರೇಣುಕಾರಾಯ್, ಸರಳಾದೇವಿ ಮೊದಲಾದ ಧೀಮಂತ ವ್ಯಕ್ತಿಗಳು ಮಹಿಳೆಯರಿಗಾಗುತ್ತಿದ್ದ ತಾರತಮ್ಯ, ಅನ್ಯಾಯಗಳ ಬಗ್ಗೆ ಜಾಗೃತಿ ಮೂಡಿಸಿ ಅವುಗಳನ್ನು ತೊಡೆದು ಹಾಕಲು ಶ್ರಮಿಸಿದರು. ಕ್ರೈಸ್ತ ಮಿಶನರಿಗಳು ಹೆಣ್ಣು ಮಕ್ಕಳ ಶಿಕ್ಷಣಕ್ಕೆ ಹೆಚ್ಚಿನ ಪ್ರಾಶಸ್ತ್ಯವನ್ನು ಕೊಟ್ಟರು. ಸ್ತ್ರೀ ಶಿಕ್ಷಣವನ್ನು ಗಾಂಧೀಜಿಯವರು ಬೆಂಬಲಿಸಿದ್ದರು. ಇದರ ಪರಿಣಾಮವಾಗಿ ವಿವಾಹ ವಯಸ್ಸಿನ ಏರಿಕೆ, ಸತಿಪದ್ಧತಿಯ ನಿಲುಗಡೆಯಾಗಿ ಹೆಣ್ಣುಮಕ್ಕಳ ಚಲನವಲನ, ಉದ್ಯೋಗಾವಕಾಶ ಹಾಗೂ ಸ್ವಾವಲಂಬನೆಯ ದಾರಿ ಮುಕ್ತವಾಯಿತು.

ಆಧುನಿಕ ಶಿಕ್ಷಣ ಪದ್ಧತಿಯಲ್ಲಿ ಸ್ತ್ರೀಯರಿಗೆ ಸಾಕಷ್ಟು ಅವಕಾಶಗಳಿವೆ. ಆದರೆ ಮಹಿಳಾ ಸಾಕ್ಷರತಾ ಪ್ರಮಾಣ ಕಡಿಮೆಯಿದೆ. ಮಹಿಳೆಯರಲ್ಲಿ ಶೇಕಡ ೩೦ಕ್ಕಿಂತಲೂ ಹೆಚ್ಚು ಅನಕ್ಷರಸ್ಥೆಯರಿದ್ದಾರೆ. ಕೌಟುಂಬಿಕ ಸಮಸ್ಯೆ, ಸಾಮಾಜಿಕ ಸಮಸ್ಯೆ, ರಾಜಕೀಯ ಸಮಸ್ಯೆ, ಲಿಂಗತಾರತಮ್ಯ ನೀತಿಯಿಂದಾಗಿ ಮಹಿಳಾ ಶಿಕ್ಷಣ ಇಂದಿಗೂ ಹಿಂದುಳಿದಿದೆ. ಶಿಕ್ಷಣ ವ್ಯವಸ್ಥೆಯಲ್ಲಿ ಸ್ತ್ರೀಪುರುಷರಿಬ್ಬರಿಗೂ ಸಮಾನ ಪ್ರವೇಶಾವಕಾಶಗಳನ್ನು ಒದಗಿಸುವ ನಿಟ್ಟಿನಲ್ಲಿ ಸರಕಾರ ಪ್ರಯತ್ನಿಸುತ್ತಿದೆ. 'ಅಕ್ಷರ ಕಲಿಕೆಯೇ ಅನಗತ್ಯ' ಎಂಬಂತಹ ಮನೋಭಾವಕ್ಕೆ

ಬಲಿಯಾಗಿ, ಹೆರುವ ಯಂತ್ರವಾಗಿ, ಅಡುಗೆ ಕೆಲಸಕ್ಕೆ ಮಾತ್ರ ಸೀಮಿತಳಾದ ಹೆಣ್ಣು ವಿಭಿನ್ನವಾಗಿ ಸಾಮಾಜಿಕ ಪರಿಸರದಲ್ಲಿದ್ದಾಳೆ. ಆದರೆ ಹೆಣ್ಣು ಮಕ್ಕಳು ದೈಹಿಕ ಬದಲಾವಣೆಗಳು, ದೈಹಿಕ, ಮಾನಸಿಕ ಏರಿಳಿತ, ನೋವು ಮೈಲಿಗೆ, ಒರಟುತನ ಮೊದಲಾದವುಗಳಿಂದ ನಲುಗುತ್ತಿದ್ದಾರೆ.

ಶ್ಲೀಲ-ಅಶ್ಲೀಲ, ಶುಚಿ-ಅಶುಚಿಯ ನೀತಿ ಸಂಹಿತೆಗಳು ಹುಡುಗಿಯರನ್ನು ತಾರತಮ್ಯಕ್ಕೆ ಗುರಿಮಾಡುತ್ತವೆ. ತಂದೆ-ತಾಯಿ ತಮ್ಮ ಹೆಣ್ಣುಮಕ್ಕಳನ್ನು ಶ್ರೀಮಂತರ ಮನೆಗಳಲ್ಲಿ ಕೆಲಸಕ್ಕೆ ಬಿಡುವುದು ನಮ್ಮ ಸಮಾಜದಲ್ಲಿದೆ. ಹೆಣ್ಣು ಮಕ್ಕಳನ್ನು ಮನೆಗೆಲಸ, ಸಣ್ಣ ಮಕ್ಕಳ ಲಾಲನೆ-ಪಾಲನೆ ಹಾಗೂ ಇತರ ದುಡಿತದಿಂದ ದೂರವಿರಿಸುವಂತಾಗಬೇಕು. ಶಿಕ್ಷಣ ಅವರ ಜನ್ಮಸಿದ್ಧ ಹಕ್ಕು ಎನ್ನುವುದನ್ನು ಸಮಾಜ ಅರಿಯಬೇಕಾಗಿದೆ.

ಸರಕಾರ ಹೆಣ್ಣು ಮಕ್ಕಳಿಗಾಗಿ ಉಚಿತ ಶಿಕ್ಷಣ, ಉಚಿತ ಪಠ್ಯಪುಸ್ತಕ, ಸಮವಸ್ತ್ರ ನೀಡುವ ವ್ಯವಸ್ಥೆಯನ್ನು ಮಾಡಿದೆ ಮಾತ್ರವಲ್ಲ, ಮಹಿಳಾ ವಿಶ್ವವಿದ್ಯಾನಿಲಯಗಳನ್ನು ಸ್ಥಾಪಿಸಿ ಮಹಿಳೆಯರ ಉನ್ನತ ಶಿಕ್ಷಣಕ್ಕೆ ಅವಕಾಶ ಕಲ್ಪಿಸಿ ಕೊಟ್ಟಿದ್ದು, ಅದರ ಸೌಲಭ್ಯವನ್ನು ಹೆಣ್ಣು ಮಕ್ಕಳು ಪಡೆದಲ್ಲಿ, ಅವರಿಗೂ ಸಮಾಜದಲ್ಲಿ ಉನ್ನತ ಸ್ಥಾನಮಾನಗಳು ಲಭಿಸುವುದರಲ್ಲಿ ಸಂಶಯವಿಲ್ಲ. ಒಟ್ಟಿನಲ್ಲಿ ಹೆಣ್ಣು ಮಕ್ಕಳು ಅವಕಾಶಗಳನ್ನು ಸಮರ್ಥವಾಗಿ ಬಳಸಲು ಮುಂದಾಗಬೇಕಿದೆ.

ಮಹಿಳೆಯರಿಗಿರುವ ಉದ್ಯೋಗಾವಕಾಶಗಳ ಬಗ್ಗೆ ಹೇಳುವುದಾದರೆ, ನಗರ ಪ್ರದೇಶದಲ್ಲಿ ಅದು ಶೇಕಡ ೪.೭ರಷ್ಟಿದ್ದರೆ, ಗ್ರಾಮೀಣ ಪ್ರದೇಶದಲ್ಲಿ ಈ ಪ್ರಮಾಣ ಶೇಕಡ ೦.೩ರಷ್ಟಿದೆ. ೨೦ ವರ್ಷಗಳ ಹಿಂದೆ ಅದು ಶೇಕಡ ೮ರಷ್ಟಿದ್ದು, ಒಟ್ಟಾರೆ ಮಹಿಳಾ ಉದ್ಯೋಗಿಗಳ ಸಂಖ್ಯೆ ಶೇಕಡ ೪ಕ್ಕಿಂತ ಕಡಿಮೆಯಾಗಿದೆ (ನವಿಲೂರು, ೨೦೦೭ಇ).

ಭಾರತೀಯ ಮಹಿಳೆಯ ಆರೋಗ್ಯ ಸ್ಥಿತಿ ಕೇವಲ ಅವಳಿರುವ ಕುಟುಂಬದ ಆರ್ಥಿಕ ಮತ್ತು ಸಾಮಾಜಿಕ ಪರಿಸ್ಥಿತಿಯನ್ನಲ್ಲದೆ ಸರಕಾರ ಒದಗಿಸುವ ಆರೋಗ್ಯ ಸೇವೆಗಳ ಮೇಲೂ ಸಾಕಷ್ಟು ಅವಲಂಬಿತವಾಗಿರುತ್ತದೆ. ೧೯೯೫ರಲ್ಲಿ ಸಂಯುಕ್ತ ರಾಷ್ಟ್ರಗಳ ಅಭಿವೃದ್ಧಿ ಕಾರ್ಯಕ್ರಮ ವರದಿಯ ಪ್ರಕಾರ ಭಾರತದ ಮಾನವ ಅಭಿವೃದ್ಧಿ ಸೂಚ್ಯಂಕ ಅತ್ಯಲ್ಪ ಪ್ರಮಾಣದ್ದಾಗಿತ್ತು. ಹಾಗೆಯೇ ತಾಯಿ-ಮಕ್ಕಳ ಆರೋಗ್ಯ ಪಾಲನೆ, ವೃದ್ಧಾಪ್ಯ ಕಾಳಜಿಯಂತಹ ಪೂರಕ ವಿಷಯಗಳು, ಸೇವೆಗಳ ಗುಣಮಟ್ಟ ಹಾಗೂ ಅನುಷ್ಠಾನಗಳೂ ತೀರಾ ಹಿಂದುಳಿದಿರುವುದನ್ನು ಗುರುತಿಸಲಾಗಿದೆ. ೧೯೯೦ರಲ್ಲಿ ೧೦೦೦/೯೨೭ರಷ್ಟಿದ್ದ ಗಂಡು-ಹೆಣ್ಣುಗಳ ಅನುಪಾತ ಕೂಡ ಈಗ ೧೦೦೦/೯೧೮ಕ್ಕೆ ಇಳಿದಿದೆ.

ಸಾರ್ವತ್ರಿಕ ಲಸಿಕಾ ಕಾರ್ಯಕ್ರಮ ಹಾಗೂ ಸುರಕ್ಷಿತ ತಾಯ್ತನಗಳಂತಹ ಕಾರ್ಯಕ್ರಮಗಳು ಯಶ ಕಂಡಿದ್ದರೂ ಪ್ರಾಥಮಿಕ ಆರೋಗ್ಯ ಹಾಗೂ ಪೌಷ್ಟಿಕತೆಗಳ ನಿಟ್ಟಿನಲ್ಲಿ ನೀಡಲಾಗುತ್ತಿರುವ ಸೇವೆಗಳು ಸಮರ್ಪಕವಾಗಿಲ್ಲವೆನ್ನಬಹುದು. ಮಹಿಳೆಯರ ಆರೋಗ್ಯ ಕೇವಲ ಔಷಧಿ ಹಂಚುವುದರಲ್ಲಿಲ್ಲ. ಆರೋಗ್ಯ ಸೇವೆಗಳ ಪ್ರಯೋಜನ ಯಾವುದೇ ತಾರತಮ್ಯವಿಲ್ಲದೆ ಮಹಿಳೆಯರಿಗೆ ಸಿಗುವಂತಾಗಬೇಕು. ಮಹಿಳೆಯರ ಮೇಲಿನ ಹಿಂಸೆ, ದೌರ್ಜನ್ಯಗಳು ಭಾರತೀಯ ಸಮಾಜದಲ್ಲಿ ಹೆಚ್ಚಾಗುತ್ತಿವೆ. ಮಾರಾಟ, ಅಪಹರಣ, ಅತ್ಯಾಚಾರ, ವೇಶ್ಯಾವಾಟಿಕೆ, ಭ್ರೂಣಹತ್ಯೆ, ವರದಕ್ಷಿಣೆ ಹತ್ಯೆಗಳು ಯಾವುದೇ ವಯಸ್ಸಿನ ನಿರ್ಬಂಧಗಳಿಲ್ಲದೆ ನಡೆಯುತ್ತಿವೆ. ಮಾಧ್ಯಮಗಳ ಮೂಲಕ ಸಮರ್ಪಿಸಲ್ಪಡುವ ಇಂತಹ ವಿಷಯಗಳು ತಪ್ಪು ಮಾಡುವವರಿಗೆ, ಅಪರಾಧಿಗಳಿಗೆ ಎಚ್ಚರಿಕೆಯ ಗಂಟೆಯನ್ನು ಬಾರಿಸದೆ ಅದರ ತದ್ವಿರುದ್ಧವಾಗಿ ಅಪರಾಧಿ ಮನೋವೃತ್ತಿ ಸಮಾಜದಲ್ಲಿ ಬೇರೂರುತ್ತಿರುವುದು ಅತ್ಯಂತ ಕಳವಳಕಾರಿ ವಿಷಯ.

ಮಹಿಳೆಯರ ಅಭಿವೃದ್ಧಿಯ ನಿಟ್ಟಿನಲ್ಲಿ ಹಲವಾರು ಕಾಯ್ದೆ, ನಿರ್ಬಂಧಗಳು ರೂಪಿಸಲ್ಪಟ್ಟಿದ್ದರೂ ಅವುಗಳು ಪರಿಪೂರ್ಣವಾಗಿಲ್ಲದೆ ಲೋಪದೋಷಗಳಿಂದ ಕೂಡಿದೆ ಮಾತ್ರವಲ್ಲ, ಅನುಷ್ಠಾನ ಕ್ರಮವು ತೀವ್ರಗೊಳ್ಳಬೇಕಾದ ಅಗತ್ಯತೆಯಿದೆ. ಭಾರತದಲ್ಲಿರುವ ಅನಕ್ಷರಸ್ಥರ, ಅವಿದ್ಯಾವಂತರ, ಜ್ಞಾನ ಕುಶಲತೆಗಳಿಲ್ಲದ ಹಾಗೂ ಬಡಜನರಲ್ಲಿ ಮಹಿಳೆಯರೇ ಹೆಚ್ಚಿನ ಸಂಖ್ಯೆಯಲ್ಲಿದ್ದಾರೆ. ರಾಷ್ಟ್ರೀಯ ಅಭಿವೃದ್ಧಿಗೆ ಬೆನ್ನೆಲುಬಾಗಿರಬೇಕಾದ ಮಹಿಳೆ ಎಲ್ಲ ರೀತಿಯಿಂದಲೂ ಸಂಕಷ್ಟಕ್ಕೆ ಒಳಗಾಗಿದ್ದಾಳೆ.

೨.೨.೫ ದುಡಿಯುವ ಮಹಿಳೆಯ ಸ್ಥಿತಿಗತಿ

ಆಹಾರ ಪದಾರ್ಥಗಳನ್ನು ಹಸಿಯಾಗಿಯೇ ತಿನ್ನುತ್ತಿದ್ದ ಕಾಲದಲ್ಲಿ ಸ್ತ್ರೀಯರು ಪುರುಷರೊಂದಿಗೆ ಬೇಟೆಯಾಡುತ್ತಿದ್ದುದರ ಬಗ್ಗೆ ನಾವು ಕೇಳಿದ್ದೇವೆ. ಆಹಾರವನ್ನು ಬೇಯಿಸಿ ತಿನ್ನಲು ಆರಂಭಿಸಿದ ಮೇಲೆ ಪುರುಷರು ಬೇಟೆಯಾಡಲು ಹೋದರೆ ಸ್ತ್ರೀಯರು ಆಹಾರ ಬೇಯಿಸಿ ಹಂಚುವ ಕೆಲಸ ವಹಿಸಿಕೊಂಡರು. ಒಟ್ಟಿನಲ್ಲಿ ಮಾನವ ಜೀನನದುದ್ದಕ್ಕೂ ಸ್ತ್ರೀ ಪುರುಷರಿಬ್ಬರೂ ದುಡಿಯುತ್ತಿದ್ದಾರೆ.

ಕೃಷಿಯನ್ನು ಜೀವನದ ನಿರ್ವಹಣೆಗಾಗಿ ಕೈಗೊಳ್ಳುವವರೆಗೆ ಕುಟುಂಬವು ಸ್ತ್ರೀ ಪ್ರಧಾನವಾಗಿತ್ತು. ಕೃಷಿಯು ಕುಟುಂಬದ ಮಿತಿಯನ್ನು ಮೀರಿ ಮಾರುಕಟ್ಟೆಗೆ ವಿಸ್ತೃತಗೊಂಡ ಹಾದಿ ಅದು ಪುರುಷ ಪ್ರಧಾನವಾಗಿ ಪರಿವರ್ತನೆ ಹೊಂದಿತೆನ್ನಬಹುದು. ಮಾತ್ರವಲ್ಲ, ಸ್ತ್ರೀಪುರುಷರ ಕೆಲಸದಲ್ಲಿ ತಾರತಮ್ಯ ಉಂಟಾಗಲಾರಂಭಿತು. ಕೈಗಾರಿಕೆಗಳು ಬೆಳೆದಂತೆ ಪುರುಷರು ಪ್ರಮುಖ ದುಡಿಮೆಗಾರರೆನಿಸಿದರೆ ಸ್ತ್ರೀಯರು ಪೂರಕ ದುಡಿಮೆಗಾರರೆಂದು ಗುರುತಿಸಿಕೊಂಡರು.

ಪ್ರಸ್ತುತ ಮಹಿಳೆಯರು ಕಾರ್ಖಾನೆಗಳಲ್ಲಿ, ಮತ್ಸ್ಯೋದ್ಯಮ ಚಟುವಟಿಕೆಗಳಲ್ಲಿ, ಗುಡಿಕೈಗಾರಿಕೆಗಳಲ್ಲಿ ಅಪಾರ ಸಂಖ್ಯೆಯಲ್ಲಿ ದುಡಿಯುತ್ತಿದ್ದಾರೆ. ಶಿಕ್ಷಣವನ್ನು ಪಡೆದ ಮಹಿಳೆಯರು ಶಿಕ್ಷಕಿಯಾಗಿ, ದಾದಿಯರಾಗಿ, ದೂರವಾಣಿ ಆಪರೇಟರ್ ಆಗಿ, ಕಚೇರಿ ಸಹಾಯಕಿಯಾಗಿ, ಪೋಲೀಸ್ ಅಧಿಕಾರಿಯಾಗಿ, ವಕೀಲೆಯರಾಗಿ, ವೈದ್ಯೆಯಾಗಿ, ಅಭಿಯಂತರಳಾಗಿ, ವಿವಿಧ ಪ್ರಕಾರದ ಮಾಧ್ಯಮಗಳಲ್ಲಿ ಉದ್ಘೋಷಕಿಯಾಗಿ, ಕಾರ್ಯಕ್ರಮ ಸಂಯೋಜಕಿಯಾಗಿ, ಸಂಪಾದಕಿಯಾಗಿ, ಉಪಸಂಪಾದಕಿಯಾಗಿ, ಸಂಕಲನಕಾರ್ತಿಯಾಗಿ, ಬರಹಗಾರ್ತಿಯಾಗಿ, ಕಲಾವಿದೆಯಾಗಿ, ವರದಿಗಾರ್ತಿಯಾಗಿ, ತಾಂತ್ರಿಕ ಪರಿಣತೆಯಾಗಿ, ಛಾಯಾಗ್ರಾಹಕಳಾಗಿ ಹೀಗೆ ವಿವಿಧ ವೃತ್ತಿಗಳಲ್ಲಿ ದುಡಿಯುತ್ತಿದ್ದಾಳೆ.ದಿ ನ್ಯಾಶನಲ್ ಸರ್ವೇಯ ಪ್ರಕಾರ ದುಡಿಮೆ ಎನ್ನುವ ಪರಿಕಲ್ಪನೆಯು ಆದಾಯಗಳಿಸುವ ಚಟುವಟಿಕೆಯಾದರೆ ಜನಗಣತಿಯಲ್ಲಿ ದುಡಿಮೆ ಆರ್ಥಿಕ ಚಟುವಟಿಕೆಯಾಗಿ ಗುರುತಿಸಿದೆ ಹಾಗೂ ದಿ ಸ್ಟ್ಯಾಟಿಸ್ಟಿಕ್ಸ್ ಆಫ್ ಡೈರೆಕ್ಟರೇಟ್ ಜರ್ನಲ್ ಆಫ್ ಎಂಪ್ಲಾಯ್‌ಮೆಂಟ್ ಅಂಡ್ ಟ್ರೈನಿಂಗ್ ನಗರದ ಸಂಘಟಿತ ಕ್ಷೇತ್ರದ ಉದ್ಯೋಗ ಹಾಗೂ ದುಡಿಮೆ ಬಗ್ಗೆ ಮಾಹಿತಿ ನೀಡುತ್ತದೆ (ಹೇಮಲತಾ, ೨೦೦೬).

ಕರ್ನಾಟಕವನ್ನೇ ತೆಗೆದುಕೊಂಡರೆ ಸರಿಸುಮಾರು ೫೦ ಲಕ್ಷ ಮಹಿಳೆಯರಿಗೆ ಮನೆಯ ಹೊರಗಿನ ದುಡಿಮೆಯೇ ಅನಿವಾರ್ಯವಾಗಿದೆ. ಕೂಲಿ ಮಾಡಿದರೆ ಕೂಳು ಇಲ್ಲದಿದ್ದರೆ ಉಪವಾಸ ಎನ್ನುವ ಸ್ಥಿತಿಯಲ್ಲಿ ೩೬ ಲಕ್ಷಕ್ಕಿಂತಲೂ ಹೆಚ್ಚು ಮಹಿಳೆಯರು ಕರ್ನಾಟಕದಲ್ಲಿದ್ದಾರೆ. ಈ ಬಗೆಯ ದುಡಿಯುವ ಮಹಿಳೆಯರ ಬದುಕು ಜರ್ಜರಿತವಾಗಿದೆ (ಚಂದ್ರ ಪೂಜಾರಿ, ೨೦೦೯).

ಮನೆಯ ಹೊರಗೆ ದುಡಿಮೆಯಲ್ಲಿ ತೊಡಗಿದ ಮಹಿಳೆಯರಿಗೆ ಮನೆಗೆಲಸದ ಜವಾಬ್ದಾರಿಯೂ ಇದೆ. ಈ ಎರಡು ಜವಾಬ್ದಾರಿಯ ಹೊಣೆ ಹೊತ್ತು ಮಹಿಳೆ ಶೋಷಣೆಗೆ ಒಳಗಾಗಿದ್ದಾಳೆನ್ನಬಹುದು. ಪುರುಷರ ಅಧೀನಳಾಗಿ ಬಾಳುತ್ತಿರುವ ಮಹಿಳೆಯರ ಗೋಳು

ಅಸಹನೀಯ. ಆಕೆ ಹಲವು ಬಗೆಯ ಅನ್ಯಾಯಗಳನ್ನು ಎದುರಿಸಬೇಕಾಗಿದೆ. ವೇತನದಲ್ಲಿ, ಉದ್ಯೋಗಸ್ಥಾನದಲ್ಲಿ ಮಹಿಳೆಯರು ತಾರತಮ್ಯವನ್ನು ಎದುರಿಸುತ್ತಿದ್ದಾರೆ. ಸರಕಾರ ಈ ನಿಟ್ಟಿನಲ್ಲಿ ಸೂಕ್ತ ಕ್ರಮ ಕೈಗೊಳ್ಳಬೇಕಾದ ಅನಿವಾರ್ಯತೆ ಇದೆ.

ಮಹಿಳೆಯರು ತಮ್ಮ ವ್ಯಕ್ತಿತ್ವವನ್ನು ರೂಪಿಸಲು ಪುರುಷರಷ್ಟೇ ಸಮರ್ಥರಾಗಿದ್ದಾರೆ. ಆದರೆ ಆಕೆ ಹಲವು ರೀತಿಯ ಸಮಸ್ಯೆಗಳನ್ನು ಎದುರಿಸುತ್ತಿದ್ದಾಳೆ. ವಿವಾಹಿತಳಾಗಿದ್ದಲ್ಲಿ, ಮನೆಯ ಹಿರಿಯರ ಮತ್ತು ಗಂಡನ ಭಯ–ಸಂಶಯಗಳಿಗೆ ಗುರಿಯಾಗಬೇಕಾಗುತ್ತದೆ. ಮೇಲಧಿಕಾರಿಗಳ ಕೀಟಲೆ, ಶೋಷಣೆ, ಕಿರುಕುಳ, ಕಾಕದೃಷ್ಟಿಗೆ ನಲುಗಬೇಕಾಗುತ್ತದೆ. ಗಂಡ ಹೆಂಡತಿ ಇಬ್ಬರೂ ಗಳಿಸುವಲ್ಲಿ ಅವರ ನಡುವೆ ವಿರಸವಾಗುವುದೂ ಇದೆ. ಕುಟುಂಬ ಹಾಗೂ ಉದ್ಯೋಗ ಕ್ಷೇತ್ರದ ಜವಾಬ್ದಾರಿಯಲ್ಲಿ ಮಹಿಳೆ ನಿಜಕ್ಕೂ ದಣಿಯುತ್ತಿದ್ದಾಳೆ. ಮಹಿಳೆ ಹೊಟ್ಟೆ ತುಂಬಿಸಿಕೊಳ್ಳಲು ದುಡಿಯಬೇಕಾದ ಅನಿವಾರ್ಯತೆ ಇದೆ.

ವೇಶ್ಯೆಯಾಗಿ, ಕ್ಯಾಬರೆ ನರ್ತಕಿಯಾಗಿ, ನಟಿಯಾಗಿ, ಸಿನಿಮಾಗಳಲ್ಲಿ ಅರೆನಗ್ನಳಾಗಿ, ಜಾಹೀರಾತುಗಳಲ್ಲಿ ಮಾಡೆಲ್ ಆಗಿ ಅಸಭ್ಯ ರೀತಿಯಲ್ಲಿ ಶೋಷಣೆಗೊಳಗಾಗಿ ಮಹಿಳೆಯರು ದುಡಿಯುತ್ತಿದ್ದಾರೆ. ಎಲ್ಲಾ ದುಡಿಯುವ ಮಹಿಳೆಯರನ್ನು ಆರ್ಥಿಕವಾಗಿ ಸ್ವತಂತ್ರರೆಂದು ಪರಿಗಣಿಸಲಾಗದು. ಯಾಕೆಂದರೆ, ಅವರು ದುಡಿದ ಹಣವನ್ನು ತಂದೆ–ತಾಯಿ ಅಥವಾ ಗಂಡಂದಿರು ತೆಗೆದುಕೊಂಡು ಖರ್ಚು ಮಾಡುವುದು ನಮ್ಮ ಸಮಾಜದಲ್ಲಿದೆ. ಮಾತ್ರವಲ್ಲ ತಾವು ಸಂಪಾದಿಸಿದ ಹಣದಲ್ಲಿ ಶೋಕಿ ಮಾಡುವ ಮಹಿಳೆಯರು ಇಲ್ಲವೆಂದೂ ಹೇಳಲಾಗದು. ಒಟ್ಟಿನಲ್ಲಿ ಇಂತಹ ಪ್ರಸಂಗಗಳಲ್ಲಿ ಪತಿ–ಪತ್ನಿಯರ ವಿರಸ ವಿಚ್ಛೇದನಕ್ಕೂ ದಾರಿ ಮಾಡಿ ಕೊಟ್ಟೀತು.

ದುಡಿಯುವ ಮಹಿಳೆ ಗರ್ಭಿಣಿಯಾಗಿದ್ದಾಗಲಂತೂ ಕೆಲವು ಕಡೆಗಳಲ್ಲಿ ಹೆರಿಗೆ ರಜೆ ಲಭಿಸಿದರೆ, ಇನ್ನು ಕೆಲವೆಡೆ ಆಕೆ ಅರ್ಧದಲ್ಲೇ ಕೆಲಸವನ್ನು ಬಿಡಬೇಕಾದ ಪರಿಸ್ಥಿತಿ ಒದಗಿ ಆರ್ಥಿಕವಾಗಿ ತೊಂದರೆಗೊಳಗಾಗಬೇಕಾದ ದುಃಸ್ಥಿತಿ ಬರುವುದಿದೆ. ಹೊರಗಿನ ಜನರೊಡನೆ ವ್ಯವಹರಿಸಬೇಕಾಗಿ ಬರುವುದರಿಂದಲೂ ಆಕೆ ಕುಟುಂಬಿಕರ ಸಂಶಯ ದೃಷ್ಟಿಗೆ, ಅಪವಾದಕ್ಕೆ ಬಲಿಯಾಗಿ ಚಿಂತಾಕ್ರಾಂತ ದಿನಗಳನ್ನು ಕಳೆಯಬೇಕಾದ ಪರಿಸ್ಥಿತಿಯೂ ಒದಗಿ ಬಂದೀತು.

ಉದ್ಯೋಗಸ್ಥ ಮಹಿಳೆ ಹೊರಗಿನ ಪರಿಸರದಲ್ಲಿ ಹೆಚ್ಚು ಅನುಭವಸ್ಥಳಾಗಿ ಜವಾಬ್ದಾರಿಯಿಂದ ತನ್ನ ಕಾರ್ಯವನ್ನು ನಿರ್ವಹಿಸುವುದಿದೆ. ಅಲ್ಲದೆ, ಮತ್ತೊಬ್ಬರನ್ನು ಹಣಕ್ಕಾಗಿ ಆಶ್ರಯಿಸದೆ ಪುರುಷನ ಬಂಧನದಿಂದ ಕೊಂಚ ಮಟ್ಟಿಗಾದರೂ ಬಿಡುಗಡೆಯಾಗಿದ್ದಾಳೆ ಎನ್ನಬಹುದು. ಮಾತ್ರವಲ್ಲ, ಎಲ್ಲರಿಂದ ದೂರಾದಲ್ಲಿ ಒಂಟಿ ಬಾಳನ್ನು ಬಾಳುವ ಧೈರ್ಯವನ್ನು ಆಕೆ ಬೆಳೆಸಿಕೊಂಡಿದ್ದಾಳೆ. ಆದರೂ ದುಡಿಯುವ ಮಹಿಳೆಯ ಬದುಕು ಹೂವಿನ ಸುಪ್ಪತ್ತಿಗೆಯಂತೂ ಆಗಲಾರದು.

೨.೨.೬ ಮಾಧ್ಯಮದಲ್ಲಿ ಮಹಿಳೆ

ಮಾಧ್ಯಮದಲ್ಲಿನ ಮಹಿಳೆಯರ ಕುರಿತಾಗಿ ಮಾಧ್ಯಮ ಸಂಶೋಧಕರು ಹಾಗೂ ಸಮಾಜ ವಿಜ್ಞಾನಿಗಳಿಂದ ಕೆಲವು ಅಧ್ಯಯನಗಳು ನಡೆಯುತ್ತಿವೆ. ಈ ಅಧ್ಯಯನಗಳು ಮಹಿಳೆಯರ ಮೇಲೆ ಮಾಧ್ಯಮದ ಪರಿಣಾಮ ಸೇರಿದಂತೆ ವಿವಿಧ ದೃಷ್ಟಿಕೋನಗಳನ್ನು ಒಳಗೊಂಡಿದೆ. ಮಾಧ್ಯಮಗಳಲ್ಲಿ ಮಹಿಳೆಯರ ಚಿತ್ರಣ ಏಕತಾನತೆಯಿಂದ ಕೂಡಿದ್ದು, ಅವಾಸ್ತವಿಕತೆಯ ಪರಮಾವಧಿ ಎನ್ನಬಹುದು. ಮಾಧ್ಯಮವು ಉದ್ಯೋಗಸ್ಥ ಮಹಿಳೆಯರನ್ನು ತನ್ನ ವೃತ್ತಿ ಹಾಗೂ ಮನೆಗೆಲಸವನ್ನು ಯಾಂತ್ರಿಕವಾಗಿ ನಿಭಾಯಿಸುವ ವ್ಯಕ್ತಿಯಾಗಿ, ತನ್ನ ಮೂಲಭೂತ ಅಗತ್ಯಗಳಿಗಿಂತಲೂ ಗಂಡ ಹಾಗೂ ಮಕ್ಕಳ ಅವಶ್ಯಕತೆಗಳಿಗೆ ಗಮನ ಹರಿಸುವಂತೆ ಅಥವಾ ಒಬ್ಬಂಟಿ ಹೆಂಗಸನ್ನು ಹೆಚ್ಚಾಗಿ ಋಣಾತ್ಮಕವಾಗಿ ಚಿತ್ರಿಸಲಾಗುತ್ತಿದೆ. ಅದೇ ಗೃಹಿಣಿಯರನ್ನಾದರೆ ಪ್ರತಿಯೊಂದು ಅವಶ್ಯಕತೆಗಳಿಗೂ ಗಂಡನನ್ನು ಆಶ್ರಯಿಸುವವರಂತೆ,ಮನೆಯ ಅಲಂಕಾರದಲ್ಲೇ ಸಮಯ ಕಳೆಯುವ ವಿವೇಚನಾ ರಹಿತ, ಪೆದ್ದು ಅಥವಾ ಹಟಮಾರಿ ಎಂಬಂತೆ ಚಿತ್ರಿಸುತ್ತಿವೆ.

ಒಟ್ಟಿನಲ್ಲಿ ದೃಶ್ಯ–ಶ್ರಾವ್ಯ ಮಾಧ್ಯಮಗಳಲ್ಲಿ ವಿದ್ಯಾವಂತ ಮಹಿಳೆಯರನ್ನು ಹೆಚ್ಚಾಗಿ ಸಂವೇದನ ರಹಿತ, ಸ್ವಹಿತಾಸಕ್ತಿಯ ಒಳಿತನ್ನು ಬಯಸದ ವ್ಯಕ್ತಿಗಳನ್ನಾಗಿ ಬಿಂಬಿಸಲಾಗುತ್ತಿದೆ. ಹೆಣ್ಣನ್ನು ಕೇವಲ ಪೋಷಕ ಪಾತ್ರಗಳಲ್ಲಿದ್ದಾಗ ಅಥವಾ ಗಂಡಸರಿಗೆ ಸಹಾಯಕ ಪಾತ್ರಗಳಲ್ಲಿದ್ದಾಗ ಮಾತ್ರ ಅವಳನ್ನು ಒಂದು ಮಾದರಿ ಹೆಣ್ಣಾಗಿ ರೂಪಿಸುತ್ತಿರುವುದು ಎಲ್ಲರೂ ಕಂಡು ಕೊಂಡಿರುವ ಸತ್ಯ. ಟಿವಿ ಹಾಗೂ ರೇಡಿಯೊಗಳಲ್ಲಿನ ಮಹಿಳಾ ಕಾರ್ಯಕ್ರಮಗಳೂ ಕೂಡ ಹೆಣ್ಣನ್ನು ಕೇವಲ ಭೋಗದ ವಸ್ತುವಿನಂತೆ ಚಿತ್ರಿಸುತ್ತವೆಯೇ ಹೊರತು, ತಾಯಂದಿರು ಅಭಿವೃದ್ಧಿ ಪ್ರಕ್ರಿಯೆಯಲ್ಲಿ ಪಾಲ್ಗೊಳ್ಳುವಂತೆ ಅನುವಾಗುವ ಜ್ಞಾನ ಪ್ರಸರಣೆಗಾಗಲಿ, ವೃತ್ತಿ ಕುಶಲತೆಗಳಿಗಾಗಲಿ ಅವಕಾಶ ನೀಡುವ ವಸ್ತು ವಿಷಯಗಳನ್ನು ಅಡಕಗೊಳಿಸುವುದಿಲ್ಲ.

ಮುದ್ರಣ ಮಾಧ್ಯಮವನ್ನು ಗಮನಿಸಿದಾಗ ಎಲ್ಲ ಪತ್ರಿಕೆಗಳು, ನಿಯತಕಾಲಿಕೆಗಳು ಮಹಿಳಾ ವಸ್ತು ವಿಷಯಗಳ ಮೇಲೆ ವಿಶೇಷ ಅಂಕಣ ಹಾಗೂ ವಿಶೇಷ ಸಂಚಿಕೆಗಳನ್ನು ಪ್ರಕಟಿಸುತ್ತಿವೆ. ಇವುಗಳಲ್ಲಿನ ವಿಷಯಗಳು ಪುರುಷ ಪ್ರಧಾನ ವ್ಯವಸ್ಥೆಯನ್ನು ವೈಭವೀಕರಿಸುವ, ಮಹಿಳೆಯರನ್ನು ಹೆಂಡತಿ, ತಾಯಿ ಹಾಗೂ ಆಶ್ರಿತಳಂತೆ ಚಿತ್ರಿಸುತ್ತಿದ್ದು, ಅವಳನ್ನು ಸಾಮಾಜಿಕ ವ್ಯವಸ್ಥೆಯ ಬಹುಮುಖ್ಯ ಅಂಗವೆಂಬ ರೀತಿಯಲ್ಲಿ ಬಿಂಬಿಸದಿರುವುದು ಖೇದನೀಯ. ಮಹಿಳೆಯರನ್ನು ಕೇವಲ ಕಾಮದ ಬೊಂಬೆಗಳನ್ನಾಗಿ ಚಿತ್ರಿಸುವ ಜಾಹೀರಾತು ಮಾಧ್ಯಮವನ್ನಂತೂ 'ಮಹಿಳಾ ವಿರೋಧಿ ಮಾಧ್ಯಮ' ಎಂದರೂ ತಪ್ಪಾಗಲಾರದು. ಬಹುತೇಕ ಜಾಹೀರಾತುಗಳಲ್ಲಿ ಮಹಿಳೆಯರನ್ನು ಅತ್ತೆಗೊಪ್ಪುವ ಅಡುಗೆ ತಯಾರಿಸುತ್ತಿರುವಂತೆ, ನಗುಮೊಗದಿಂದ ಬಟ್ಟೆ ಒಗೆಯುತ್ತಿರುವಂತೆ, ಮಕ್ಕಳಿಗೆ ಉಣಬಡಿಸುವಂತೆ ಕೆಲಸದಾಳಿನಂತೆ ಚಿತ್ರಿಸುವುದು ಸಾಮಾನ್ಯವಾಗಿದೆ. ಸಾಮಾನ್ಯವಾಗಿ ಮಾಧ್ಯಮಗಳಲ್ಲಿ ಕಾಣುವ ಮಹಿಳೆಯನ್ನು ಕಡಿಮೆ ಸಾಮರ್ಥ್ಯದ ವ್ಯಕ್ತಿಯನ್ನಾಗಿ, ಪುರುಷರಿಂದ ದಬ್ಬಾಳಿಕೆಗೊಳಗಾಗುವ ಹಾಗೂ ಶೋಷಣೆಗೊಳಗಾಗಲು ಇರುವ ಭೋಗದ ವಸ್ತುವಾಗಿ, ವಾಣಿಜ್ಯೀಕರಣದ ಪರಿಕರವಾಗಿ ಬಿಂಬಿಸಲಾಗಿದೆ.

ಸಂವಹನ ಕ್ರಾಂತಿ ಅನೇಕ ಮಾಧ್ಯಮ ವೃತ್ತಿ ಅವಕಾಶಗಳನ್ನು ತೆರೆದಿಟ್ಟಿದ್ದರೂ ಮಹಿಳೆಯರಿಗೆ ಈ ಅವಕಾಶಗಳು ಅತ್ಯಂತ ಸೀಮಿತ ಸಂಖ್ಯೆಯಲ್ಲಿ ಮಾತ್ರ ದೊರೆತಿದೆ ಎನ್ನಬಹುದು. ಸಾಂಸ್ಕೃತಿಕ ನಂಬುಗೆ, ಹಿನ್ನೆಲೆಗಳು ಹಾಗೂ ಉದ್ಯೋಗ ಸಂಸ್ಥೆಯಲ್ಲಿನ ವಾಸ್ತವಾಂಶಗಳು ಇದಕ್ಕೆ ಕಾರಣ. ವಿಶ್ವದಾದ್ಯಂತ ನಡೆದ ಸ್ತ್ರೀವಾದಿ ಚಳುವಳಿಗಳು ಮಾಧ್ಯಮದಲ್ಲಿ ಮಹಿಳೆಯರಿಗೆ ಸೀಮಿತ ಸಂಖ್ಯೆಯ ಉದ್ಯೋಗಾವಕಾಶಗಳನ್ನು ಕಲ್ಪಿಸಲಾಗಿದೆ ಎಂದಿವೆ. ಇಡೀ ವಿಶ್ವವೇ ಪುರುಷ ಪ್ರಧಾನವಾಗಿದ್ದು, ಮಾಧ್ಯಮವೂ ಇದರಿಂದ ಹೊರತಾಗಿಲ್ಲ ಎನ್ನಬಹುದು. ಮಹಿಳೆಯರು ಅಭಿವೃದ್ಧಿ ಹೊಂದಿದ ಹಾಗೂ ಅಭಿವೃದ್ಧಿ ಶೀಲ ದೇಶಗಳಲ್ಲಿ ಸಾಮಾಜಿಕ–ಆರ್ಥಿಕವಾಗಿ ಅನ್ಯಾಯ, ಶೋಷಣೆಗೆ ಒಳಗಾಗುತ್ತಿದ್ದಾರೆ.

ಮ್ಯಾಕ್‌ಬ್ರೈಡ್ ಆಯೋಗವು ಗಂಭೀರ ಸ್ವರೂಪದ ಹಾಗೂ ರಾಜಕೀಯ ಘಟನಾವಳಿಗಳನ್ನು ವರದಿ ಮಾಡುವ ಮಹಿಳಾ ಪತ್ರಿಕೋದ್ಯಮಿಗಳು ತೀರಾ ವಿರಳ ಹಾಗೂ ಕೆಲವೇ ಕೆಲವು ಮಂದಿ ಮಹಿಳೆಯರು ಸಂಪಾದಕರಾಗಿ, ನಿರ್ದೇಶಕರಾಗಿ ಅಸ್ತಿತ್ವದಲ್ಲಿದ್ದಾರೆ ಎಂದಿದೆ. ಅದರ ಪ್ರಕಾರ ಯುಎಸ್‌ಎಯಲ್ಲಿರುವ ೩ಸಾವಿರ ಸಿನಿಮಾ ನಿರ್ದೇಶಕರಲ್ಲಿ ೨೩

ಮಂದಿ ಮಾತ್ರ ಮಹಿಳೆಯರುವ. ವಿಶಾಲ ನಿರ್ಧಾರಗಳನ್ನು ತೆಗೆದುಕೊಳ್ಳುವ ಜವಾಬ್ದಾರಿಯನ್ನು ಮಹಿಳೆಯರಿಗೆ ನೀಡುವುದೇ ವಿರಳವಾಗಿದೆ.ಸಂಯುಕ್ತ ರಾಷ್ಟ್ರಗಳ ಮಾಧ್ಯಮದಲ್ಲಿ ಮೇಲುಸ್ತರದ ಉದ್ಯೋಗಗಳನ್ನು ಹೆಚ್ಚಿನ ಸಂಖ್ಯೆಯಲ್ಲಿ ಪುರುಷರಿಗೇ ಮೀಸಲಾಗಿಟ್ಟು ಲಿಂಗತಾರತಮ್ಯ ಮಾಡಲಾಗುತ್ತಿದೆ. ಇದು ಭಾರತದಲ್ಲಿಯೂ ಇಲ್ಲವೆಂದಿಲ್ಲ (ವರ್ಮಾ, ೨೦೦೬).

ಮಾಧ್ಯಮಗಳು ಮಹಿಳೆಯರಿಗೆ ನೀಡುವ ಅವಕಾಶಗಳತ್ತ ಗಮನ ಹರಿಸುವುದಾದರೆ ವಿಶ್ವಸಂಸ್ಥೆಯ ವರದಿಯ ಪ್ರಕಾರ ಮುಂದುವರಿದ ಅನೇಕ ರಾಷ್ಟ್ರಗಳಲ್ಲಿ ಶೇಕಡ ೬೦ರಷ್ಟು ಮಹಿಳೆಯರು ಸುದ್ದಿ ಸಂಪಾದಕಿಯರಾಗಿ, ವಾರ್ತಾವಾಚಕಿಯರಾಗಿ, ಸಂದರ್ಶಕಿಯರಾಗಿ ಪ್ರಧಾನ ಪಾತ್ರ ವಹಿಸಿದ್ದಾರೆ. ೧೯೯೫ರಿಂದ ೧೯೯೯ರ ಅವಧಿಯಲ್ಲಿ ಬಿ.ಬಿ.ಸಿ.ಯಲ್ಲಿ ಮಹಿಳೆಯರ ಹುದ್ದೆಗಳನ್ನು ಶೇಕಡ ೧೯ರಿಂದ ೨೯ರಷ್ಟು ಏರಿಸಲಾಗಿದೆ (ಫೆರ್ನಾಂಡಿಸ್, ೨೦೦೭).

ಭಾರತದಲ್ಲಿ ಮಹಿಳೆಯರಿಗಾಗಿ ಅನೇಕ ಸಾಪ್ತಾಹಿಕ, ಮಾಸಿಕ ಪತ್ರಿಕೆಗಳು ಪ್ರಕಟಗೊಳ್ಳುತ್ತಿವೆ. ಪ್ರಸಾರ ಮಾಧ್ಯಮಗಳಲ್ಲಿ ಕೂಡ ಮಹಿಳೆಯರು ದುಡಿಯುತ್ತಿದ್ದಾರೆ. ಕರ್ನಾಟಕದಲ್ಲಿ ರೇಡಿಯೊ, ದೂರದರ್ಶನ, ಪತ್ರಿಕೆಗಳಲ್ಲಿ ಸಾಕಷ್ಟು ಸಂಖ್ಯೆಯಲ್ಲಿ ಮಹಿಳೆಯರು ಸಹ ಸಂಪಾದಕರಾಗಿ, ಸುದ್ದಿ ಸಂಪಾದಕರಾಗಿ, ಸಂದರ್ಶಕರಾಗಿ ಸೇವೆ ಸಲ್ಲಿಸುತ್ತಿದ್ದಾರೆ. ತಮ್ಮ ಹೆಚ್ಚಿನ ಸಮಯವನ್ನು ಕೆಲಸಕ್ಕೇ ಮೀಸಲಿಡಬೇಕಾದ ಅನಿವಾರ್ಯತೆಯನ್ನು ಅವರು ಎದುರಿಸುತ್ತಿಲ್ಲವೆಂದಲ್ಲ. ಕಚೇರಿಯ ಹೊರಗಡೆ ಮಾಡುವಂತಹ ಕೆಲಸಗಳು ಹೆಚ್ಚಾಗಿ ಪುರುಷರಿಗೇ ಸಿಕ್ಕರೆ ಮಹಿಳೆಯರಿಗೆ ಕಚೇರಿಯ ನಾಲ್ಕುಗೋಡೆಗಳ ಮಧ್ಯೆಯೇ ಕಾರ್ಯನಿರ್ವಹಿಸಬೇಕಾದ ಒತ್ತಡವೂ ಇದೆ.

ರಾತ್ರಿ ಪಾಳಿಯಲ್ಲಿ ದುಡಿಯುವ ಮಹಿಳೆಯರಂತೂ ಲೈಂಗಿಕ ಇಲ್ಲವೇ ಮಾನಸಿಕ ಕಿರುಕುಳಕ್ಕೊಳಗಾಗಿ ಕೆಲಸದ ಭದ್ರತೆಯ ದೃಷ್ಟಿಯಿಂದ ಮೌನವಹಿಸಿ ದುಡಿಯುವುದೂ ಇದೆ. ಇನ್ನು ಕೆಲವು ಸಂದರ್ಭಗಳಲ್ಲಿ ಅದು ಕೌಟುಂಬಿಕ ವಿರಸಕ್ಕೂ ದಾರಿ ಮಾಡಿಕೊಡಬಹುದು. ಮಹಿಳೆಯರಲ್ಲಿ ಸಾಮರ್ಥ್ಯ, ಪ್ರತಿಷ್ಠೆಗಳಿದ್ದರೂ ಅವರಿಗೆ ಕೇವಲ ಸಿದ್ಧ ಅಸೈನ್‌ಮೆಂಟ್‌ಗಳನ್ನು ನೀಡಿ ಆಳ ಅಥವಾ ತನಿಖಾ ವರದಿಗಾರಿಕೆಗೆ ಸ್ವತಂತ್ರವಾಗಿ ಕ್ರಿಯಾಶೀಲತೆಯಿಂದ ಕಾರ್ಯ ನಿರ್ವಹಿಸುವುದಕ್ಕೆ ಅಡ್ಡಿ ಆತಂಕಗಳು ಬರುವುದು ಸಹಜ. ಮಾಧ್ಯಮದಲ್ಲಿ ದುಡಿಯುವ

ಮಹಿಳೆಯರು ಲಿಂಗತಾರತಮ್ಯಕ್ಕೊಳಗಾಗಿ ಉನ್ನತ ಪದವಿ ಸಿಗದಿರುವ ಸನ್ನಿವೇಶಗಳೂ ಇವೆ. ಹಾಗಾಗಿ ಮಾಧ್ಯಮದಲ್ಲಿ ದುಡಿಯುವ ಮಹಿಳೆಯರಿಗೆ ಸಮಸ್ಯೆ, ಒತ್ತಡಗಳು, ಆತಂಕಗಳು ಕಟ್ಟಿಟ್ಟ ಬುತ್ತಿಯೇ ಸರಿ.

ಮಾಧ್ಯಮದಲ್ಲಿ ದುಡಿಯುವ ಮಹಿಳೆಗೆ ಹೊರಗಿನ ಪ್ರಪಂಚದೊಡನೆ ಅಥವಾ ತನ್ನ ಪರಿಚಯಸ್ಥರೊಡನೆ ಮೌನ ವಹಿಸಬೇಕಾಗುತ್ತದೆ. ಇದು ಕೆಲವೊಂದು ಸಂದರ್ಭಗಳಲ್ಲಿ ಕೌಟುಂಬಿಕ ಸಮಸ್ಯೆಗೆ ದಾರಿ ಮಾಡಿಕೊಡುವುದೂ ಇದೆ. ಕೌಟುಂಬಿಕ ಪ್ರೇರಣೆಯಿಲ್ಲದೆ, ಮಾಧ್ಯಮದಲ್ಲಿ ದುಡಿಯುವ ಆಕೆಯ ಆಸಕ್ತಿ ಕಡಿಮೆಯಾಗುವ ಸಾಧ್ಯತೆಯಿದೆ. ಈ ಸಮಸ್ಯೆಗಳಿಗಾಗಿಯೇ ಅದೆಷ್ಟೋ ಮಾಧ್ಯಮದಲ್ಲಿದ್ದ ಮಹಿಳೆಯರು ಮಾಧ್ಯಮದ ಕೆಲಸವನ್ನು ತೊರೆದಂತಹ ಪ್ರಸಂಗಗಳೂ ಇಲ್ಲವೆಂದಿಲ್ಲ.

ಪ್ರೆಸ್ ಟ್ರಸ್ಟ್ ಆಫ್ ಇಂಡಿಯಾದಿಂದ ತಯಾರಿಸಲ್ಪಟ್ಟ ವರದಿಯು ಮಹಿಳಾ ಪತ್ರಕರ್ತರ ಜೀವನ ಸಂಘರ್ಷದ ಚಿತ್ರಣವನ್ನು ನೀಡುತ್ತದೆ. ಪಿಟಿಐನ ರಾಷ್ಟ್ರೀಯ ಅಧ್ಯಯನ ಸಮೂಹವು ದೇಶದ ೧೪೧ ಪತ್ರಿಕೆ ಹಾಗೂ ಪ್ರಕಟಣಾಲಯಗಳಲ್ಲಿ ದುಡಿಯುತ್ತಿರುವ ೩,೫೦೦ ಮಹಿಳಾ ಪತ್ರಕರ್ತರನ್ನು ಭೇಟಿ ನೀಡಿತಾದರೂ ಕೇವಲ ೪೧೦ ಮಹಿಳೆಯರು ಮಾತ್ರ ಪ್ರತಿಕ್ರಿಯಿಸಿದರು. ಈ ವರದಿಯ ಪ್ರಕಾರ ಮಹಿಳಾ ಪತ್ರಕರ್ತೆಯರು ಯಾವುದೇ ನೇಮಕಾತಿ ಪತ್ರವಿಲ್ಲದೆ, ತಿಂಗಳಿಗೆ ರೂ.೧,೫೦೦ರಿಂದ ೩.೦೦೦ ರೂಪಾಯಿ ಪಡೆಯುವ ದಿನಗೂಲಿಗಳಾಗಿ ಕೆಲಸ ನಿರ್ವಹಿಸುತ್ತಿದ್ದಾರೆ. ರಾಷ್ಟ್ರೀಯ ಅಧ್ಯಯನ ಸಮೂಹದ ಸುಸ್ಮಿತಾ ಮೌಲವೀಯರ ಪ್ರಕಾರ ಮಧ್ಯಪ್ರದೇಶ ಹಾಗೂ ಛತ್ತೀಸ್‌ಗಢದ "ದೈನಿಕ್ ಭಾಸ್ಕರ್" ಮತ್ತು 'ನಯಿದುನಿಯಾ'ದಂತಹ ಪತ್ರಿಕೆಗಳಲ್ಲಿ ಶಾಶ್ವತ ಉದ್ಯೋಗದ ಮಹಿಳಾ ಪತ್ರಕರ್ತೆಯರೇ ಇಲ್ಲ. ಅಲ್ಲದೆ, 'ಅದೃಷ್ಟವಂತರು' ಕೇವಲ ೨ ರಿಂದ ೩ ವರ್ಷಗಳ ಅವಧಿಯ ಒಪ್ಪಂದದ ಮೇಲಿರುತ್ತಾರೆ ಎನ್ನುವ ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ (ಡಬ್ಲ್ಯು.ಡಬ್ಲ್ಯು.ಡಬ್ಲ್ಯು.ಇಂಡಿಯಾಟುಗೆದರ್.ಆರ್ಗ್, ೨೦೦೪).

ಭಾರತದ ಈಶಾನ್ಯ ಭಾಗದ ರಾಷ್ಟ್ರಗಳಲ್ಲಿ ಕೇವಲ ೩೫ ಪತ್ರಕರ್ತೆಯರಿದ್ದು, ಅವರಲ್ಲಿ ಕೇವಲ ೩೫% ಮಂದಿ ಪೂರ್ಣಕಾಲಿಕ ನೌಕರರಾಗಿ, ೪೦% ಮಂದಿ ಬಡ್ತಿ ಹೊಂದಿಲ್ಲ. ಈ ರೀತಿಯ 'ರಹಸ್ಯ' ನೌಕರಿ ಒಪ್ಪಂದದಿಂದಾಗಿ ಪತ್ರಕರ್ತೆಯರಿಗೆ ಒಬ್ಬೊಬ್ಬರು ಎಷ್ಟೆಷ್ಟು ಪಡೆಯುತ್ತಿದ್ದಾರೆ ಎನ್ನುವ ಮಾಹಿತಿಯೇ ಇರುವುದಿಲ್ಲವಂತೆ. ಇಂತಹ ಪರಿಸ್ಥಿತಿ ಮಾತ್ರವಲ್ಲದೆ,

ರಜೆ ಹಾಕಿದ ನಂತರ ಕೆಲಸವನ್ನೇ ಕಳೆದುಕೊಂಡ ಅದೆಷ್ಟೋ ಪತ್ರಕರ್ತೆಯರಿದ್ದಾರೆ. ಮಾಧ್ಯಮದಲ್ಲಿ ದುಡಿಯುವ ಮಹಿಳೆಯರು, ದಶಕಗಳವರೆಗೆ ಭಡ್ತಿ ಹೊಂದದಿರುವ ನಿದರ್ಶನಗಳೂ ಇವೆ.ಒಂದುವೇಳೆ ಹೊಂದಿದರೂ ಪುರುಷ ಸಹೋದ್ಯೋಗಿಗಳಿಂದ ತೊಂದರೆಗೊಳಗಾಗುವುದಿದೆ.

ಮಕ್ಕಳ ಪಾಲನೆ ಹಾಗೂ ಹೆರಿಗೆ ರಜೆ ಸೌಲಭ್ಯ ನೀಡದ ಎಷ್ಟೋ ಮಾಧ್ಯಮ ಸಂಸ್ಥೆಗಳು ನಮ್ಮಲ್ಲಿವೆ. ಹೆರಿಗೆ ರಜೆಯ ನಂತರ ಅಥವಾ ಗರ್ಭಿಣಿ ಎನ್ನುವ ಕಾರಣಕ್ಕೆ ಉದ್ಯೋಗ ಕಳೆದುಕೊಳ್ಳುವ ಪ್ರಸಂಗವೂ ಮಾಧ್ಯಮದಲ್ಲಿ ದುಡಿಯುವ ಮಹಿಳೆಯರಿಗೆ ಎದುರಾಗುವುದಿದೆ.ಅಲ್ಲದೆ ಮಾಧ್ಯಮದಲ್ಲಿ ದುಡಿಯುವ ಮಹಿಳೆಯರು ಮದುವೆ ಅಥವಾ ಮಕ್ಕಳಾದರೆ ಕೌಟುಂಬಿಕ ಒತ್ತಡದಿಂದ ಎಲ್ಲಿ ತಮ್ಮ ಉದ್ಯೋಗವನ್ನು ಕಳೆದುಕೊಳ್ಳುತ್ತೇವೋ ಎನ್ನುವ ಆತಂಕಕ್ಕೆ ಗುರಿಯಾಗಿ ಬಾಳುವುದೂ ಇದೆ. ಈ ಎಲ್ಲದರ ಮಧ್ಯೆ ಪ್ರಭಾ ದತ್, ಬರ್ಕಾದತ್‌ರಂತಹ ಪ್ರಸಿದ್ಧ ಪತ್ರಕರ್ತೆಯರೂ ಯಶಸ್ಸಿನ ಹಾದಿಯಲ್ಲಿ ಮುನ್ನಡೆಯಲೆತ್ನಿಸುತ್ತಿದ್ದಾರೆ.

ಮಹಿಳೆಯರನ್ನು ಹೆಚ್ಚಿನ ಪ್ರಮಾಣದಲ್ಲಿ ಮಾಧ್ಯಮದಲ್ಲಿ ಸೇರುವಂತೆ ಮಾಡುವುದಕ್ಕೋಸ್ಕರ ೧೯೯೫ರಲ್ಲಿ ಬೀಜಿಂಗ್‌ನಲ್ಲಿ ನಡೆದ ನಾಲ್ಕನೆ ಯುಎನ್ ಕಾನ್ಫರೆನ್ಸ್ ಮಹಿಳೆಯರಿಗೆ ಶಿಕ್ಷಣ ತರಬೇತಿಗೆ ಪ್ರೋತ್ಸಾಹ ಹಾಗೂ ಮಾಧ್ಯಮದ ಎಲ್ಲ ಸ್ತರಗಳಲ್ಲಿ ಸಮಾನತೆ ನೀಡುವಂತೆ ಶಿಫಾರಸು ಮಾಡಿದೆ.ಆದರೂ ಮಾಧ್ಯಮ ಕ್ಷೇತ್ರದಲ್ಲಿ ಮಹಿಳೆ ಸಮರ್ಥವಾಗಿ ಕಾರ್ಯ ನಿರ್ವಹಿಸಲಾರಳು ಎನ್ನುವ ಪೂರ್ವಾಗ್ರಹ ನಮ್ಮ ಸಮಾಜದ ಜನರಲ್ಲಿದೆ. ಮಹಿಳೆಯರು ಮತಿವಿಕಲರಲ್ಲದಿದ್ದರೂ ಅವರಿಗೂ ಸಾಧಿಸುವ ಛಲ, ಪ್ರತಿಭೆ ಇದೆ ಎನ್ನುವುದನ್ನು ಮನಗಾಣದೆ ಅವಕಾಶ ನೀಡಲು ಹಿಂಜರಿಯುತ್ತಿದ್ದಾರೆ (ಗುಪ್ತ, ೧೯೯೭).

೨.೨.೭ ಮಾಧ್ಯಮದಲ್ಲಿ ದುಡಿಯುತ್ತಿರುವ ಮಹಿಳೆ ಎದುರಿಸುತ್ತಿರುವ ಸವಾಲುಗಳು

ಮಾಧ್ಯಮದಲ್ಲಿ ದುಡಿಯುವ ಮಹಿಳೆಯರ ಬದುಕು ಸರಳರೇಖೆಯಂತೆ ಸುಲಭವಾಗಿಲ್ಲ. ಅದು ಹಲವಾರು ಮಜಲುಗಳನ್ನು, ಹಂತಗಳನ್ನು, ಗೋಜಲುಗಳನ್ನು ಕಾಣುತ್ತಾ ಸಂಕೀರ್ಣವಾಗಿದೆ. ಈ ಅಲ್ಪಸ್ವಲ್ಪ ಅನುಗ್ರಹ, ನಿಂದನೆ, ಉತ್ಪ್ರೇಕ್ಷೆ, ಉಪೇಕ್ಷೆ, ತುಳಿತ–ಆಗ್ರಹ–ನಿಗ್ರಹ,

ಕಷ್ಟಸುಖಗಳನ್ನು ಅನುಭವಿಸುತ್ತಾ ಏಳುಬೀಳುಗಳೊಂದಿಗೆ ಮಹಿಳೆಯರು ಬದುಕುತ್ತಿದ್ದಾರೆ. 'ಮಹಿಳೆ ಸಾಹಸಭರಿತ, ಪಂಥಾಹ್ವಾನ ನೀಡುವಂತಿರುವ ಕೆಲಸಗಳಿಗೆ ಯೋಗ್ಯಳಲ್ಲ,ಪುರುಷರಷ್ಟು ಶ್ರೇಷ್ಠಳೂ ಅಲ್ಲ, ಆಕೆ ಅಬಲೆ'ಎನ್ನುವ ಪೂರ್ವಾಗ್ರಹಗಳು ನಮ್ಮ ಸಮಾಜದಲ್ಲಿ ಬೇರೂರಿದ್ದು ಮಾಧ್ಯಮ ಕ್ಷೇತ್ರದಲ್ಲಿ ಹಲವು ರೀತಿಯ ತಾರತಮ್ಯಕ್ಕೊಳಗಾಗಿದ್ದಾಳೆ. ಮುದ್ರಣ ಮಾಧ್ಯಮವೇ ಇರಲಿ, ದೃಶ್ಯ ಮಾಧ್ಯಮವೇ ಇರಲಿ ಅಥವಾ ಜನಪದ ಮಾಧ್ಯಮವೇ ಇರಲಿ ಎಲ್ಲವೂ ಪುರುಷರಿಂದಲೇ ತುಂಬಿ ಹೋಗಿದೆ. ಹಾಗಿರುವಾಗ ಯಾವ ರೀತಿಯ ಸ್ಥಾನಮಾನ ದೊರಕೀತು ಎನ್ನುವುದನ್ನು ವಿವರಿಸುವ ಅಗತ್ಯವಿಲ್ಲ.

ಮಾಧ್ಯಮ ಕ್ಷೇತ್ರದಲ್ಲಿ ಪ್ರಭಾದತ್ತ್, ಬರ್ಕಾದತ್ತ್‌ರಂತಹ ಮಹಿಳೆಯರು ಪಂಥಾಹ್ವಾನ ನೀಡುವ ಕೆಲಸಗಳನ್ನು ಮಾಡಿದ್ದಾರೆ. ಪುರುಷರಿಗಿಂತಲೂ ಹೆಚ್ಚಿನ ಉತ್ಸಾಹ, ಪ್ರಾಮಾಣಿಕತೆಯಿಂದ ದುಡಿಯುವ ಮಹಿಳೆಯರು ಮಾಧ್ಯಮ ಕ್ಷೇತ್ರದಲ್ಲಿರುವಾಗ ಅವರ ಸಾಮರ್ಥ್ಯದ ಕುರಿತಾಗಿ ಎಲ್ಲರಿಗೂ ತಿಳಿದಿದೆ. ಆದರೆ ಇದನ್ನು ಸಹಿಸಲಾರದ ಮಂದಿಯಿಂದ ದೈಹಿಕ, ಮಾನಸಿಕ ಶೋಷಣೆಗೊಳಗಾಗುವಂತಾಗಿದೆ. ಇಂತಹ ಪರಿಸ್ಥಿತಿಯನ್ನು ಆಕೆ ಹೇಗೆ ತಾನೇ ಎದುರಿಸಿ ಮುಂದುವರಿಯಲು ಸಾಧ್ಯ?

ಮುದ್ರಣ ಮಾಧ್ಯಮವೇ ಇರಲಿ, ದೃಶ್ಯಮಾಧ್ಯಮವೇ ಇರಲಿ, ಜನಪದ ಮಾಧ್ಯಮವೇ ಇರಲಿ, ಮಾಧ್ಯಮ ಕ್ಷೇತ್ರ ಸವಾಲೆಸೆಯುವಂತಹ ಸಾಹಸಭರಿತ ಕ್ಷೇತ್ರ. ಇಲ್ಲಿ ತನ್ನ ಪ್ರತಿಭೆಯನ್ನು ಪ್ರದರ್ಶಿಸಲು ಅಥವಾ ಸತ್ಯಶೋಧನೆ ಮಾಡಲು ಮಹಿಳೆ ಸಾಕಷ್ಟು ಧೈರ್ಯವಂತಳಾಗಿರಬೇಕಾಗುತ್ತದೆ. ಮಾತ್ರವಲ್ಲ ಯಾವುದೇ ಪರಿಸ್ಥಿತಿಯನ್ನು ಎದುರಿಸುವ ಚಾಕಚಕ್ಯತೆಯನ್ನು ಹೊಂದಿರಬೇಕಾಗುತ್ತದೆ. ವರದಿಗಾರ್ತಿಯಾಗಿದ್ದರಂತೂ ವಿವಿಧೆಡೆ ಹೋಗಿ ಜನರೊಂದಿಗೆ ಬೆರೆತು ಸುದ್ದಿ ಸಂಗ್ರಹಿಸಲು ಹರಸಾಹಸ ಪಡಬೇಕಾಗುತ್ತದೆ. ಹೀಗಿರುವಾಗ ಹೆಣ್ಣಿನ ಶರೀರವೇ ಶತ್ರುವಾಗಿ ಪರಿಣಮಿಸಲೂಬಹುದು. ಇದನ್ನೇ ಬಂಡವಾಳವಾಗಿರಿಸಿಕೊಂಡ ಸಮಾಜದ ಶೋಷಣೆಗೆ ಆಕೆ ಗುರಿಯಾಗಬೇಕಾಗುತ್ತದೆ.ಮೇಲಧಿಕಾರಿಗಳ ವಕ್ರ ದೃಷ್ಟಿಗೆ ಬಲಿಯಾಗುವ ಮಾಧ್ಯಮ ಕ್ಷೇತ್ರದಲ್ಲಿ ದುಡಿಯುವ ಹೆಣ್ಣಿಗೆ ಆಕೆಯ ಶರೀರವೇ ಅಡ್ಡಿಯನ್ನುಂಟು ಮಾಡುತ್ತದೆ.

ದೃಶ್ಯ ಮಾಧ್ಯಮದಂತಹ ಕ್ಷೇತ್ರವನ್ನು ಗಮನಿಸಿದಲ್ಲಿ ಅಲ್ಲಿ ಮಹಿಳೆಯ ಉಡುಪು ಧರಿಸುವ ಸ್ವಾತಂತ್ರ್ಯವನ್ನೂ ಕಿತ್ತೆಸೆಯಲಾಗುತ್ತಿದೆ. ಜನರನ್ನು ಹೆಚ್ಚು ಅಕರ್ಷಿಸುವಂತೆ ಮಾಡಲು ಈ ಮಾಧ್ಯಮದಲ್ಲಿನ ಮಹಿಳೆಯರು ಅಂಗಾಂಗ ಪ್ರದರ್ಶನ ಮಾಡುವಂತಿರುವ ಉಡುಪುಗಳನ್ನು ಧರಿಸಬೇಕೆನ್ನುವ ಒತ್ತಡಕ್ಕೊಳಗಾಗಬೇಕಾಗುತ್ತದೆ. ಹೀಗಿರುವಾಗ ಸಮಾಜ ಮಾಧ್ಯಮದಲ್ಲಿನ ಮಹಿಳೆಯರನ್ನು 'ನಾಚಿಕೆ ಇಲ್ಲದವಳು', 'ಗಂಡುಬೀರಿ' ಎನ್ನುವ ಚುಚ್ಚು ನುಡಿಗಳನ್ನಾಡಿ ನಿಂದಿಸುವುದೂ ಇದೆ. ಇವೆಲ್ಲದರ ಮದ್ಯೆಯೂ ಮಾಧ್ಯಮದಲ್ಲಿ ದುಡಿಯುವ ಮಹಿಳೆ ಕೆಲವು ಬಾರಿ ಮನೆಯಿಂದ ದೂರ ನಿಂತು ಹಗಲು-ರಾತ್ರಿ ದುಡಿಯಬೇಕಾಗುತ್ತದೆ. ಉನ್ನತ ಪದವಿಯನ್ನು ಹೊಂದಿದ್ದರಂತೂ ಆಕೆಗೆ ತನ್ನ ಮನೆಯವರ ಪ್ರೋತ್ಸಾಹ, ಸಹಕಾರ ಅಗತ್ಯ. ಇಲ್ಲದೆ ಹೋದಲ್ಲಿ ಆಕೆ ಈ ಕ್ಷೇತ್ರದಲ್ಲಿ ಮುನ್ನಡೆಯಲಾರಳು. ಹೊಸಬರಿಗೆ ಮಾಧ್ಯಮ ಕ್ಷೇತ್ರದಲ್ಲಿ ಆಸಕ್ತಿ ಇದ್ದರೂ ಕೆಲ ಪೋಷಕರಂತೂ ಈ ಕ್ಷೇತ್ರಕ್ಕೆ ಅವರನ್ನು ಕಳುಹಿಸುವುದೇ ವಿರಳವೆನ್ನಬಹುದು. ಹಾಡುಹಗಲಿನಲ್ಲಿಯೇ ಅತ್ಯಾಚಾರ, ಮಾನನಷ್ಟ ಮಾಡುವ, ಆ್ಯಸಿಡ್ ಎರಚಿ ಕ್ರೌರ್ಯ ತೋರುವ ಮೃಗೀಯ ಪುರುಷ ಶತ್ರುಗಳಿರುವಾಗ ಮಾಧ್ಯಮದಲ್ಲಿ ದುಡಿಯುವ ಮಹಿಳೆಯರ ಬದುಕು ಎಷ್ಟರ ಮಟ್ಟಿಗೆ ಸುರಕ್ಷಿತ?

ಭಾರತೀಯ ಸಮಾಜದಲ್ಲಿ ಮದುವೆಯಾದ ಅಥವಾ ಮಕ್ಕಳಾದ ಸ್ತ್ರೀಯರಿಗೆ ವಿಭಿನ್ನ ಸ್ಥಾನಮಾನವಿದೆ. ಮದುವೆ ಮತ್ತು ಮಕ್ಕಳನ್ನು ಹಡೆಯುವುದು ಮಹಿಳೆಯನ್ನು ಮಾಧ್ಯಮ ಕ್ಷೇತ್ರದಲ್ಲಿ ಅವಕಾಶ ವಂಚಿತರನ್ನಾಗಿಸುತ್ತದೆ. ಮಹಿಳೆ ಎಷ್ಟೇ ಸಕ್ಷಮಳಾಗಿದ್ದರೂ ಕೆಲಕಾಲ ವೃತ್ತಿಯಿಂದ ಹೊರಗಿದ್ದರೆ ಮತ್ತೆ ಅವಕಾಶಗಳಿಗಾಗಿ ಅಲೆಯಬೇಕಾದ ಪರಿಸ್ಥಿತಿ ಎದುರಾಗುತ್ತದೆ. ವಿಷಯದ ಬಗೆಗಿನ ಅವಳ ಜ್ಞಾನವನ್ನು ಅಪೂರ್ಣವೆಂದು ಭಾವಿಸಲಾಗುತ್ತದೆ. ಭಾವನಾತ್ಮಕವಾಗಿ, ದೈಹಿಕವಾಗಿ ತೀವ್ರವಾಗಿ ಬದಲಾದ ಪರಿಸ್ಥಿತಿಗಳಲ್ಲಿ ಅವಳ ಸ್ವಾಭಿಮಾನ ಹಾಗೂ ಛಲಗಳು ಮೃದುವಾಗಿರುತ್ತವೆ. ತನ್ನ ಸಂಸಾರದ ಉನ್ನತಿಗಾಗಿ ತನ್ನ ಸ್ಥಾನಮಾನವನ್ನು ಅಥವಾ ವೃತ್ತಿಯನ್ನು ತಿರಸ್ಕರಿಸುವ ಸಂದರ್ಭವೂ ಬರಬಹುದು. ಇದರಿಂದ ಪ್ರತಿಭೆಯಿರದ ಪುರುಷರಿಗೆ ಆಕೆಯ ಸ್ಥಾನ ದೊರೆಯುತ್ತದೆ. ಓರ್ವ ಸ್ತ್ರೀ ಈ ರೀತಿಯ ಅವಕಾಶಗಳನ್ನು ಬಳಸಿಕೊಳ್ಳದೆ ಇರುತ್ತಾಳೋ ಅಲ್ಲಿಯವರೆಗೆ ಅವಳ ಉನ್ನತಿಯಾಗದು.

ಕೆಲವೊಮ್ಮೆ ಮಾಧ್ಯಮ ಕ್ಷೇತ್ರದಲ್ಲಿ ಮಹಿಳೆಯರೇ ಮಹಿಳೆಗೆ ಶತ್ರವಾಗುವುದಿದೆ. ಈಗಾಗಲೇ ಮಾಧ್ಯಮ ಕ್ಷೇತ್ರದಲ್ಲಿ ನೆಲೆಯೂರಿರುವ ಮಹಿಳೆಯರು ಹೊಸದಾಗಿ ವೃತ್ತಿಗೆ ಸೇರಿದ

ಅಥವಾ ಸೇರಬಯಸುವ ಮಹಿಳೆಯರಿಗೆ ಸಹಾಯ ಅಥವಾ ಮಾರ್ಗದರ್ಶನ ನೀಡಲು ಹಿಂದೇಟು ಹಾಕುವುದಿದೆ. ಇದು ಲಭಿಸಿದ ಅವಕಾಶವನ್ನು ಪುರುಷರಿಗೆ ನೀಡುವಂತೆ ಮಾಡಿದೆ. ಸ್ತ್ರೀಯರು ಸ್ತ್ರೀಯರಿಗೆ ಸಹಾಯ, ಮಾರ್ಗದರ್ಶನ ನೀಡಿದಲ್ಲಿ ಮಾಧ್ಯಮ ಕ್ಷೇತ್ರದಲ್ಲಿ ಮಹಿಳೆ ಮುನ್ನಡೆಯಲ್ಲು ಸಾಧ್ಯ.

ಮಾಧ್ಯಮ ಕ್ಷೇತ್ರದಲ್ಲಿ ಮಹಿಳೆ ಮುನ್ನಡೆಯಬೇಕಾದರೆ ಆಕೆ ಅಗತ್ಯ ಶೈಕ್ಷಣಿಕ ಅರ್ಹತೆಗಳನ್ನು ಗಳಿಸಿಕೊಂಡು ಧೈರ್ಯವಂತಳಾಗಿ, ಪ್ರಾಮಾಣಿಕಳಾಗಿ, ಎಲ್ಲರಲ್ಲೂ ಬೆರೆತು ಬಾಳಬೇಕಾಗುತ್ತದೆ. ಯಾವುದೇ ರೀತಿಯ ಚುಚ್ಚು ಮಾತುಗಳಿಗೆ ಹೆದರದೆ ತನ್ನ ಕುಟುಂಬದ, ಸ್ನೇಹಿತರ ಸಹಕಾರ, ಪ್ರೋತ್ಸಾಹವನ್ನು ಪಡೆದು ಸತ್ಯವಂತಳಾಗಿ ಮುನ್ನಡೆದಲ್ಲಿ ಆಕೆಗೆ ಯಶಸ್ಸು ಖಂಡಿತ. ಇಲ್ಲದೇ ಹೋದಲ್ಲಿ ಮಾಧ್ಯಮ ಕ್ಷೇತ್ರದಲ್ಲಿ ಮಹಿಳೆಯರ ಉನ್ನತಿ ಅಸಾಧ್ಯ.

ಉಲ್ಲೇಖಗಳು

೧. ಜೋಸೆಫ್ ಕೆ.ಜೆ. ೨೦೦೭, "ಸಂವಹನ ಮನೋವಿಜ್ಞಾನ", ಕ.ರಾ.ಮು.ವಿ.ವಿ.ಪ್ರಕಾಶನ, ಮೈಸೂರು.

೨. ನವಿಲೂರು ತೇಜಸ್ವಿ, ೨೦೦೭ ಅ, "ಅಭಿವೃದ್ಧಿಗಾಗಿ ಸಂವಹನ", ಕ.ರಾ.ಮು.ವಿ.ವಿ. ಪ್ರಕಾಶನ, ಮೈಸೂರು

೩. ನವಿಲೂರು ತೇಜಸ್ವಿ, ೨೦೦೭ಆ "ಸಂವಹನ ಪ್ರಕ್ರಿಯೆಯ ಪರಿಚಯ", ಕ.ರಾ.ಮು.ವಿ.ವಿ. ಪ್ರಕಾಶನ, ಮೈಸೂರು.

೪. ನವಿಲೂರು ತೇಜಸ್ವಿ, ೨೦೦೭ ಇ, "ಭಾರತೀಯ ಪತ್ರಿಕೋದ್ಯಮ" ಕ.ರಾ.ಮು.ವಿ.ವಿ. ಪ್ರಕಾಶನ, ಮೈಸೂರು.

೫. ನವಿಲೂರು ತೇಜಸ್ವಿ, ೨೦೦೭ಈ, "ಬಾನುಲಿ", ಕ.ರಾ.ಮು.ವಿ.ವಿ. ಪ್ರಕಾಶನ,ಮೈಸೂರು.

೬. ನವಿಲೂರು ತೇಜಸ್ವಿ, ೨೦೦೭ಉ, "ಟೆಲಿವಿಷನ್", ಕ.ರಾ.ಮು.ವಿ.ವಿ. ಪ್ರಕಾಶನ,ಮೈಸೂರು.

೭. ನವಿಲೂರು ತೇಜಸ್ವಿ, ೨೦೦೭ಊ, "ಸಿನಿಮಾ", ಕ.ರಾ.ಮು.ವಿ.ವಿ. ಪ್ರಕಾಶನ, ಮೈಸೂರು.

೮. ನವಿಲೂರು ತೇಜಸ್ವಿ, ೨೦೦೭ಋ ,"ಜನಪದ ಮಾಧ್ಯಮಗಳು" ಕ.ರಾ.ಮು.ವಿ.ವಿ. ಪ್ರಕಾಶನ, ಮೈಸೂರು.

೯. ನವಿಲೂರು ತೇಜಸ್ವಿ, ರಾವ್ ಸತ್ಯೇಂದ್ರ ಬಿ.ವಿ.,೨೦೦೭ಎ, "ಅಂತರ್ಜಾಲ", ಕ.ರಾ.ಮು.ವಿ.ವಿ. ಪ್ರಕಾಶನ, ಮೈಸೂರು.

೧೦. ಗುರು ಬಿ.ಪಿ. ಮಹೇಶ್ಚಂದ್ರ, ನವಿಲೂರು ತೇಜಸ್ವಿ, ೨೦೦೭, "ಮಾಧ್ಯಮ ಕಾನೂನುಗಳು", ಕ.ರಾ.ಮು.ವಿ.ವಿ. ಪ್ರಕಾಶನ, ಮೈಸೂರು.

೧೧. ನವಿಲೂರು ತೇಜಸ್ವಿ,೨೦೦೭ಏ, "ಮಾಧ್ಯಮ ಧೋರಣೆಗಳು ಮತ್ತು ನೀತಿ ಸಂಹಿತೆ", ಕ.ರಾ.ಮು.ವಿ.ವಿ. ಪ್ರಕಾಶನ,ಮೈಸೂರು.

೧೨. ಮುಪ್ಪಿಡಿ ಆರ್. ಸಂದೀಪ್, ೨೦೦೮, ನಂ.೨, "ಮೀಡಿಯ ಏಶಿಯ", ಆ್ಯನ್ ಏಶಿಯನ್ ಕಮ್ಯುನಿಕೇಶನ್ ಕ್ವಾರ್ಟರ್ಲಿ.

೧೩. ಎಚ್.ಎಂ.ಹೇಮಲತಾ, ೨೦೦೬, "ಮಹಿಳೆ ಮತ್ತು ದುಡಿಮೆ, ಮಹಿಳಾ ಅಭಿವೃದ್ಧಿ ಯೋಜನೆಗಳು" ಮಹಿಳಾ ಅಧ್ಯಯನ ಕೇಂದ್ರ ಪ್ರಕಾಶನ,ಮೈಸೂರು.

೧೪. ಚಂದ್ರಪೂಜಾರಿ ಎಂ.(ಸಂ) ೨೦೦೯, "ಅಭಿವೃದ್ಧಿ ಅಧ್ಯಯನ"–'ದುಡಿಯುವ ಮಹಿಳೆಯ ಸಾಮಾಜಿಕ ಸ್ವರೂಪ', ಸಂಪುಟ ೭, ಸಂಚಿಕೆ ೧, ಕನ್ನಡ ವಿ.ವಿ. ಹಂಪಿ.

೧೫. ಪಟ್ಟಾಭಿ ಆರ್ಯಾಂಬ, ೨೦೦೦, "ಮಹಿಳೆ", ಉದಯ ರವಿ ಪ್ರಿಂಟರ್ಸ್, ಮೈಸೂರು.

೧೬. ನವಿಲೂರು ತೇಜಸ್ವಿ, ೨೦೦೭ಬ, "ಮಾಧ್ಯಮದ ಮುಂದಿರುವ ಸವಾಲುಗಳು' ಕ.ರಾ.ಮು.ವಿ.ವಿ. ಮೈಸೂರು.

೧೭. ವರ್ಮಾ ಎನ್.ಕೆ. ೨೦೦೬, "ಮೀಡಿಯ ಆ್ಯಂಡ್ ವಿಮೆನ್", ಮೋಹಿತ್ ಪಬ್ಲಿಕೇಶನ್ಸ್, ನ್ಯೂಡೆಲ್ಲಿ.

೧೮. ಫೆರ್ನಾಂಡಿಸ್ ಪ್ರವೀಣ್, ೨೦೦೭, "೨೧ನೆ ಶತಮಾನದ ಮಹಿಳೆ, ಸಮಾನತೆ, ಅಭಿವೃದ್ಧಿ ಕ್ರಾಂತಿ, ಐಬಿಎಚ್ ಪ್ರಕಾಶನ, ಬೆಂಗಳೂರು.

೧೯. ವಿ.ಎಸ್. ಗುಪ್ತಾ, ೧೯೯೭, "ನ್ಯಾಶನಲ್ ಮೀಡಿಯ ಪಾಲಿಸಿ", ಕಾನ್ಸೆಪ್ಟ್ ಪಬ್ಲಿಶಿಂಗ್ ಕಂಪನಿ, ನ್ಯೂಡೆಲ್ಲಿ.

೨೦. ಡಬ್ಲ್ಯು.ಡಬ್ಲ್ಯು.ಡಬ್ಲ್ಯು.ಇಂಡಿಯಾಟುಗೆದರ್.ಆರ್ಗ್,೨೦೦೪,ಜುಲೈ

******

ಅಧ್ಯಾಯ ೩

ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಮಾಧ್ಯಮ ಮತ್ತು ಮಹಿಳೆ

.೧ ದಕ್ಷಿಣ ಕನ್ನಡ ಜಿಲ್ಲೆ

.೨ ಮಾಧ್ಯಮಗಳ ಬೆಳವಣಿಗೆ

ಃ.೨.ಅ ಕನ್ನಡದ ಪ್ರಥಮ ಪತ್ರಿಕೆ

ಃ.೨.ಆ ಪತ್ರಿಕೋದ್ಯಮಕ್ಕೆ ಸ್ಥಳೀಯರ ಪ್ರವೇಶ

ಃ.೨.ಇ ದಕ್ಷಿಣ ಕನ್ನಡ ಜಿಲ್ಲೆಯ ಧೀಮಂತ ಪತ್ರಕರ್ತರು

ಃ.೨.ಈ ಪ್ರಸ್ತುತ ಕಾರ್ಯಾಚರಿಸುತ್ತಿರುವ ಮಾಧ್ಯಮಗಳು

.ಃ.ದಕ್ಷಿಣ ಕನ್ನಡ ಜಿಲ್ಲೆಯ ಮಾಧ್ಯಮಕ್ಕೆ ಮಹಿಳೆಯರ ಕೊಡುಗೆ

ಅಧ್ಯಾಯ ೩

ದ.ಕ.ಜಿಲ್ಲೆಯಲ್ಲಿ ಮಾಧ್ಯಮ ಮತ್ತು ಮಹಿಳೆ

೩.೧ ದ.ಕ.ಜಿಲ್ಲೆ

ಕರ್ನಾಟಕ ರಾಜ್ಯದ ಕರಾವಳಿ ಪ್ರದೇಶದಲ್ಲಿರುವ ದಕ್ಷಿಣ ಕನ್ನಡ ಜಿಲ್ಲೆಯು ಉತ್ತರದಲ್ಲಿ ಉಡುಪಿ ಜಿಲ್ಲೆಯನ್ನು, ಈಶಾನ್ಯದಲ್ಲಿ ಚಿಕ್ಕಮಗಳೂರು ಜಿಲ್ಲೆಯನ್ನು, ಪೂರ್ವದಲ್ಲಿ ಹಾಸನ ಜಿಲ್ಲೆಯನ್ನು, ಆಗ್ನೇಯದಲ್ಲಿ ಕೊಡಗು ಜಿಲ್ಲೆ ಹಾಗೂ ದಕ್ಷಿಣಕ್ಕೆ ಕೇರಳದ ಕಾಸರಗೊಡು ಜಿಲ್ಲೆಗಳಿಂದ ಸುತ್ತುವರಿದಿದೆ. ಪಶ್ಚಿಮದಲ್ಲಿ ಅರಬೀ ಸಮುದ್ರವನ್ನು ಹೊಂದಿರುವ ದಕ್ಷಿಣ ಕನ್ನಡ ಜಿಲ್ಲೆಯ ಮುಖ್ಯಪಟ್ಟಣ ಮಂಗಳೂರಾಗಿದೆ. ದಕ್ಷಿಣ ಕನ್ನಡ ಜಿಲ್ಲೆಯು ೪,೭೭೦ ವ್ಯಾಪ್ತಿಯ ಚದರ ಕಿಲೋಮಿಟರ್ ವಿಸ್ತೀರ್ಣವನ್ನು ಹೊಂದಿದೆ, ಪ್ರತೀ ೧ ಚದರ ಕಿಲೋಮೀಟರ್‌ಗೆ ೩೯೦ ಮಂದಿ ಜನರನ್ನು ಒಳಗೊಂಡಿದೆ. ದ.ಕ.ಜಿಲ್ಲೆಯಲ್ಲಿ ಒಟ್ಟು ೩೫೪ ಗ್ರಾಮಗಳಿವೆ.

ಪ್ರಾಕೃತಿಕ ಸಂಪತ್ತುಗಳಿಂದ ನಳನಳಿಸುತ್ತಿರುವ ದಕ್ಷಿಣ ಕನ್ನಡ ಜಿಲ್ಲೆಯು ೫ ತಾಲೂಕುಗಳಾಗಿ ವಿಂಗಡಿಸಲ್ಪಟ್ಟಿದೆ. ಅವುಗಳೆಂದರೆ ಮಂಗಳೂರು, ಬಂಟ್ವಾಳ, ಬೆಳ್ತಂಗಡಿ, ಪುತ್ತೂರು ಮತ್ತು ಸುಳ್ಯ. ೧೯೯೭ ರಲ್ಲಿ ಅಂದರೆ ದ.ಕ.ಜಿಲ್ಲೆಯು ವಿಭಜನೆಗೊಳ್ಳುವುದಕ್ಕಿಂತ ಮೊದಲು ಉಡುಪಿ, ಕುಂದಾಪುರ ಹಾಗೂ ಕಾರ್ಕಳ ತಾಲೂಕುಗಳನ್ನು ಒಳಗೊಂಡಿತ್ತು. ದಕ್ಷಿಣ ಕನ್ನಡ, ಉಡುಪಿ ಮತ್ತು ಕಾಸರಗೋಡಿನ ಪ್ರದೇಶಗಳಲ್ಲಿ ತುಳು ಬಹುಜನರು ಆಡುವ ಭಾಷೆಯಾದಕಾರಣ ತುಳುನಾಡು ಎಂದು ಈಗಲೂ ಕರೆಯುವುದಿದೆ. ೮ ಹಾಗೂ ೧೪ನೇ ಶತಮಾನದಲ್ಲಿ ಅಲೂಪ ಅರಸರು ಈ ಪ್ರದೇಶವನ್ನು ಆಳಿದ್ದರೆಂದೂ ಈ ಕಾರಣದಿಂದಾಗಿ ತುಳು ಮಾತನಾಡುವ ಜನರಿರುವ ಜಿಲ್ಲೆಗಳನ್ನು ಕರ್ನಾಟಕ ರಾಜ್ಯವು ಒಳಗೊಂಡಿದೆ ಎನ್ನಲಾಗಿದೆ (ವಿಕಿಪೀಡಿಯ).

ಈ ಜಿಲ್ಲೆಯಲ್ಲಿ ತುಳುವರು ಮೊದಲು ನೆಲೆಗೊಂಡವರಾಗಿದ್ದು ಬ್ರಾಹ್ಮಣರು, ಬಂಟರು, ಮೊಗವೀರರು, ಕುಲಾಲರು, ಬಿಲ್ಲವರು, ಕೊರಗ ಜನಾಂಗದವರು, ಕ್ರಿಶ್ಚಿಯನ್ ಹಾಗೂ ಮುಸ್ಲಿಂ ಪಂಗಡದವರನ್ನು ಹೆಚ್ಚಾಗಿ ಹೊಂದಿದೆ. ೧೯೯೧ನೇ ಜನಗಣತಿಯ ಪ್ರಕಾರ ತುಳು ಭಾಷೆಯನ್ನು ೪೭.೨೭% ಮಂದಿ, ಕನ್ನಡವನ್ನು ೨೦.೬೨%, ಕೊಂಕಣಿಯನ್ನು ೧೬.೫೫%, ಮಲಯಾಳಂನ್ನು

೧೦.೭೯%, ಮರಾಠಿಯನ್ನು ೨.೩೫% ಹಾಗೂ ೧.೭೫% ಜನರು ಉರ್ದು ಭಾಷೆಯನ್ನು ಬಳಸುತ್ತಾರೆ.

ದಕ್ಷಿಣಕನ್ನಡ ಜಿಲ್ಲೆಯಲ್ಲಿ ಮಂಗಳೂರು, ಬಂಟ್ವಾಳ, ಪುತ್ತೂರು, ಸುಳ್ಯ, ಮೂಡಬಿದ್ರೆ, ಕಡಬ, ಸುರತ್ಕಲ್, ಮುಲ್ಕಿ ಹಾಗೂ ಧರ್ಮಸ್ಥಳ ಪ್ರಮುಖ ಪಟ್ಟಣಗಳಾಗಿದ್ದು, ಕೈಗಾರಿಕೆ, ಶಿಕ್ಷಣ, ಉದ್ಯೋಗ, ವ್ಯಾಪಾರದ ದೃಷ್ಟಿಯಿಂದ ವಿದೇಶಿಯರನ್ನೂ ತನ್ನತ್ತ ಸೆಳೆಯುತ್ತಿದೆ. ಮಾತ್ರವಲ್ಲ ಈ ಜಿಲ್ಲೆ ಕೆಂಪು ಮಣ್ಣಿನ ಹೆಂಚು/ಮಂಗಳೂರು ಹೆಂಚು, ಗೋಡಂಬಿ, ಬ್ಯಾಂಕ್ ವ್ಯವಹಾರ, ಶಿಕ್ಷಣ, ಕೈಗಾರಿಕೆಗಳಿಗೆ ಹೆಸರಾಗಿದೆ.

೨೦೦೧ ಜನಗಣತಿಯ ಪ್ರಕಾರ ದಕ್ಷಿಣಕನ್ನಡ ಜಿಲ್ಲೆಯ ಬಂಟ್ವಾಳ ತಾಲೂಕು ೭೩೫ ಚದರ ಕಿಲೋಮಿಟರ್ ವಿಸ್ತೀರ್ಣವನ್ನು ಹೊಂದಿದ್ದು ೩,೬೧,೫೫೪ ಮಂದಿ ಜನಸಂಖ್ಯೆಯನ್ನೊಳಗೊಂಡಿದೆ. ಅದರಲ್ಲಿ ೧,೭೮,೬೬೪ ಮಂದಿ ಗಂಡಸರಿದ್ದು, ೧,೮೨,೮೯೦ ಮಂದಿ ಹೆಂಗಸರಿದ್ದಾರೆ. ಒಟ್ಟು ೨,೫೫,೩೮೭ ಅಕ್ಷರಸ್ಥರನ್ನು ಹೊಂದಿರುವ ಬಂಟ್ವಾಳ ತಾಲೂಕಿನಲ್ಲಿ ೧,೩೭,೫೩೩ ಮಂದಿ ಅಕ್ಷರಸ್ಥ ಗಂಡಸರು ಹಾಗೂ ೧,೧೭,೮೫೪ ಮಂದಿ ಅಕ್ಷರಸ್ಥ ಹೆಂಗಸರಿದ್ದಾರೆ.

೧,೩೭೫ ಚದರ ಕಿಲೋ ಮಿಟರ್ ವಿಸ್ತೀರ್ಣತೆಯುಳ್ಳ ಬೆಳ್ತಂಗಡಿ ತಾಲೂಕಿನಲ್ಲಿ ಒಟ್ಟು ಜನ ಸಂಖ್ಯೆ ೨,೪೬,೮೯೪ ಆಗಿದ್ದು ಅದರಲ್ಲಿ ೧,೨೧,೨೮೮ ಗಂಡಸರು ಹಾಗೂ ೧,೨೫,೨೦೬ ಹೆಂಗಸರಿದ್ದಾರೆ. ಅಲ್ಲದೆ ಇಲ್ಲಿನ ಒಟ್ಟು ಅಕ್ಷರಸ್ಥರ ಸಂಖ್ಯೆ ೧,೬೬,೬೭೯ ಆಗಿದ್ದು ಅದರಲ್ಲಿ ೮೯,೨೪೨ ಮಂದಿ ಗಂಡಸರು ಹಾಗೂ ೭೭,೪೩೭ ಮಂದಿ ಹೆಂಗಸರಿದ್ದಾರೆ.

೮೩೪ ಚರದ ಕಿಲೋ ಮೀಟರ್ ವಿಸ್ತೀರ್ಣವುಳ್ಳ ಮಂಗಳೂರು ತಾಲೂಕಿನ ಒಟ್ಟು ಜನಸಂಖ್ಯೆ ೮,೮೨,೮೫೬ ಆಗಿದ್ದು ಅದರಲ್ಲಿ ೪,೩೪,೭೦೨ ಗಂಡಸರು ಹಾಗೂ ೪,೪೮,೧೫೪ ಮಂದಿ ಹೆಂಗಸರಿದ್ದಾರೆ. ಅಲ್ಲದೆ ಇಲ್ಲಿನ ೬,೮೩,೬೬೦ ಮಂದಿ ಅಕ್ಷರಸ್ಥರಲ್ಲಿ ಗಂಡಸರ ಸಂಖ್ಯೆ ೩,೫೫,೬೩೨ ಹಾಗೂ ಹೆಂಗಸರ ಸಂಖ್ಯೆ ೩,೨೮,೦೨೮ ಆಗಿದೆ.

೧೦೦೦ ಚದರ ಕಿಲೋಮಿಟರ್ ವಿಸ್ತೀರ್ಣವುಳ್ಳ ಪುತ್ತೂರು ತಾಲೂಕಿನ ಒಟ್ಟು ಜನಸಂಖ್ಯೆ ೨,೬೬,೦೭೨ ಆಗಿದ್ದು ಅದರಲ್ಲಿ ಗಂಡಸರ ಸಂಖ್ಯೆ ೧,೩೨,೭೮೬ ಹಾಗೂ ಹೆಂಗಸರ ಸಂಖ್ಯೆ ೧,೩೩,೨೮೬ ಆಗಿದೆ. ಇಲ್ಲಿನ ಒಟ್ಟು ಅಕ್ಷರಸ್ಥರ ಸಂಖ್ಯೆ ೧,೮೫,೮೬೮ ಆಗಿದೆ. ಇಲ್ಲಿನ ಒಟ್ಟು ಅಕ್ಷರಸ್ಥರ ಸಂಖ್ಯೆ ೧,೮೫,೮೬೮ ಆಗಿದ್ದು, ಅದರಲ್ಲಿ ಗಂಡಸರ ಸಂಖ್ಯೆ ೧,೦೦,೩೮೦ ಹಾಗೂ ಹೆಂಗಸರ ಸಂಖ್ಯೆ ೮೫,೪೮೮ ಆಗಿದೆ.

೮೨೬ ಚದರ ಕಿಲೋಮಿಟರ್ ವಿಸ್ತೀರ್ಣವುಳ್ಳ ಸುಳ್ಯ ತಾಲೂಕಿನ ಒಟ್ಟು ಜನಸಂಖ್ಯೆ ೧,೪೦,೭೫೪ ಆಗಿದ್ದು ಗಂಡಸರ ಸಂಖ್ಯೆ ೭೦,೯೯೪ ಹಾಗೂ ಹೆಂಗಸರ ಸಂಖ್ಯೆ ೬೯,೭೬೦ ಆಗಿದೆ. ಇಲ್ಲಿ ಒಟ್ಟು ೧,೦೦,೧೪೪ ಮಂದಿ ಅಕ್ಷರಸ್ಥರಿದ್ದು ಅದರಲ್ಲಿ ೫೪,೧೭೫ ಮಂದಿ ಗಂಡಸರಿದ್ದಾರೆ ಹಾಗೂ ೪೫,೯೬೯ ಮಂದಿ ಹೆಂಗಸರಿದ್ದಾರೆ (ಜಿಲ್ಲಾಪಂಚಾಯತ್, ೨೦೦೯).

ದ.ಕ.ಜಿಲ್ಲೆಯು ಪುರಾಣ ಪ್ರಸಿದ್ಧ ಐತಿಹಾಸಿಕ ಹಿನ್ನೆಲೆಯುಳ್ಳ ಊರುಗಳನ್ನು ಹೊಂದಿದೆ. ಪ್ರಮುಖವಾದ ಊರುಗಳೆಂದರೆ ಮೂಡಬಿದ್ರೆ, ಕೃಷ್ಣಾಪುರ ಮಠ, ಧರ್ಮಸ್ಥಳ, ಕದ್ರಿ, ಉಳ್ಳಾಲ, ಕಾರಿಂಜ, ಕುಕ್ಕೆಸುಬ್ರಹ್ಮಣ್ಯ, ಮಂಗಳೂರು, ಸುಲ್ತಾನ್ ಬತ್ತೇರಿ, ಪುತ್ತೂರು, ವಿಟ್ಲ, ಉಪ್ಪಿನಂಗಡಿ, ಕೇಪು, ಅನಂತಾಡಿ, ಬಲ್ನಾಡು, ಜಮಾಲಾವಾದ್ ಕೋಟೆ ಇತ್ಯಾದಿ.

ಸಂಪ್ರದಾಯ, ಪದ್ಧತಿ, ಆಚರಣೆ ಹೀಗೆ ಸಾಂಸ್ಕೃತಿಕ ನೆಲೆವೀಡಾದ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ನಾಗದೇವತೆಯ ಆರಾಧನೆ, ಭೂತಾರಾಧನೆ, ಕಂಬಳ, ಕೋಳಿಅಂಕ ಮೊದಲಾದವುಗಳು ಹೆಚ್ಚು ಪ್ರಾಮುಖ್ಯತೆಯನ್ನು ಪಡೆದಿದೆ.ದಕ್ಷಿಣಕನ್ನಡ ಜಿಲ್ಲೆಯು ಉತ್ತಮ ರಸ್ತೆಗಳ ಜಾಲವನ್ನು ಹೊಂದಿದ್ದು ಎನ್.ಎಚ್.೧೭ ಉಡುಪಿ, ಕಾರವಾರ, ಮುಂಬೈ, ಗೋವಾ, ಕೊಚ್ಚಿನ್‌ಗೆ ಸಂಪರ್ಕ ಹೊಂದಿದ್ದರೆ, ಎನ್.ಎಚ್.೧೩ ಶಿವಮೊಗ್ಗ ಹಾಗೂ ಶೋಲಾಪುರಕ್ಕೆ ಹಾಗೂ ಎನ್.ಎಚ್.೪೮ ಬೆಂಗಳೂರು, ಹಾಸನ, ಸಕಲೇಶಪುರಕ್ಕೆ ಸಂಪರ್ಕವನ್ನುಂಟುಮಾಡುತ್ತದೆ. ಇಷ್ಟುಮಾತ್ರವಲ್ಲದೆ ದ.ಕ.ಜಿಲ್ಲೆಯ ವ್ಯಾಪ್ತಿಯಲ್ಲಿ ಅಂತರಾಷ್ಟ್ರೀಯ ವಿಮಾನ ನಿಲ್ದಾಣ, ರೈಲುನಿಲ್ದಾಣಗಳು, ಬಂದರುಗಳಿದ್ದು ದೂರಸಂಪರ್ಕವನ್ನು ಹೊಂದಿದೆ.

ಈ ಜಿಲ್ಲೆಯ ಪ್ರಮುಖ ವೃತ್ತಿ ಕೃಷಿಯಾಗಿದ್ದು ಭತ್ತ, ಅಡಿಕೆ, ಕರಿಮೆಣಸು, ಕೊಕ್ಕೋಗಳು ಪ್ರಮುಖವಾಗಿ ಬೆಳೆಯುವ ಬೆಳೆಗಳಾಗಿವೆ. ಅಲ್ಲದೇ ಎ.ಪಿ.ಎಂ.ಸಿ ಮಾರುಕಟ್ಟೆ,

ಹಾಲುಶೀತಲೀಕರಣ ಘಟಕವನ್ನು ಹೊಂದಿರುವ ದ.ಕ.ಜಿಲ್ಲೆಯಲ್ಲಿ ಕೈಗಾರಿಕಾ ಘಟಕಗಳೂ ಇದ್ದು ವಾಣಿಜ್ಯ ವ್ಯವಹಾರದ ಅಭಿವೃದ್ಧಿಗೆ ಕಾರಣವಾಗಿದೆ.ಬುದ್ಧಿವಂತ ಜಿಲ್ಲೆಯೆನಿಸಿರುವ ದಕ್ಷಿಣಕನ್ನಡ ಜಿಲ್ಲೆಯಲ್ಲಿ ಶೈಕ್ಷಣಿಕ ಹಾಗೂ ಸಂಶೋಧನಾ ಸಂಸ್ಥೆಗಳಿಗೇನು ಕಮ್ಮಿಯಿಲ್ಲ.

ಪ್ರೊ.ಜೋಶಿ ಮತ್ತು ಲೋಬೋರವರು (೨೦೦೯) ಅಭಿಪ್ರಾಯ ಪಡುವಂತೆ, ಕರಾವಳಿ ಕರ್ನಾಟಕದ ಅಭಿವೃದ್ಧಿಯ ಸಾಧ್ಯತೆಗಳನ್ನು ಗುರುತಿಸುವ ಆಳವಾದ ಅಧ್ಯಯನಗಳು ಈಗ ಅವಶ್ಯವಾಗಿದೆ. ಅಭಿವೃದ್ಧಿಯ ವೇಗ ಮತ್ತು ಮಟ್ಟಗಳನ್ನು ಗಮನಿಸಿದರೆ ಈ ಪ್ರದೇಶದ ಉಡುಪಿ ಮತ್ತು ದಕ್ಷಿಣ ಕನ್ನಡ ಜಿಲ್ಲೆಗಳು ಮುಂದುವರಿದಿವೆ. ಕರ್ನಾಟಕ ಸರಕಾರವು ಈಗಾಗಲೇ 'ಕರಾವಳಿ ಅಭಿವೃದ್ಧಿ ಪ್ರಾಧಿಕಾರ' ದ ಸ್ಥಾಪನೆ ಮಾಡಿದ್ದು ಮಾಹಿತಿ-ಸಂಶೋಧನೆಗಳು ಒಳಗೊಂಡಂತೆ ಅಭಿವೃದ್ಧಿಯ ಹೆಚ್ಚಿನ ಅವಶ್ಯಕತೆಗಳನ್ನು ಇದು ಪೂರೈಸಬಲ್ಲದು. ಜೊತೆಗೆ ಕರಾವಳಿ ಕರ್ನಾಟಕದ ಅಭಿವೃದ್ಧಿ ಅಧ್ಯಯನ ಸಂಸ್ಥೆಯ ಅವಶ್ಯಕತೆಯೂ ಇದೆ ಎಂದು ಜೋಶಿ ಮತ್ತು ಲೋಬೋರವರು ತಿಳಿಸಿದ್ದಾರೆ.

೩.೨ ಮಾಧ್ಯಮಗಳ ಬೆಳವಣಿಗೆ

ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಮಾಧ್ಯಮಗಳು ಎಂದಾಗ ದೃಶ್ಯ, ಶ್ರಾವ್ಯ, ಮುದ್ರಣ ಮಾಧ್ಯಮ ಹಾಗೂ ಜನಪದ ಕಲಾ ಮಾಧ್ಯಮಗಳು ಹಾಸುಹೊಕ್ಕಾಗಿರುವುದು ನಮ್ಮ ಗಮನಕ್ಕೆ ಬರುತ್ತದೆ. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಹಲವಾರು ದಿನ ಪತ್ರಿಕೆಗಳು ವಾರ ಪತ್ರಿಕೆಗಳು, ಪಾಕ್ಷಿಕ ಪತ್ರಿಕೆಗಳು, ಮಾಸಪತ್ರಿಕೆಗಳು, ತ್ರೈಮಾಸಿಕ ಪತ್ರಿಕೆಗಳು, ಅರ್ಧವಾರ್ಷಿಕ ಪತ್ರಿಕೆಗಳು, ವಾರ್ಷಿಕ ಪತ್ರಿಕೆಗಳು, ಖಾಸಗಿ/ಸರಕಾರಿ ದೂರದರ್ಶನ, ರೇಡಿಯೋ ಕೇಂದ್ರಗಳು ಕಾರ್ಯನಿರ್ವಹಿಸುತ್ತಿದ್ದು, ಹೊಸಕ್ರಾಂತಿಯನ್ನೇ ಹುಟ್ಟು ಹಾಕಿವೆ ಎನ್ನಬಹುದು.

೩.೨.ಅ ಕನ್ನಡದ ಪ್ರಪ್ರಥಮ ಪತ್ರಿಕೆ

೧೮೦೦ನೆಯ ಇಸವಿಯಲ್ಲಿ ತಾವು ಟಿಪ್ಪುಸುಲ್ತಾನನಿಂದ ಗೆದ್ದ ಮೈಸೂರು ರಾಜ್ಯವನ್ನು ಇಂಗ್ಲೀಷರು ಆಡಳಿತದ ಅನುಕೂಲಕ್ಕಾಗಿ ಕೆಲವು ಭಾಗಗಳನ್ನಾಗಿ ಮಾಡಿದರು. ನಂತರ ಅವನ್ನು ಮುಂಬೈ, ಹೈದರಾಬಾದ್, ಮದರಾಸು ಪ್ರಾಂತ್ಯಗಳಿಗೆ ಹಂಚಿದರು. ಉಳಿದ ಪ್ರದೇಶ ಮೈಸೂರು ರಾಜ್ಯವಾಗುಳಿಯಿತು. ಕನ್ನಡ ಪ್ರದೇಶ ಹೀಗೆ ಹರಿದು ಹಂಚಿಹೋಗಿದ್ದರಿಂದ ಕನ್ನಡ ಭಾಷೆಯ

ಬೆಳವಣಿಗೆಗೆ ತೊಂದರೆಯಾಯಿತು. ಮೈಸೂರು ರಾಜ್ಯವನ್ನು ಆಂಗ್ಲ ಭಾಷೆಯ ಒಲವು ಮುಂಬೈ, ಮದರಾಸು, ಹೈದರಾಬಾದ್ ಪ್ರಾಂತ್ಯಗಳಲ್ಲಿ ಅಲ್ಲಿನ ಭಾಷೆಗಳ ಒತ್ತಡದಿಂದ ಕನ್ನಡ ಭಾಷೆಯನ್ನು ಕೇಳುವವರಿಲ್ಲದೆ ಹೋಯಿತು. ಅಲ್ಲಿ ಭಾಷಾಭಿವೃದ್ಧಿಯ ಕೆಲಸ ಚೆನ್ನಾಗಿ ನಡೆದರೂ, ಕನ್ನಡದಲ್ಲಿ ಯಾವ ಕೆಲಸವೂ ಅಗಲಿಲ್ಲ. ಉಳಿದ ಭಾಷೆಗಳಲ್ಲಿ ಆಗಲೇ ಮುದ್ರಣಾಲಯದ ಕೆಲಸಗಳು ಪ್ರಾರಂಭವಾಗಿದ್ದವು.

ಕನ್ನಡದಲ್ಲಿ ಕೆಲಸ ಪ್ರಾರಂಭಿಸಿದವರು ಕ್ರೈಸ್ತ ಮಿಷನರಿಗಳು. ಆಂಗ್ಲ ಭಾಷೆಯಲ್ಲಿ 'ಮಿಷನ್' ಎಂದರೆ ಒಂದು ಗುರಿ ಅಥವಾ ಧ್ಯೇಯ ಎನ್ನುವ ಅರ್ಥವಿದೆ. ಮಿಷನರಿಗಳು ತಮ್ಮ ಮತಪ್ರಚಾರಕ್ಕಾಗಿ ಪುಸ್ತಕಗಳನ್ನು ಪ್ರಕಟಿಸಲು ಕನ್ನಡ ನಾಡಿನಲ್ಲಿ ಮುದ್ರಣ ಯಂತ್ರಗಳನ್ನು ಸ್ಥಾಪಿಸಿದರು. ಕನ್ನಡ ಅಕ್ಷರಗಳ ಮೊಳೆಗಳನ್ನು ತಯಾರಿಸಿದರು. ಈಗಿನ ದಕ್ಷಿಣ ಕನ್ನಡ ಜಿಲ್ಲೆಯ ಮಂಗಳೂರಿನಲ್ಲೂ ಮಿಷನರಿಗಳಿಂದ ಮುದ್ರಣಾಲಯಗಳು ಪಾರಂಭವಾದವು.

ಕನ್ನಡದಲ್ಲಿ ಪುಸ್ತಕಗಳನ್ನು ಮುದ್ರಿಸಿ ಪ್ರಕಟಿಸಿದ ಬಾಸೆಲ್ ಮಿಷನ್ ಎಂದು ಪ್ರಸಿದ್ಧರಾದ ಜರ್ಮನ್ ಪಾದ್ರಿಗಳು ಕನ್ನಡದ ಮೊದಲ ಪತ್ರಿಕೆಯ ಸ್ಥಾಪನೆಗೆ ಕಾರಣರಾದರು. ೦೧–೦೭–೧೮೪೩ ರಿಂದ 'ಮಂಗಳೂರು ಸಮಾಚಾರ' ಎನ್ನುವ ಕನ್ನಡದ ಮೊದಲ ಪತ್ರಿಕೆ ಮಂಗಳೂರಿನಲ್ಲಿ ತನ್ನ ಪ್ರಕಟಣೆಯನ್ನು ಆರಂಭಸಿತು. ಮಂಗಳೂರಿನಲ್ಲಿ ಎರಕದ ಮೊಳೆಗಳು ಇರದ ಕಾರಣ ಈ ಪತ್ರಿಕೆಗಾಗಿ ಕಲ್ಲಿನ ಹಲಗೆಯ ಮೇಲೆ ಅಕ್ಷರಗಳನ್ನು ತಿರುವು ಮುರುವಾಗಿ ಬರೆದು ಅದನ್ನು ಕಾಗದದ ಮೇಲೆ ಅಚ್ಚೊತ್ತಿಕೊಳ್ಳುತ್ತಿದ್ದರು. ಸಂಪಾದಕ ಮತ್ತು ಪ್ರಕಾಶಕನ ಹೆಸರು ರೆವರೆಂಡ್ ಹರ್ಮನ್ ಮೊಗ್ಲಿಂಗ್. ಈತನೇ 'ಮಂಗಳೂರು ಸಮಾಚಾರ' ಪತ್ರಿಕೆಯ ಅಕ್ಷರಗಳನ್ನು ಬರೆಯುತ್ತಿದ್ದವನು. ೪ ಪುಟಗಳುಳ್ಳ ಪತ್ರಿಕೆ ೧೫ ದಿನಗಳಿಗೊಮ್ಮೆ ಪ್ರಕಟವಾಗುತ್ತಿತ್ತು. ಒಂದು ಸಂಚಿಕೆಯ ಬೆಲೆ, ಅಂಚೆವೆಚ್ಚ ಸೇರಿಸಿ ಈಗಿನ ೨ ಪೈಸೆ ಮಾತ್ರ. ಇದರ ಮೊದಲ ಸಂಚಿಕೆಯಲ್ಲಿ 'ಈ ದೇಶದ ಜನರಿಗೆ ಹೊರಗಿನ ಸಮಾಚಾರಗಳೆಲ್ಲ ತಿಳಿಯಬೇಕು. ಮನೆಯೊಳಗೆ ಗಾಳಿ ಬರಲು ಕಿಟಕಿಗಳಿರುವಂತೆ ಈ ಪತ್ರಿಕೆ ಕಿಟಕಿಗಳು ಮಾಡುವ ಕೆಲಸವನ್ನು ಮಾಡಲಿದೆಯೆಂದೂ ಪತ್ರಿಕೆಯನ್ನು ಪ್ರಕಟಿಸುವವರಿಗೂ ಮತ್ತು ಓದುವವರಿಗೂ ದೇವರು ಬುದ್ಧಿಯನ್ನು ಕೊಡಲಿ' ಎಂದಿತ್ತು.

'ಮಂಗಳೂರು ಸಮಾಚಾರ' ಮತಪ್ರಚಾರಕ್ಕೆಂದು ಹುಟ್ಟಿದ ಪತ್ರಿಕೆಯಾದರೂ ಬೇರೆ ಬೇರೆ ಸುದ್ದಿ, ವಿಷಯಗಳು ಪ್ರಕಟವಾಗುತ್ತಿದ್ದವು. ದಕ್ಷಿಣ ಕನ್ನಡ ಜಿಲ್ಲೆಯ ಸುದ್ದಿಗಳು, ಕೋರ್ಟಿನ ಸಮಾಚಾರ, ಕಳವಿನ ವಿಷಯಗಳು ಪ್ರಕಟವಾಗುತ್ತಿದ್ದವು. ಮಂಗಳೂರಿನಲ್ಲಿ ೧೫-೦೨-೧೮೪೪ರವರೆಗೆ ೧೬ ಸಂಚಿಕೆಗಳನ್ನು ಪ್ರಕಟಸಿದ ನಂತರ 'ಮಂಗಳೂರು ಸಮಾಚಾರ'ವನ್ನು ಬಳ್ಳಾರಿಗೆ ವರ್ಗಾಯಿಸಲಾಯಿತು. ವರ್ಷದ ಕೊನೆಯಲ್ಲಿ ಪತ್ರಿಕೆ ನಿಂತುಹೋಯಿತು. ಹೀಗೆ ಕನ್ನಡದ ಮೊದಲ ಪತ್ರಿಕೆ ಕೊನೆಕಂಡಿತು.

ಮಂಗಳೂರು ಸಮಾಚಾರ ಪ್ರಕಾಶಕ-ಸಂಪಾದಕನಾಗಿದ್ದ ಮೊಗ್ಲಿಂಗ್ ಕನ್ನಡದ ಎರಡನೆಯ ಪತ್ರಿಕೆಯನ್ನು ಪ್ರಾರಂಭಿಸಿದ. ಮಂಗಳೂರಿನಲ್ಲೂ ಮೊಳೆಜೋಡಣೆಯ ಮುದ್ರಣ ಕೆಲಸ ಪ್ರಾರಂಭವಾದಾಗ ಅವನು 'ಕಂನಡ ವಾರ್ತಿಕ' ಪ್ರಾರಂಭಿಸಿದನು. ಎಪ್ರಿಲ್ ೧೮೫೭ರಲ್ಲಿ ಪ್ರಕಟಣೆ ಆರಂಭಿಸಿದ ಇದು ೨೫ ವರ್ಷಗಳ ಕಾಲ ಕಂನಡ ಸುವಾರ್ತಿಕ, ಕರ್ನಾಟಕ ಪತ್ರಿಕೆ, ಬಾಲಪತ್ರ, ಕ್ರೈಸ್ತ ಸಭಾಪತ್ರ, ಸತ್ಯದೀಪಿಕ, ಸುವಾರ್ತಾ ಪ್ರಸಾರಕ, ವೈದಿಕ ಮಿತ್ರ, ಕ್ರೈಸ್ತ ಹಿತವಾದಿ ಮೊದಲಾದ ಹೆಸರುಗಳಿಂದ ಪ್ರಕಟವಾಯಿತು. ಧಾರ್ಮಿಕ ವಿಷಯಗಳನ್ನು ಪ್ರಕಟಿಸುತ್ತಿದ್ದ ಈ ಪತ್ರಿಕೆಗಳು, ಅತ್ಯಂತ ಸುಲಭವಾಗಿ ಜನರಿಗೆ ಅರ್ಥವಾಗುವ ರೀತಿಯಲ್ಲಿ ಯಾವುದನ್ನು ತಿಳಿಸಬಹುದು ಎನ್ನುವುದನ್ನು ತೋರಿಸಿದವು. ಪತ್ರಿಕೆಯಲ್ಲಿ ಯಾವ ವಿಷಯಗಳು ಪ್ರಕಟವಾಗಬಹುದು ಎನ್ನುವುದಕ್ಕೆ ಮಾದರಿಯಾದವು. ಕನ್ನಡಿಗರಲ್ಲಿ ಪತ್ರಿಕೆ ಓದುವ ಹವ್ಯಾಸವನ್ನು ಸ್ವಲ್ಪಮಟ್ಟಿಗೆ ಬೆಳೆಸಿದವು (ಚಿರಂಜೀವಿ, ೨೦೦೩).

೧೮೪೩ರಿಂದ ಪ್ರಥಮ ಮಹಾಯುದ್ಧದ ೧೯೧೪ರವರೆಗಿನ ಅವಧಿಯಲ್ಲಿ ಈ ನಾಡಿಗೆ ಬಂದು ಸೇವೆಸಲ್ಲಿಸಿ ಹೋದ ನೂರಾರು ಮಿಶನರಿಗಳ ಪ್ರೈಕಿ ಹರ್ಮನ್ ಮೊಗ್ಲಿಂಗ್ ಮತ್ತು ಫರ್ಡಿನಂಡ್ ಕಿಟೆಲ್ ಕನ್ನಡ ಭಾಷೆಗೆ ಇತ್ತ ಕೊಡುಗೆ ಮಹತ್ತರವಾದುದು. ಇವರಿಬ್ಬರೂ ತಮ್ಮ ಕಾರ್ಯಚಟುವಟಿಕೆಯಲ್ಲಿ ತೋರಿದ್ದ ಸಾಧನೆಯ ಫಲಶ್ರುತಿಯೇ ೧೮೬೨ರಲ್ಲಿ ಕೆನರಾ ಜಿಲ್ಲೆಯ ವಿಭಜನೆ. ಆಗ ಮದರಾಸಿಗೆ ಪ್ರತೇಕವಾಗಿ ಆಸ್ತಿತ್ವಕ್ಕೆ ಬಂದ ದಕ್ಷಿಣ ಕನ್ನಡದ ಅಧಿಪತ್ಯ ಹಸ್ತಾಂತರ ಇವುಗಳೆಲ್ಲದರ ತರುವಾಯವೂ ಮುಂದುವರಿಯಿತು.

ಮಿಶನರಿಗಳ ವತಿಯಿಂದ ಮಂಗಳೂರು ಸಮಾಚಾರ, ಕನ್ನಡ ವಾರ್ತಿಕಗಳಲ್ಲದೆ, ಮತಧರ್ಮ ಪ್ರಸಾರವೇ ಉದ್ದೇಶವಾಗಿದ್ದು, ಇತರ ೫ ಪತ್ರಿಕೆಗಳು ೧೮೬೩ ರಿಂದ ೧೮೭೧ರ ಅವಧಿಯಲ್ಲಿ ಆರಂಭವಾಗಿತ್ತೆಂಬುದನ್ನು ಗಜೆಟಿಯರ್ ನಿಂದ ತಿಳಿಯಬಹುದು. ಪತ್ರಿಕೆಗಳ ಹೆಸರು ಇಂತಿವೆ. ಸಭಾಪತ್ರ (೧೮೬೩), ವಿಚಿತ್ರವರ್ತಮಾನ ಸಂಗ್ರಹ (೧೮೬೩), ನ್ಯಾಯಸಂಗ್ರಹ (೧೮೬೮), ಕ್ರೈಸ್ತಸಭಾ ಪತ್ರ (೧೮೬೯), ಸುಬೋಧಿನಿ (೧೮೭೧), ಇವುಗಳಲ್ಲದೆ ಸತ್ಯದೀಪಿಕೆ (೧೮೯೦)ಮೊದಲಾದ ಪತ್ರಿಕೆಯನ್ನು ಮಿಷನರಿಗಳು ಆರಂಭಿಸಿದವು.

೩.೨.ಆ ಪತ್ರಿಕೋದ್ಯಮಕ್ಕೆ ಸ್ಥಳೀಯರ ಪ್ರವೇಶ

ದಕ್ಷಿಣಕನ್ನಡದಲ್ಲಿ ವಿದೇಶಿ ಮಿಷನರಿಗಳು ಆರಂಭಸಿದ್ದ ಪತ್ರಿಕೋದ್ಯಮಕ್ಕೆ ಸ್ಥಳೀಯರು ಪ್ರವೇಶಿಸುವ ಹೊತ್ತಿಗೆ ೪೨ ವರ್ಷಗಳು ಸಂದುಹೋಗಿದ್ದವು. ಆ ಹೊತ್ತಿಗೆ ಕಾಸರಗೋಡು ತಾಲೂಕು ಮದರಾಸು ಪ್ರಾಂತ್ಯಾಧಿಪತ್ಯಕ್ಕೆ ಸೇರಿದ್ದು, ದಕ್ಷಿಣ ಕನ್ನಡ ಜಿಲ್ಲೆಯ ಒಂದು ಭಾಗವಾಗಿತ್ತು. ೧೮೮೫ರಲ್ಲಿ ಕಾಸರಗೋಡು ತಾಲೂಕಿನ ಮಂಜೇಶ್ವರದಲ್ಲಿ ಅನಂತರಾವ್ ಎಂಬವರು 'ಕನ್ನಡ ಕೇಸರಿ' ಎಂಬ ಪತ್ರಿಕೆಯ ಸಂಪಾದಕರಾಗಿ ದೃಢಪತ್ರ ಸಲ್ಲಿಸಿದ್ದ ದಾಖಲೆಯಿದೆ. 'ಕನ್ನಡ ಕೇಸರಿ'ಯ ಅನಂತರದಲ್ಲಿ ೧೮೮೭ರಲ್ಲಿ ಸ್ಥಳೀಯ ಉಡುಪಿಯಿಂದ ಪ್ರಕಟಿಸಲಾರಂಭಿಸಿದ 'ಸುದರ್ಶನ' ಮಾಸಪತ್ರಿಕೆಯ ಬಗ್ಗೆ ಕೆಲವೊಂದು ಅವಶ್ಯಕ ವಿವರಗಳು ದಾಖಲಾಗಿವೆ. ಜಿಲ್ಲೆಯವರೇ ಆಗಿದ್ದ ಬೈಲೂರು ರಾಮರಾಯರು ಸಂಪಾದಕರಾಗಿದ್ದು ಆ ಪತ್ರಿಕೆಯಲ್ಲಿ ಆಧ್ಯಾತ್ಮಿಕ ಹಾಗೂ ವೈಚಾರಿಕ ಒಲವುಗಳುಳ್ಳ ಲೇಖನಗಳನ್ನು ಪ್ರಕಟಸಲಾಗುತ್ತಿತ್ತು ಎನ್ನುವುದು ತಿಳಿದು ಬಂದಿದೆ.

ಮ್ಯಾಜಿಸ್ಟೀರಿಯಲ್ ವಿಭಾಗದಲ್ಲಿ ೧೮೪೨ರಿಂದ ೧೯೭೩ ರವರೆಗೆ ದಾಖಲಾಗಿರುವ ದಕ್ಷಿಣ ಕನ್ನಡದಲ್ಲಿ ಆರಂಭವಾಗಿದ್ದ ಪತ್ರಿಕೆಗಳ ವಿವರಗಳು ಇಂತಿವೆ.

ಪತ್ರಿಕೆಗಳ ಹೆಸರು	ಪ್ರಕಾರ	ಸಂಪಾದಕರು	ಆರಂಭದ ವರ್ಷ	ಪ್ರಕಾಶನ ಸ್ಥಳ
ಮಂಗಳೂರು ಸಮಾಚಾರ	ಪಾಕ್ಷಿಕ	ಹರ್ಮನ್ ಮೊಗ್ಲಿಂಗ್	೧೮೪೨	ಮಂಗಳೂರು
ಕನ್ನಡ ವಾರ್ತಿಕ	ಪಾಕ್ಷಿಕ	ಮೊಗ್ಲಿಂಗ್	೧೮೫೭	ಮಂಗಳೂರು
ಇಲ್ಯುಸ್ಟ್ರೇಟೆಡ್ ಕೆಸರೀಸ್ ಜರ್ನಲ್ ಮತ್ತು ವಿಚಿತ್ರ ವರ್ತಮಾನ ಸಂಗ್ರಹ	ಇಂಗ್ಲಿಷ್ ಮತ್ತು ಕನ್ನಡ ಪಾಕ್ಷಿಕ	ಕಿಟೆಲ್ ಮತ್ತು ಮ್ಯಾಕ್ ಜೆ	೧೮೬೨	ಮಂಗಳೂರು.
ಸಭಾ ಪತ್ರ	ಲಭ್ಯವಿಲ್ಲ	ಲಭ್ಯವಿಲ್ಲ	೧೮೬೩	ಮಂಗಳೂರು.
ನ್ಯಾಯ ಸಂಗ್ರಹ	ಪಾಕ್ಷಿಕ	ಲಭ್ಯವಿಲ್ಲ	೧೮೬೮	ಮಂಗಳೂರು.
ಕ್ರೈಸ್ತ ಸಭಾ ಪತ್ರ	ಲಭ್ಯವಿಲ್ಲ	ವೈಗಲ್	೧೮೬೮	ಮಂಗಳೂರು.
ಸುಬೋಧಿನಿ	ಸಾಪ್ತಾಹಿಕ	ಲಭ್ಯವಿಲ್ಲ	೧೮೭೧	ಮಂಗಳೂರು.
ಕನ್ನಡ ಕೇಸರಿ	ಲಭ್ಯವಿಲ್ಲ	ಅನಂತ ರಾವ್	೧೮೮೫	ಮಂಜೇಶ್ವರ.
ಸರ್ವೋದಯ ಪ್ರಕಾಶಿಕ	ದೈನಿಕ–ಸಾಪ್ತಾಹಿಕ	ಬಿ.ನರಸಿಂಗರಾವ್	೧೮೮೭	ಮಂಗಳೂರು.
ಸತ್ಯದೀಪಿಕ	ಲಭ್ಯವಿಲ್ಲ	ಫ್ರೆಡ್ರಿಕ್ ಜತ್ತನ್ನ	೧೮೯೬	ಮಂಗಳೂರು.
ಸುವಾಸಿನಿ	ಮಾಸಿಕ	ಬೋಳಾರ ವಿಠಲ ರಾವ್	೧೯೦೦	ಮಂಗಳೂರು.
ಇಂಡಿಯನ್ ಮ್ಯಾಗಜೀನ್	ಇಂಗ್ಲೀಷ್– ಮಾಸಿಕ	ಎಫ್.ಎಚ್.ರೌಲ್ ಡೆಗ್	೧೯೦೩	ಮಂಗಳೂರು.
ಸ್ವದೇಶಾಭಿಮಾನಿ	ಸಾಪ್ತಾಹಿಕ	ವಿ.ಎಸ್.ಕಾಮತ್	೧೯೦೭	ಮಂಗಳೂರು.
ಉದಯಚಂದ್ರ	ಸಾಪ್ತಾಹಿಕ	ಎಫ್.ಎಚ್.ವೊಡೆಯರ್	೧೯೦೭	ಮಂಗಳೂರು.

ಪತ್ರಿಕೆಗಳ ಹೆಸರು	ಪ್ರಕಾರ	ಸಂಪಾದಕರು	ಆರಂಭದ ವರ್ಷ	ಪ್ರಕಾಶನ ಸ್ಥಳ
ವೈದಿಕ ಮಿತ್ರ	ಲಭ್ಯವಿಲ್ಲ	ಲಭ್ಯವಿಲ್ಲ	೧೯೧೦	ಮಂಗಳೂರು.
ಜೈನ್ ಬಂಧು	ಮಾಸಿಕ	ಸೂರಾಲು ನಾಭಿರಾಜಯ್ಯ	೧೯೧೧	ಮಂಗಳೂರು.
ಬೋಧಿನಿ	ಮಾಸಿಕ	ಎಂ.ಎನ್.ಕಾಮತ್	೧೯೧೩	ಮಂಗಳೂರು.
ಸಂಗ್ರಾಮ	ಸಾಪ್ತಾಹಿಕ	ನರೇಂದ್ರ ಮೆಂಡನ್	೧೯೧೩.	ಮಂಗಳೂರು.
ಆನಂದ	ಪಾಕ್ಷಿಕ	ಎಂ.ಎನ್.ಕಾಮತ್	೧೯೧೬	ಬಂಟ್ವಾಳ
ಕನ್ನಡ ಕೋಗಿಲೆ	ಮಾಸಿಕ	ಮುಳಿಯ ತಿಮ್ಮಪ್ಪಯ್ಯ	೧೯೧೬	ಮಂಗಳೂರು.
ಭಕ್ತಿ ಸಂದೇಶ	ಮಾಸಿಕ	ಡಿ.ಕೆ.ಭಾರದ್ವಾಜ	೧೯೧೮	ಮಂಗಳೂರು.
ಕಂಠೀರವ	ಸಾಪ್ತಾಹಿಕ	ಬೋಳಾರ ವಿಠಲ ರಾವ್, ಹುರುಳಿ ಭೀಮರಾವ್	೧೯೧೯	ಮಂಗಳೂರು.
ಸಹಕಾರಿ	ಮಾಸಿಕ	ಎ.ಮೊಳಹಳ್ಳಿ ಶಿವರಾವ್	೧೯೧೯	ಮಂಗಳೂರು
ತಿಲಕ ಸಂದೇಶ	ಮಾಸಿಕ	ಡಿ.ಕೆ.ಭಾರದ್ವಾಜ	೧೯೧೯	ಮಂಗಳೂರು.
ಸತ್ಯಾಗ್ರಹಿ	ಸಾಪ್ತಾಹಿಕ	ಎಚ್.ರಾಮರಾಯ ಮಲ್ಯ	೧೯೨೧	ಮಂಗಳೂರು.
ವಸಂತ	ಮಾಸಿಕ	ಕೋಟ ಶಿವರಾಮ ಕಾರಂತ	೧೯೨೩	ಮಂಗಳೂರು.
ಕ್ರೈಸ್ತ ಹಿತವಾದಿ	ಲಭ್ಯವಿಲ್ಲ	ಲಭ್ಯವಿಲ್ಲ	೧೯೨೪	ಮಂಗಳೂರು.
ಕನ್ನಡ ಸಹಕಾರಿ	ಮಾಸಿಕ	ಉಳ್ಳಾಲ ಮಂಗೇಶ ರಾವ್	೧೯೨೯	ಮಂಗಳೂರು.

ಪತ್ರಿಕೆಗಳ ಹೆಸರು	ಪ್ರಕಾರ	ಸಂಪಾದಕರು	ಆರಂಭದ ವರ್ಷ	ಪ್ರಕಾಶನ ಸ್ಥಳ
ಸದ್ಗುರು ಪಾದಸೇವೆ	ಲಭ್ಯವಿಲ್ಲ	ಕೆ.ವಂಕಟೇಶ್ ಶರ್ಮ	೧೯೨೬	ಮಂಗಳೂರು.
ಮ್ಯಾಂಗಲೂರ್ ಸಂಡೇ ನ್ಯೂಸ್	ಇಂಗ್ಲಿಷ್–ಸಾಪ್ತಾಹಿಕ	ಎಫ್.ಜೆ.ಎಂ.ಪಿಂಟೋ	೧೯೨೭	ಮಂಗಳೂರು.
ಕರ್ನಾಟಕ ಕೇಸರಿ	ಮಾಸಿಕ	ಎಂ.ಅನಂತ ರಾವ್	೧೯೨೮	ಪುತ್ತೂರು.
ರಾಷ್ಟ್ರ ಬಂಧು	ಸಾಪ್ತಾಹಿಕ	ಕೆ.ಶಂಕರ್‌ಭಟ್, ಕೆ.ಆರ್.ಆಚಾರ್	೧೯೨೮	ಮಂಗಳೂರು.
ತುಣಕು–ಮಿಣುಕು	ಮಾಸಿಕ	ಎಂ.ಪಿ.ಭಟ್	೧೯೨೮	ಮಂಗಳೂರು.
ಬಿ.ಎಂ.ಪ್ರೆಸ್ ಮ್ಯಾಗಜೀನ್	ಇಂಗ್ಲಿಷ್– ಮಾಸಿಕ	ರೌಲ್‌ಡೆರ್	೧೯೨೮	ಮಂಗಳೂರು.
ಪ್ರಭಾತ	ಸಾಪ್ತಾಹಿಕ	ಕುಡ್ಪಿ ವಾಸುದೇವ ಶೆಣೈ	೧೯೨೮	ಮಂಗಳೂರು.
ವೇದ ಸಂದೇಶ	ಮಾಸಿಕ	ಧರ್ಮದೇವ ವಿದ್ಯಾವಾಚಸ್ಪತಿ	೧೯೨೬	ಮಂಗಳೂರು.
ಸಾಹಿತ್ಯ	ಮಾಸಿಕ	ಪಿ.ವಿ.ಕಡಂಬಿಳಿತ್ತಾಯ	೧೯೨೯	ಪೆರಡಾಲ
ಕರ್ನಾಟಕ ಕ್ರೈಸ್ತ ಬಂಧು	ಪಾಕ್ಷಿಕ	ಆರ್.ಕರುಣಾಕರ್	೧೯೩೨	ಮಂಗಳೂರು.
ಬಡವರ ಬಂಧು	ಮಾಸಿಕ	ಮಂಗಳೂರು ಜಾರಪ್ಪ	೧೯೩೨	ಮಂಗಳೂರು.
ದಿ.ಫ್ರೆಂಡ್ ಆಫ್ ದಿ ಪೂವರ್	ಇಂಗ್ಲಿಷ್ –ದೈನಿಕ	ಮಂಗಳೂರು ಜಾರಪ್ಪ	೧೯೩೨	ಮಂಗಳೂರು.
ಬಾಲಚಂದ್ರ	ಮಾಸಿಕ	ಉಳ್ಳಾಲ ಮಂಗೇಶ್ ರಾವ್	೧೯೩೨	ಮಂಗಳೂರು.

ಪತ್ರಿಕೆಗಳ ಹೆಸರು	ಪ್ರಕಾರ	ಸಂಪಾದಕರು	ಆರಂಭದ ವರ್ಷ	ಪ್ರಕಾಶನ ಸ್ಥಳ
ಕಲಾಚಂದ್ರ	ಮಾಸಿಕ	ಆರ್.ಜೆ.ಶಣ್ಶೈ	೧೯೩೩	ಮಂಗಳೂರು.
ಭಾರತಿ	ಮಾಸಿಕ	ಯು.ವಾಮನ ಶೆಣ್ಶೈ	೧೯೩೩	ಮೂಲ್ಕಿ.
ವಿವೇಕಾಭ್ಯುದಯ	ಮಾಸಿಕ	ಡಿ.ಪುಟ್ಟಸ್ವಾಮಿ	೧೯೩೩	ಮಂಗಳೂರು.
ಸ್ವದೇಶಿಪ್ರಚಾರಕ	ಮಾಸಿಕ	ಎಂ.ಬಾಬುರಾಯ ಪ್ರಭು	೧೯೩೪	ಮಂಗಳೂರು
ತ್ರಿವೇಣಿ	ಮಾಸಿಕ	ಎಂ. ಬಾಬುರಾವ್	೧೯೩೬	ಮಂಗಳೂರು.
ಸ್ವತಂತ್ರ ಭಾರತ	ದೈನಿಕ	ಎಚ್.ರಾಮರಾಯ ಮಲ್ಯ	೧೯೩೭	ಮಂಗಳೂರು.
ಸದ್ಧರ್ಮಪ್ರಚಾರಕ	ಮಾಸಿಕ	ಲಕ್ಷ್ಮಣದೇವ ವಿದ್ಯಾರ್ಥಿ	೧೯೩೮	ಮಂಗಳೂರು.
ರಾಕ್ಣೊ	ಕೊಂಕಣಿ–ಸಾಪ್ತಾಹಿಕ	ಡಾ।ಎ.ಎಫ್.ಡಿ'ಸೋಜ	೧೯೩೮	ಮಂಗಳೂರು.
ಮಿತ್ರ್	ಕೊಂಕಣಿ–ಸಾಪ್ತಾಹಿಕ	ಜೆ.ಎಸ್.ಆಳ್ವಾರಿಸ್	೧೯೩೯	ಮಂಗಳೂರು.
ದೇಶಭಕ್ತ	ಲಭ್ಯವಿಲ್ಲ	ಲಭ್ಯವಿಲ್ಲ	೧೯೪೦	ಮಂಗಳೂರು
ನವಭಾರತ	ದೈನಿಕ	ವಿ.ಎಸ್.ಕುಡ್ವಾ	೧೯೪೧	ಮಂಗಳೂರು.
ವಿದ್ಯೋದಯ	ಸಾಪ್ತಾಹಿಕ	ವಿ.ಶ್ರೀನಿವಾಸ ಕಿಣಿ ಎಸ್.ಮುಕುಂದ ರಾವ್	೧೯೪೨	ಮಂಗಳೂರು.
ಕಲಾ	ಮಾಸಿಕ	ಯಲ್ಲೂರು ಉಮೇಶ್ ರಾವ್	೧೯೪೭	ಮಂಗಳೂರು.
ಆಶಾಜ್ಯೋತಿ	ಮಾಸಿಕ	ಲಭ್ಯವಿಲ್ಲ	೧೯೪೭	ಮೂಲ್ಕಿ.

ಪತ್ರಿಕೆಗಳ ಹೆಸರು	ಪ್ರಕಾರ	ಸಂಪಾದಕರು	ಆರಂಭದ ವರ್ಷ	ಪ್ರಕಾಶನ ಸ್ಥಳ
ಕಲಾವಿದ	ಮಾಸಿಕ	ಎಂ.ಎನ್.ಶೆಟ್ಟಿ	೧೯೪೭	ಮಂಗಳೂರು.
ಯುಗಪುರುಷ	ಮಾಸಿಕ	ಕೊಡತ್ತೂರು ಅನಂತಪದ್ಮನಾಭ ಉಡುಪ	೧೯೪೭	ಕಿನ್ನಿಗೋಳಿ.
ಅರುಣ	ಮಾಸಿಕ	ಯು.ಎನ್.ಶ್ರೀನಿವಾಸ್ ಭಟ್	೧೯೪೭	ಮಂಗಳೂರು.
ಮಲೆನಾಡು	ಮಾಸಿಕ	ಎಂ.ಎನ್.ಭಿಡೆ	೧೯೪೮	ಮುಂಡಾಜೆ
ಸಂಗಾತಿ	ಸಾಪ್ತಾಹಿಕ	ನವೀನಚಂದ್ರಪಾಲ್	೧೯೪೮	ಮಂಗಳೂರು.
ಸಾರಥಿ	ಮಾಸಿಕ	ಕೆ.ಕೃಷ್ಣಮಾಚಾರ್ಯ	೧೯೪೮	ಮಂಗಳೂರು.
ದಿ,.ಬಾಪೂಸ್ ಮೆಸೇಜ್	ಇಂಗ್ಲಿಷ್–ಸಾಪ್ತಾಹಿಕ	ಮಂಗಳೂರು ಜಾರಪ್ಪ	೧೯೪೯	ಮಂಗಳೂರು.
ಮೀನುಗಾರ	ಮಾಸಿಕ	ಹೊಸಬೆಟ್ಟು ಶ್ರೀನಿವಾಸ ಗುರಿಕಾರ	೧೯೪೯	ಸುರತ್ಕಲ್.
ನವಜೀವನ	ಮಾಸಿಕ	ಮುದ್ದಣ್ಣ ಸಾಲಿಯಾನ್	೧೯೪೯	ಸುರತ್ಕಲ್.
ಪುಷ್ಪ	ಮಾಸಿಕ	ಕೆ.ಪ್ರಭಾಕರ ರಾವ್	೧೯೪೯	ಉಡುಪಿ.
ಸುವಾಸಿನಿ	ಸಾಪ್ತಾಹಿಕ	ಕೆ.ವಾರಿಜದೇವಿ, ಮೋಹಿನಿ ದೇವಿ	೧೯೪೯	ಮಂಗಳೂರು.

ಪತ್ರಿಕೆಗಳ ಹೆಸರು	ಪ್ರಕಾರ	ಸಂಪಾದಕರು	ಆರಂಭದ ವರ್ಷ	ಪ್ರಕಾಶನ ಸ್ಥಳ
ಜನಪದ	ಸಾಪ್ತಾಹಿಕ	ನಾರಾಯಣರಾವ್ ಕಲ್ಲೆ	೧೯೫೦	ಮಂಗಳೂರು.
ಶೋಭಾ	ತ್ರೈಮಾಸಿಕ	ಶ್ರೀನಿವಾಸ, ಪುರುಷೋತ್ತಮ ಭಟ್, ತ್ರಿವಿಕ್ರಮ	೧೯೫೦	ಮಂಗಳೂರು
ವಿಚಾರವಾಣಿ	ಸಾಪ್ತಾಹಿಕ	ಕೋಟ ಶಿವರಾಮ ಕಾರಂತ ಎಂ.ಬಿ.ಮರಕಿಣಿ	೧೯೫೦	ಪುತ್ತೂರು.
ತರುಣ	ಮಾಸಿಕ	ಹರೇಕಳ ರಾಮದಾಸ್ ನಾಯಕ್	೧೯೫೧	ಮಂಗಳೂರು.
ಪ್ರವಾಹ	ಸಾಪ್ತಾಹಿಕ	ಎನ್.ಎಂ.ಎ.ರಾವ್	೧೯೫೧	ಮಂಗಳೂರು.
ವಿಜಯ	ಮಾಸಿಕ	ಎನ್.ಎಂ.ಎ.ರಾವ್	೧೯೫೧	ಮಂಗಳೂರು.
ತುತ್ತೂರಿ	ಮಾಸಿಕ	ಆರ್.ಎಂ.ವಿಶ್ವಾಮಿತ್ರ	೧೯೫೨	ಮಂಗಳೂರು.
ರಾಷ್ಟ್ರಜ್ಯೋತಿ	ಸಾಪ್ತಾಹಿಕ	ಕೆ.ಕೆ.ಶೆಟ್ಟಿ	೧೯೫೨	ಮಂಗಳೂರು.
ನುಡಿ	ಪಾಕ್ಷಿಕ	ಎಂ.ವಸುಕುಮಾರ್	೧೯೫೨	ಮಂಗಳೂರು.
ಆಶಾವಾದಿ	ಸಾಪ್ತಾಹಿಕ	ಕೆ.ವಿ.ಭಟ್	೧೯೫೩	ಮಂಗಳೂರು.
ಚಿತ್ರವಾಣಿ	ಮಾಸಿಕ	ಕುಮಾರ್	೧೯೫೩	ಮಂಗಳೂರು.

ಪತ್ರಿಕೆಗಳ ಹೆಸರು	ಪ್ರಕಾರ	ಸಂಪಾದಕರು	ಆರಂಭದ ವರ್ಷ	ಪ್ರಕಾಶನ ಸ್ಥಳ
ಪ್ರಪಂಚ	ಮಾಸಿಕ	ಬಿ.ನರಸಪ್ಪ	೧೯೫೩	ಮಂಗಳೂರು.
ಪ್ರವಾಸಿ	ಮಾಸಿಕ	ಕೆ.ಶ್ರೀನಿವಾಸ ಉಪಾಧ್ಯಾಯ, ಬಿ.ಈಶ್ವರ ಭಟ್	೧೯೫೩	ಮಂಗಳೂರು.
ರಾಷ್ಟ್ರಮತ	ಸಾಪ್ತಾಹಿಕ	ಕಡಂಗೋಡ್ಲು ಶಂಕರ ಭಟ್	೧೯೫೩	ಮಂಗಳೂರು.
ದೀರ್ಘಾಯು	ತ್ರೈಮಾಸಿಕ	ಎಂ.ಆರ್.ಭಟ್	೧೯೫೪	ಮಂಗಳೂರು
ದೇಶಪ್ರೇಮಿ	ಸಾಪ್ತಾಹಿಕ	ಎಂ.ನಾರಾಯಣ	೧೯೫೪	ಮಂಗಳೂರು.
ಜನಪ್ರಿಯ	ದ್ವೈಮಾಸಿಕ	ಮಣಿಪಾಲ ರಾಜು	೧೯೫೪	ಮಂಗಳೂರು.
ಆಶಾಜ್ಯೋತಿ	ಮಾಸಿಕ	ಲಭ್ಯವಿಲ್ಲ	೧೯೫೪	ಮೂಲ್ಕಿ
ಜನಪ್ರೇಮಿ	ಸಾಪ್ತಾಹಿಕ	ಅಲೆಕ್ಸಾಂಡರ್ ಪಿಂಟೋ	೧೯೫೪	ಮಂಗಳೂರು.
ಕಾಸರಗೋಡು ಸಮಾಚಾರ	ಸಾಪ್ತಾಹಿಕ	ವೈ ಮಹಾಲಿಂಗ ಭಟ್	೧೯೫೪	ಕಾಸರಗೋಡು.
ಸಂಧ್ಯಾದೀಪ	ದೈನಿಕ	ಎಚ್.ಮನಮೋಹನ ಕಾಮತ್	೧೯೫೪	ಮಂಗಳೂರು.
ಕಲಿಯುಗ	ಮಾಸಿಕ	ಡಾ।ಎಂ.ಗೋಪಾಲಕೃಷ್ಣ ರಾವ್	೧೯೫೫	ಮಂಗಳೂರು.
ಸಮಾಜವಾದಿ	ಸಾಪ್ತಾಹಿಕ	ಸಂಜೀವನಾಥ ಐಕಳ	೧೯೫೫	ಮಂಗಳೂರು.
ಸಂದೇಶ	ದೈನಿಕ	ವಿ.ಎನ್.ಶ್ರೀನಿವಾಸ ಭಟ್	೧೯೫೫	ಮಂಗಳೂರು.

ಪತ್ರಿಕೆಗಳ ಹೆಸರು	ಪ್ರಕಾರ	ಸಂಪಾದಕರು	ಆರಂಭದ ವರ್ಷ	ಪ್ರಕಾಶನ ಸ್ಥಳ
ನವಚೇತನ	ಮಾಸಿಕ	ಕೆ. ಕೇಶವ ಭಟ್	೧೯೫೫	ಪೆರಡಾಲ
ಕಾಣಿಕ್	ಕೊಂಕಣಿ–ಸಾಪ್ತಾಹಿಕ	ಜೆ.ಸಿ.ವೇಗಸ್	೧೯೫೫	ಮಂಗಳೂರು.
ಝೆಲೊ	ಕೊಂಕಣಿ–ಪಾಕ್ಷಿಕ	ಜೆ.ಎಸ್.ಆಳ್ವಾರಿಸ್	೧೯೫೬	ಮಂಗಳೂರು.
ಭವಿಷ್ಯ	ಮಾಸಿಕ	ಕೆ.ಎಸ್.ಉಪಾಧ್ಯಾಯ	೧೯೫೬	ಧರ್ಮಸ್ಥಳ.
ಗಾಂವ್ ಸೇವಕ್	ಲಭ್ಯವಿಲ್ಲ	ಶ್ರೀಮತಿ ಲೊವೆಲ್ಲಾ ಲೋಬೋ ಪ್ರಭು	೧೯೫೬	ಮಂಗಳೂರು.
ಮಧುವನ	ಮಾಸಿಕ	ಪಿ.ಲಕ್ಷ್ಮೀನಾರಾಯಣ ರಾವ್	೧೯೫೭	ಮಂಗಳೂರು.
ಇನ್‌ಸೈಟ್	ಇಂಗ್ಲಿಷ್– ಮಾಸಿಕ	ಜೆ.ಎಂ.ಲೋಬೋ ಪ್ರಭು	೧೯೫೮	ಮಂಗಳೂರು.
ಜನಮತ	ಸಾಪ್ತಾಹಿಕ	ಮಂಜುನಾಥ ನಾಯಕ್	೧೯೫೯	ಮಂಗಳೂರು.
ಭಾರತ	ಸಾಪ್ತಾಹಿಕ	ಎ.ವೆಂಕಟರಮಣ ಭಟ್	೧೯೬೦	ಪುತ್ತೂರು.
ದಿವ್ಯವಾಣಿ	ಪಾಕ್ಷಿಕ	ಸಿ.ಕೆ.ಹುಸೈನ್	೧೯೬೧	ಮಂಗಳೂರು.
ಇನ್‌ಸೈಟ್	ಇಂಗ್ಲಿಷ್– ಮಾಸಿಕ	ಜೆ.ಎಂ.ಲೋಬೋಪ್ರಭು	೧೯೬೧	ಮಂಗಳೂರು.
ಗ್ರಾಮರಹಿತ	ಸಾಪ್ತಾಹಿಕ	ಎಸ್.ಮುಕುಂದ ರಾವ್	೧೯೬೧	ಮಂಗಳೂರು.
ಕನ್ನಡವಾಣಿ	ದೈನಿಕ	ಯು. ನರಸಿಂಹ ರಾವ್	೧೯೬೧	ಮಂಗಳೂರು.

ಪತ್ರಿಕೆಗಳ ಹೆಸರು	ಪ್ರಕಾರ	ಸಂಪಾದಕರು	ಆರಂಭದ ವರ್ಷ	ಪ್ರಕಾಶನ ಸ್ಥಳ
ಒಳನೋಟ	ಸಾಪ್ತಾಹಿಕ	ಜೆ.ಎಂ.ಲೋಬೊ ಪ್ರಭು	೧೯೬೧	ಮಂಗಳೂರು.
ಶ್ರೀಗುರುವಾಣಿ	ಲಭ್ಯವಿಲ್ಲ	ಪಿ.ವಿ.ನಾಯಕ್	೧೯೬೧	ಮಂಗಳೂರು.
ಅಪ್ಸರಾ	ಮಾಸಿಕ	ಎ.ವಹಾಬ್	೧೯೬೨	ಮಂಗಳೂರು.
ಇಂದ್ರ ಧನುಷ್	ಮಾಸಿಕ	ಕೆ.ರಾಮಕೃಷ್ಣ	೧೯೬೨	ಪುತ್ತೂರು.
ನವಕೀರ್ತಿ	ಸಾಪ್ತಾಹಿಕ	ಎ.ಜಗನ್ನಿವಾಸ ಶೆಟ್ಟಿ	೧೯೬೨	ಮಂಗಳೂರು.
ಸೇವಾಮೃತ	ಮಾಸಿಕ	ಮಡಿಯಾಲ ನಾರಾಯಣ ಭಟ್	೧೯೬೨	ವಿಟ್ಲ
ಐಕ್ಯರಂಗ	ಮಾಸಿಕ	ಎಂ.ಎಂ.ಶೆಟ್ಟಿ	೧೯೬೪	ಮಂಗಳೂರು.
ವಾರ್ತಾಲೋಕ	ದೈನಿಕ	ಪಿ.ಗೋಪಾಲಕೃಷ್ಣ	೧೯೬೪	ಮಂಗಳೂರು.
ವಿಶ್ವಕರ್ಮ	ಮಾಸಿಕ	ಬಿ.ಹರಿಶ್ಚಂದ್ರ ಆಚಾರ್	೧೯೬೪	ಮಂಗಳೂರು.
ದಿ ಕರ್ನಾಟಕ ಟೆಲಿಗ್ರಾಫ್	ಇಂಗ್ಲಿಷ್ –ದೈನಿಕ	ಮಂಗಳೂರು ಜಾರಪ್ಪ	೧೯೬೪	ಮಂಗಳೂರು.
ಭಾರತೀಯ ಕೆಲಸಗಾರ	ಪಾಕ್ಷಿಕ	ಪಿ.ಡಿ.ಬಂಗೇರ	೧೯೬೫	ಮಂಗಳೂರು.
ಸುಧೇನು	ಮಾಸಿಕ	ಎಂ.ಸಿ.ಉಮೇಶ್ ಆಚಾರ್ಯ	೧೯೬೫	ಮಂಗಳೂರು.
ಆತ್ಮಮಿತ್ರ	ಮಾಸಿಕ	ಕೆ.ಸಿ.ಭಕ್ತಾನಂದಸ್ವಾಮಿ	೧೯೬೬	ಮಂಗಳೂರು.

ಪತ್ರಿಕೆಗಳ ಹೆಸರು	ಪ್ರಕಾರ	ಸಂಪಾದಕರು	ಆರಂಭದ ವರ್ಷ	ಪ್ರಕಾಶನ ಸ್ಥಳ
ವಿಜ್ಞಾನಲೋಕ	ಮಾಸಿಕ	ಆದ್ಯನಡ್ಕ ಕೃಷ್ಣ ಭಟ್	೧೯೬೬	ಶ್ರೀನಿವಾಸನಗರ.
ಅಗ್ನಿ	ಪಾಕ್ಷಿಕ	ಕೆ.ಎಂ.ಜೆ.ಹುಸೈನ್	೧೯೬೭	ಮೂಲ್ಕಿ
ಪೂಜಾರಿ ಬಂಧು	ಸಾಪ್ತಾಹಿಕ	ಮಂಗಳೂರು ಜಾರಪ್ಪ	೧೯೬೭	ಮಂಗಳೂರು.
ಹಿಲಾಲ್	ಸಾಪ್ತಾಹಿಕ	ಟಿ.ಎಂ.ಎ.ಶಾಫಿ	೧೯೬೭	ಮಂಗಳೂರು.
ವಾರ್ತಾವಾಣಿ	ದೈನಿಕ	ಎಂ.ವಸುಕುಮಾರ್	೧೯೬೭	ಮಂಗಳೂರು.
ಕಾಣಿಕ್	ಕೊಂಕಣಿ –ಸಾಪ್ತಾಹಿಕ	ಜೆ.ಸಿ.ವೇಗಸ್	೧೯೬೭	ಮಂಗಳೂರು.
ಪಂಚ್ಕಾದಾಯಿ	ಕೊಂಕಣಿ–ಮಾಸಿಕ	ಬಿ.ವಿ.ಬಾಳಿಗಾ	೧೯೬೭	ಮಂಗಳೂರು.
ವಿಶ್ವಮಿತ್ರ	ಮಾಸಿಕ	ಎಸ್.ಪದ್ಮನಾಭ ನಾಯಕ್	೧೯೬೭	ಮಂಗಳೂರು.
ದೇಶಪ್ರೇಮಿ	ಸಾಪ್ತಾಹಿಕ	ಮುಳಿಯ ಶಂಕರ ಭಟ್	೧೯೬೯	ವಿಟ್ಲ.
ಮೊಗವೀರ	ಮಾಸಿಕ	ಸಂಜೀವ	೧೯೬೯	ಸುರತ್ಕಲ್
ಅಮಾನತ್	ಲಭ್ಯವಿಲ್ಲ	ಎಂ.ಎ.ರಹೀಮ್	೧೯೭೦	ಮಂಗಳೂರು.
ಜನದೀಪ	ಸಾಪ್ತಾಹಿಕ	ಡಿ.ಎಸ್.ಕಾಮತ್	೧೯೭೦	ಮಂಗಳೂರು.
ವಿದ್ಯಾಲೋಕ	ಪಾಕ್ಷಿಕ	ಪದ್ಮನಾಭಯ್ಯ	೧೯೭೦	ಜೋಡುಮಾರ್ಗ
ತುಳುಸಿರಿ	ತುಳು–ಮಾಸಿಕ	ಡಾ। ಅಮ್ಮೆಂಬಳ ಬಾಳಪ್ಪ	೧೯೭೦	ಮಂಗಳೂರು.

ಪತ್ರಿಕೆಗಳ ಹೆಸರು	ಪ್ರಕಾರ	ಸಂಪಾದಕರು	ಆರಂಭದ ವರ್ಷ	ಪ್ರಕಾಶನ ಸ್ಥಳ
ಜಗದರ್ಶಿ	ಸಾಪ್ತಾಹಿಕ	ವಿ.ವೈ.ರೋಹಿದಾಸ ಪೈ	೧೯೭೦	ಮಂಗಳೂರು.
ಕಲಾದರ್ಶನ	ಮಾಸಿಕ	ವಿ.ಬಿ.ಹೊಸಮನೆ	೧೯೭೧	ಮಂಗಳೂರು.
ವ್ಯವಹಾರ	ಮಾಸಿಕ	ಕೆ.ಪಿ.ಹೆಗ್ಡೆ	೧೯೭೧	ಮಂಗಳೂರು
ತುಳುಕೂಟ	ಮಾಸಿಕ	ಎಂ.ರತ್ನಕುಮಾರ್	೧೯೭೧	ಮಂಗಳೂರು.
ದಿವ್ಯವಾಣಿ	ಸಾಪ್ತಾಹಿಕ	ರಾಘವೇಂದ್ರ ಎಂ.ನಾಗೋರಿ	೧೯೭೩	ಮಂಗಳೂರು.
ಮುಂಗಾರು	ತ್ರೈಮಾಸಿಕ	ಲಭ್ಯವಿಲ್ಲ	೧೯೭೩	ಮಂಗಳೂರು
ಚಿಂತಾಮಣಿ	ಲಭ್ಯವಿಲ್ಲ	ಲಭ್ಯವಿಲ್ಲ	ಲಭ್ಯವಿಲ್ಲ	ಮಂಗಳೂರು
ಚಿತ್ರಾ	ಮಾಸಿಕ	ವಂಕಣ್ಣ	ಲಭ್ಯವಿಲ್ಲ	ಮಂಗಳೂರು
ದೇಶರಂಜನ	ಮಾಸಿಕ	ಬಿ.ರಾಘವೇಂದ್ರ	ಲಭ್ಯವಿಲ್ಲ	ಮಂಗಳೂರು
ಸದ್ಧರ್ಮ ಪ್ರಚಾರಕ	ಮಾಸಿಕ	ಲಕ್ಷ್ಮಣದೇವ ವಿದ್ಯಾರ್ಥಿ	ಲಭ್ಯವಿಲ್ಲ	ಮಂಗಳೂರು.
ಧರ್ಮವೀರ	ಮಾಸಿಕ	ಕೃಷ್ಣಗೋಪಾಲ	ಲಭ್ಯವಿಲ್ಲ	ಮಂಗಳೂರು
ಜಯಮಾಲಾ	ಪಾಕ್ಷಿಕ	ಎಂ.ಕೆ.ಬಾಬು	ಲಭ್ಯವಿಲ್ಲ	ಮಂಗಳೂರು
ಜ್ಯೋತಿ	ಪಾಕ್ಷಿಕ	ಬಿ.ಎನ್.ಭಾಸ್ಕರ್ ರಾವ್	ಲಭ್ಯವಿಲ್ಲ	ಮಂಗಳೂರು.
ಕಲಾ	ಮಾಸಿಕ	ಯೆಲ್ಲೂರು ಉಮೇಶ ರಾವ್	ಲಭ್ಯವಿಲ್ಲ	ಮಂಗಳೂರು

ಪತ್ರಿಕೆಗಳ ಹೆಸರು	ಪ್ರಕಾರ	ಸಂಪಾದಕರು	ಆರಂಭದ ವರ್ಷ	ಪ್ರಕಾಶನ ಸ್ಥಳ
ಕೃಪೆಯ ಸುವಾರ್ತೆ	ಲಭ್ಯವಿಲ್ಲ	ಲಭ್ಯವಿಲ್ಲ	ಲಭ್ಯವಿಲ್ಲ	ಮಂಗಳೂರು.
ಮಕ್ಕಳ ಪತ್ರಿಕೆ	ಮಾಸಿಕ	ಕೆ.ಎಸ್.ಕಾರಂತ	ಲಭ್ಯವಿಲ್ಲ	ಮಂಗಳೂರು.
ಮತ್ಸ್ಯಲೋಕ	ಲಭ್ಯವಿಲ್ಲ	ಲಭ್ಯವಿಲ್ಲ	ಲಭ್ಯವಿಲ್ಲ	ಸುರತ್ಕಲ್
ನಾಡನುಡಿ	ಲಭ್ಯವಿಲ್ಲ	ಲಭ್ಯವಿಲ್ಲ	ಲಭ್ಯವಿಲ್ಲ	ಮಂಗಳೂರು
ನವನೀತ	ಮಾಸಿಕ	ಲಭ್ಯವಿಲ್ಲ	ಲಭ್ಯವಿಲ್ಲ	ಮಂಗಳೂರು.
ಪಂಚ	ಮಾಸಿಕ	ಲಭ್ಯವಿಲ್ಲ	ಲಭ್ಯವಿಲ್ಲ	ಮಂಗಳೂರು
ರೋಶನಿ	ಲಭ್ಯವಿಲ್ಲ	ಪ್ರಾಂಶುಪಾಲರು, ರೋಶನಿ ನಿಲಯ	ಲಭ್ಯವಿಲ್ಲ	ಮಂಗಳೂರು.
ಸಮಾಚಾರ	ಸಾಪ್ತಾಹಿಕ	ಎಸ್.ರಾಮರಾಯ ಮಲ್ಯ	೧೯೬೨	ಮಂಗಳೂರು.
ಸಮದರ್ಶಿ	ಸಾಪ್ತಾಹಿಕ	ಎಸ್.ಎನ್.ಹೊಳ್ಳ	೧೯೬೨	ಮಂಗಳೂರು
ಸಂದರ್ಶನ	ಲಭ್ಯವಿಲ್ಲ	ಲಭ್ಯವಿಲ್ಲ	ಲಭ್ಯವಿಲ್ಲ	ಮಂಗಳೂರು.
ಸಣ್ಣ ಕಥೆಗಳು	ಮಾಸಿಕ	ಲಭ್ಯವಿಲ್ಲ	ಲಭ್ಯವಿಲ್ಲ	ಮಂಗಳೂರು.
ಸರ್ವೋದಯ	ಮಾಸಿಕ	ಕೆ.ಕೆ.ಶೆಟ್ಟಿ	ಲಭ್ಯವಿಲ್ಲ	ಮಂಗಳೂರು.
ಉದಯಭಾರತ	ಮಾಸಿಕ	ಬಿ ನರಸಪ್ಪ	ಲಭ್ಯವಿಲ್ಲ	ಮಂಗಳೂರು.

ಪತ್ರಿಕೆಗಳ ಹೆಸರು	ಪ್ರಕಾರ	ಸಂಪಾದಕರು	ಆರಂಭದ ವರ್ಷ	ಪ್ರಕಾಶನ ಸ್ಥಳ
ವಿನೋದ ಭಾರತ	ಮಾಸಿಕ	ಬಿ ನರಸಪ್ಪ	ಲಭ್ಯವಿಲ್ಲ	ಮಂಗಳೂರು.
ವಿವೇಕ	ಮಾಸಿಕ	ಪಿ ವೆಂಕಟರಾಜ ಪುಣಿಚಿತ್ತಾಯ	ಲಭ್ಯವಿಲ್ಲ	ಪೆರಡಾಲ
ಪ್ರಿಯದರ್ಶಿನಿ	ಲಭ್ಯವಿಲ್ಲ	ಲಭ್ಯವಿಲ್ಲ	ಲಭ್ಯವಿಲ್ಲ	ಮಂಗಳೂರು.
ಜ್ಯೋತಿ	ಪಾಕ್ಷಿಕ	ಬಿ.ಎನ್. ಭಾಸ್ಕರ್ ರೈ	ಲಭ್ಯವಿಲ್ಲ	ಮಂಗಳೂರು.
ಸರ್ವೋದಯ	ಸಾಪ್ತಾಹಿಕ	ಎನ್.ಎಸ್.ಕಿಲ್ಲೆ	೧೯೪೮	ಮಂಗಳೂರು.

ಮಾಹಿತಿಯ ಪ್ರಸರಣಕ್ಕೆ ಪತ್ರಿಕೆಗಳು ಪರಿಣಾಮಕಾರಿ ಮಾಧ್ಯಮಗಳು.ಮತಪ್ರಸಾರ ಸಾಧನವಾಗಿ ಅವುಗಳನ್ನು ಯಶಸ್ವಿಯಾಗಿ ಬಳಸಿಕೊಳ್ಳಲಾಗಿದೆ ಎಂದು ಸ್ಥಳೀಯರು ತಿಳಿದುಕೊಂಡ ಮೇಲೂ, ಅವರು ಪತ್ರಿಕಾರಂಗಕ್ಕೆ ಕೂಡಲೇ ಪ್ರವೇಶಸಲಿಲ್ಲ. ಸ್ಥಳೀಯರ ಪ್ರವೇಶಕ್ಕೆ, ತಮ್ಮ ಧಾರ್ಮಿಕ ವಿಚಾರಗಳ ಜಿಜ್ಞಾಸೆಗೆ ಮಾಧ್ಯಮ ಒದಗಿಸಿಕೊಳ್ಳುವ ಉತ್ಕಟ ಇಚ್ಛೆಯಂತೆ, ಆ ಕಾಲಕ್ಕೆ ಒದಗಿ ಬಂದ ಕನ್ನಡದ ಅಚ್ಚುಮೊಳೆಗಳ ಆಧುನಿಕ ಆವಿಷ್ಕಾರವೂ ಇನ್ನೊಂದು ಮುಖ್ಯ ಕಾರಣವಾಯಿತು. ದಕ್ಷಿಣಕನ್ನಡದ ಅನಂತಾಚಾರಿಯವರ ಶ್ರಮದಿಂದ, ಕಲ್ಲಚ್ಚಿನ ಮುದ್ರಣಕ್ಕೆಷ್ಟೇ ತೃಪ್ತವಾಗಬೇಕಾಗಿದ್ದ ಕನ್ನಡ ಪತ್ರಿಕೆಗಳಿಗೆ ಅಚ್ಚುಮೊಳೆಗಳು ದೊರೆತವು. ಅಚ್ಚುಮೊಳೆಗಳನ್ನು, ಅವುಗಳಿಗೆ ಹೊಂದಿದ ಮುದ್ರಣ ಯಂತ್ರಗಳನ್ನು ಒದಗಿಸಿಕೊಂಡ ಸ್ಥಳೀಯರ ಮುದ್ರಣಾಲಯಗಳು ಮಂಗಳೂರು ಹಾಗೂ ಇತರ ಒಂದೆರಡು ಪಟ್ಟಣಗಳಲ್ಲಿ ಅಸ್ತಿತ್ವಕ್ಕೆ ಬಂದ ನಂತರ ೧೮೮೭ರಲ್ಲಿ 'ಸುದರ್ಶನ' ಮತ್ತು ೧೮೮೮ರಲ್ಲಿ 'ಸರ್ವೋದಯ ಪ್ರಕಾಶಿಕಾ' ಎಂಬ ಎರಡು ಪತ್ರಿಕೆಗಳು ಜನ್ಮತಳೆದವು.

'ಸುದರ್ಶನ' ಪತ್ರಿಕೆಯು ಬೈಲೂರು ರಾಮರಾಯರು ಸಂಪಾದಕತ್ವದಲ್ಲಿ ಡೆಮಿ ೧/೮ ಗಾತ್ರದಲ್ಲಿ ಪ್ರಕಟವಾಗುತ್ತಿತ್ತು. ಅದು ಧಾರ್ಮಿಕ ಜಿಜ್ಞಾಸೆಯ ಲೇಖನಗಳನ್ನು ಇತರ ವೈಚಾರಿಕ ಬರಹಗಳನ್ನು ಒಳಗೊಂಡಿತ್ತು. 'ಸರ್ವೋದಯ ಪ್ರಕಾಶಿಕಾ' ಮಂಗಳೂರಿನಲ್ಲಿ ಬಿ.ನರಸಿಂಹರಾಯರ ಸಂಪಾದಕತ್ವದಲ್ಲಿ ಡೆಮಿ ೪ ಗಾತ್ರದ ನಾಲ್ಕುಪುಟಗಳ ದೈನಿಕವಾಗಿ ತನ್ನ ಪ್ರಕಟಣೆ ಆರಂಭಿಸಿತಾದರೂ, ಆರು ತಿಂಗಳ ಅನಂತರ ಸಾಪ್ತಾಹಿಕವಾಗಿ ಬದಲಾಯಿತು. ಪೋಷಕದಾನಿಗಳ ಕೊಡುಗೆ ಮತ್ತು ಚಂದಾಹಣದ ಅರ್ಥಿಕ ಬೆಂಬಲಗಳನ್ನೇ ಅವಲಂಬಿಸಿ ಪ್ರಕಟವಾಗುತ್ತಿದ್ದ ಅವೆರಡು ಪತ್ರಿಕೆಗಳು ಆರ್ಥಿಕ ಸಮಸ್ಯೆಗಳಿಂದಾಗಿಯೇ ತಮ್ಮ ಪ್ರಕಟಣೆಗಳನ್ನು ನಿಲ್ಲಿಸಿದರೂ ಜಿಲ್ಲೆಯ ಮುಖ್ಯವಾಗಿ ಅಧ್ಯಾಪಕ ವರ್ಗದ ಸದಸ್ಯರಲ್ಲಿ ಬರಹಗಾರಿಕೆಯ ಬಗ್ಗೆ ಆಸಕ್ತಿಮೂಡಿಸಿದವು.

೧೯೦೦ರಲ್ಲಿ ಪ್ರಾರಂಭವಾದ 'ಸುವಾಸಿನಿ'ಗೆ ಬೆನಗಲ್ ರಾಮರಾಯರು ಸಂಪಾದಕರಾಗಿ ಬೋಳಾರ ವಿಠಲರಾಯರು ಪ್ರಕಾಶಕರಾಗಿ ಕಾರ್ಯನಿರ್ವಹಿಸಿದರು. ಕ್ರೌನ್ ೧/೪ ಗಾತ್ರದ ೧೬ ಪುಟಗಳ ಸಂಚಿಕೆಗಳನ್ನು ವಾರ್ಷಿಕ ಎರಡೂ ರೂಪಾಯಿ ಚಂದಾದಲ್ಲಿ ನೀಡುತ್ತಿದ್ದರು. ಪ್ರತಿ ತಿಂಗಳೂ ಓದುಗರಿಗಾಗಿ ಕಥೆ, ಕವಿತೆ, ಕಲೆ ಮೊದಲಾದ ಲೇಖನಗಳಲ್ಲದೆ ಧಾರಾವಾಹಿಗಳೂ ಪ್ರಕಟವಾಗುತ್ತಿದ್ದವು. ೨೦ನೇ ಶತನಮಾನದ ಆರಂಭದ ಅವಧಿಯಲ್ಲೇ ದೇಶದಾದ್ಯಂತ

ಬೆಳೆಯತೊಡಗಿದ್ದ ರಾಷ್ಟ್ರೀಯತಾ ಜಾಗೃತಿಯ ವಾಹಿನಿಯಲ್ಲಿ ಸೇರಿಕೊಂಡಿದ್ದ ದಕ್ಷಿಣ ಕನ್ನಡದ ಪತ್ರಿಕಾರಂಗವು ರಾಷ್ಟ್ರೀಯ ಆಂದೋಲನಕ್ಕೆ ತನ್ನ ಕೊಡುಗೆಯನ್ನು ನೀಡುತ್ತಿತ್ತು (ಕೃಷ್ಣ, ೧೯೯೯).

ಸಂಜೆಯ ದೈನಿಕ ಪತ್ರಿಕೋದ್ಯಮದ ಹೊಸ ಆಯಾಮವೊಂದು ೧೯೫೪ರಲ್ಲಿ ದಕ್ಷಿಣ ಕನ್ನಡಕ್ಕೆ ಒದಗಿ ಬಂತು. ಆ ವರ್ಷ ಪತ್ರಿಕೋದ್ಯಮದಲ್ಲಿ ಸಾಕಷ್ಟು ಅನುಭವಗಳಿಸಿದ್ದ ಎಚ್.ಮನಮೋಹನ ಕಾಮತರು ತಮ್ಮ ಏಕವ್ಯಕ್ತಿ ಸಾಹಸದ 'ಸಂಧ್ಯಾದೀಪ'ವನ್ನು ಮಂಗಳೂರಿನಲ್ಲಿ ಆರಂಭಿಸಿ, ಜಿಲ್ಲೆಯ ಮೊತ್ತಮೊದಲು ಸಂಜೆ ಪತ್ರಿಕೆಯನ್ನು ಹೊರಡಿಸಿದ ಕೀರ್ತಿಗಳಿಸಿದರು. ತನ್ನ ವಿಶಿಷ್ಟ ಆಕರ್ಷಣೆಗಳಿಂದ ಬಹುಬೇಗನೇ ಜನಪ್ರಿಯವಾದ (ಫುಲ್ ಸ್ಕೇಪ್) ೧/೪ ಗಾತ್ರದ ಎರಡು ಪುಟಗಳ ಸಂಧ್ಯಾದೀಪವನ್ನು ಅನುಕರಿಸಲು ಮತ್ತೆ ೬೦ ಮತ್ತು ೭೦ರ ದಶಕಗಳಲ್ಲಿ ಹುಟ್ಟಿಕೊಂಡ ಇತರ ಸಂಜೆ ಪತ್ರಿಕೆಗಳಿಗೆ ಸಾಧ್ಯವಾಗಲಿಲ್ಲ.ಹೀಗೆ ಏಳುಬೀಳುಗಳೊಂದಿಗೆ ಮುಂದುವರಿದ ಪತ್ರಿಕೋದ್ಯಮ ಇಂದು ಉಹಿಸಲಾರದ ರೀತಿಯಲ್ಲಿ ಬೆಳೆದು ನಿಂತಿದೆ.

೩.೨.೩. ದಕ್ಷಿಣ ಕನ್ನಡ ಜಿಲ್ಲೆಯ ಧೀಮಂತ ಪತ್ರಕರ್ತರು

ದಕ್ಷಿಣ ಕನ್ನಡ ಜಿಲ್ಲೆಯ ಪತ್ರಿಕೋದ್ಯಮಕ್ಕೆ ಸುಮಾರು ೧೬೫ ವರ್ಷಗಳಿಗಿಂತಲೂ ಹೆಚ್ಚಿನ ದೀರ್ಘ ಇತಿಹಾಸವಿದೆ. ಜಿಲ್ಲೆಯಲ್ಲಿ ಧೀಮಂತ ಪತ್ರಕರ್ತರಾಗಿ ಸೇವೆಸಲ್ಲಿಸಿ ಇತಿಹಾಸ ಸೇರಿದವರು ನೂರಾರು ಮಂದಿ. ಈ ಕ್ಷೇತ್ರದಲ್ಲಿ ದುಡಿದು ನಿವೃತ್ತರಾದವರು ಹಾಗೂ ಈಗ ದುಡಿಯುವವರ ಸಂಖ್ಯೆಯೂ ಅಪಾರ.

ಪತ್ರಿಕೋದ್ಯಮವನ್ನು ರಾಜ್ಯದಲ್ಲೇ ಪ್ರಥಮವಾಗಿ ಆರಂಭಿಸಿದ ಜಿಲ್ಲೆಯೆಂದು ದಕ್ಷಿಣ ಕನ್ನಡ ಜಿಲ್ಲೆ ಖ್ಯಾತವಾಗಿದೆ. 'ಸ್ವದೇಶಾಭಿಮಾನಿ'ಯ ವಿ.ಎಸ್.ಕಾಮತ್, 'ಸುವಾಸಿನಿ' ಹಾಗೂ ಕಂಠೀರವದ ಬೋಳಾರ ವಿಠಲ ರಾವ್, 'ಬೋಧಿನಿ' ಯ ಎಂ.ಎನ್.ಕಾಮತ್ 'ಪ್ರಭಾತ'ದ ಕುಡ್ಪಿ ವಾಸುದೇವ ಶೆಣೈ, 'ನವಭಾರತ'ದ ವಿ.ಎಸ್.ಕುಡ್ವಾ 'ಅಗ್ನಿಯ' ಕೆ.ಎಂ.ಜೆ. ಹುಸೈನ್, 'ದಿವ್ಯವಾಣಿ'ಯ ರಾಘವೇಂದ್ರ ನಾಗೋರಿ, 'ಕರಾವಳಿ ಅಲೆಯ' ಬಿ.ವಿ.ಸೀತಾರಾಂ ಮತ್ತು ರೋಹಿಣಿ ಮೊದಲಾದವರು ಪತ್ರಿಕೋದ್ಯಮ ಕ್ಷೇತ್ರದಲ್ಲಿ ನೂತನ ದಾಖಲೆಯನ್ನೇ ಮಾಡಿದವರು. ತಮ್ಮ ನಿಷ್ಠುರ ಬರಹಗಳಿಂದ ಕೆಲವು ಪತ್ರಕರ್ತರು ಕೊಲೆಯಾಗಿ ಹೋದದ್ದೂ ಇದೆ. ಇದಕ್ಕೆ ಉತ್ತಮ ಉದಾಹರಣೆ 'ದಿವ್ಯವಾಣಿ'ಯ ರಾಘವೇಂದ್ರ ನಾಗೋರಿ (ಐತಾಳ, ೨೦೦೬).

೩.೨.ಈ ಪ್ರಸ್ತುತ ಕಾರ್ಯಚರಿಸುತ್ತಿರುವ ಮಾಧ್ಯಮಗಳು

ದಕ್ಷಿಣ ಕನ್ನಡದಲ್ಲಿ ೧೭೫ ವರ್ಷಗಳಿಗಿಂತಲೂ ಹಿಂದೆ ಪ್ರಾರಂಭವಾದ 'ಪತ್ರಿಕೋದ್ಯಮ' ಈಗ ದೃಢವಾಗಿ ನಿಂತಿದೆ. ಆಧುನಿಕ ಯಂತ್ರೋಪಕರಣಗಳು, ಆಧುನಿಕ ರೀತಿ–ನೀತಿಗಳಿಂದ ದಿನೇ ದಿನೇ ಪತ್ರಿಕೆಗಳ ಸ್ವರೂಪ ಬದಲಾಗುತ್ತಿದೆ. ಹಿಂದೆಂದೂ ಇಲ್ಲದಂಥ ಆರೋಗ್ಯಕರ ಸ್ಪರ್ಧೆ ಏರ್ಪಡುತ್ತಿದೆ. ವಿಷಯ ವೈವಿಧ್ಯತೆಯಲ್ಲೂ, ಪತ್ರಿಕೆಯ ಪ್ರಸಾರ ಜನಪ್ರಿಯತೆ ಏರಿಸುವುದರಲ್ಲೂ ಉತ್ತಮ ಪೈಪೋಟಿ ಆರಂಭವಾಗಿದೆ. ಅಸಂಖ್ಯಾತ ಸಂಖ್ಯೆಯಲ್ಲಿ ದುಡ್ಡುಕೊಟ್ಟು ಓದುವ ಓದುಗರು ನಮ್ಮಲ್ಲಿದ್ದಾರೆ. ದ.ಕ.ಜಿಲ್ಲೆಯಲ್ಲಿ ಪತ್ರಕೋದ್ಯಮದ ಭವಿಷ್ಯ ಉಜ್ವಲವಾಗಿದೆ.

ಪ್ರಸ್ತುತ ದ.ಕ.ಜಿಲ್ಲೆಯಲ್ಲಿ ಡೆಕ್ಕನ್ ಹೆರಾಲ್ಡ್, ಪ್ರಜಾವಾಣಿ, ದಿ.ಟೈಮ್ಸ್ ಆಫ್ ಇಂಡಿಯಾ, ವಿಜಯಕರ್ನಾಟಕ, ಉದಯವಾಣಿ, ಹೊಸದಿಗಂತ, ಕನ್ನಡಪ್ರಭ, ದಿ ನ್ಯೂ ಇಂಡಿಯನ್ ಎಕ್ಸ್‌ಪ್ರೆಸ್, ದಿ ಹಿಂದೂ, ಸಂಯುಕ್ತ ಕರ್ನಾಟಕ, ಕರಾವಳಿ ಅಲೆ, ವಾರ್ತಾಭಾರತಿ, ಸಂಜೆವಾಣಿ, ವಿಜಯಕಿರಣ, ಮಂಗಳೂರು ಮಿತ್ರ, ಸುದ್ದಿಬಿಡುಗಡೆ, ಮ್ಯಾಂಗಲೂರ್ ಟುಡೇ, ಮಲಯಾಳ ಮನೋರಮ, ನಮ್ಮ ಬಂಟ್ವಾಳ ಮೊದಲಾದ ಕನ್ನಡ ಹಾಗೂ ಆಂಗ್ಲ ಭಾಷೆಯ ದೈನಿಕಗಳ ಪ್ರಸಾರ ಕಛೇರಿಗಳಿದ್ದು ಬಹುಮಂದಿ ಅಭಿಮಾನಿ ಓದುಗರನ್ನು ಹೊಂದಿದೆ. ಇಷ್ಟು ಮಾತ್ರವಲ್ಲದೆ ಹಲವಾರು ವಾರ ಪತ್ರಿಕೆ, ಪಾಕ್ಷಿಕ, ಮಾಸಿಕ, ವಾರ್ಷಿಕ ಪತ್ರಿಕೆಗಳೂ ಆಂಗ್ಲ, ಕನ್ನಡ, ತುಳು, ಕೊಂಕಣಿ ಭಾಷೆಯಲ್ಲೂ ಹುಟ್ಟಿಕೊಂಡಿವೆ. ಮಹಿಳಾ ಪತ್ರಿಕೆಗಳೂ ಇಲ್ಲವೆಂದಿಲ್ಲ.

ದೃಶ್ಯ ಮಾಧ್ಯಮಗಳ ಗಮನಹರಿಸಿದರೆ ದೂರದರ್ಶನ ವಾಹಿನಿ, ಈ.ಟಿ.ವಿ.ಕನ್ನಡ, ಝೀ ಕನ್ನಡ, ಉದಯ ಟಿ.ವಿ, ಟಿ.ವಿ.೯, ಏಷ್ಯಾನೆಟ್ ಸುವರ್ಣ, ಕಸ್ತೂರಿ ಟಿವಿ, ಮೊದಲಾದ ಪ್ರಮುಖ ಉಪಗ್ರಹ ವಾಹಿನಿಗಳ ಕಛೇರಿಗಳಿದ್ದು ವಿ4 ಮೀಡಿಯ, ನಮ್ಮ ಟಿ.ವಿ,ಕೋಸ್ಟಲ್ ಟೈಮ್ಸ್, ನಮ್ಮ ಕುಡ್ಲ, ರಿಕ್ವೆಸ್ಟ್ ಟಿ.ವಿ,ನಮ್ಮ ನಾಡು, ಪೊಸಕುರಲ್ ಮೊದಲಾದ ಪ್ರಮುಖ ಸ್ಥಳೀಯ ವಾಹಿನಿಗಳೂ ಸಾಥ್ ನೀಡಿವೆ ಎನ್ನಬಹುದು. ಮಾತ್ರವಲ್ಲದೆ, ವೆಬ್‌ಸೈಟ್ ನ್ಯೂಸ್‌ಗಳಾದ ಮ್ಯಾಂಗಲೂರಿಯನ್ ಡಾಟ್ ಕಾಮ್, ದೈಜಿವರ್ಲ್ಡ್ ಡಾಟ್ ಕಾಮ್, ಕೋಸ್ಟಲ್ ಡೈಜೆಸ್ಟ್, ಮ್ಯಾಂಗಲೂರ್ ಹೆಡ್‌ಲೈನ್ಸ್‌ಗಳು ಕಾರ್ಯಾಚರಿಸುತ್ತಿವೆ. ಚಲನಚಿತ್ರ ಹಾಗೂ ಧಾರಾವಾಹಿ ತಂಡಗಳೂ ಕಾರ್ಯಾಚರಿಸುತ್ತಿದ್ದು ಮಾಧ್ಯಮದ ಕಾರ್ಯವನ್ನು ನಿರ್ವಹಿಸುತ್ತಿರುವುದು ಗಮನಾರ್ಹ ಅಂಶವಾಗಿದೆ.

ಶ್ರಾವ್ಯ ಮಾಧ್ಯಮಗಳತ್ತ ಗಮಗಹರಿಸಿದರೆ ದ.ಕ.ಜಿಲ್ಲೆಯಲ್ಲಿ ಆಕಾಶವಾಣಿ ೨೭೫.೫ ಮೀಟರ್ಸ್/೧೦೦.೩, ಖಾಸಗಿ ಎಫ್.ಎಂ.ಬಾನುಲಿ ಕೇಂದ್ರಗಳಾದ ರೇಡಿಯೋ ಮಿರ್ಚಿ ೯೮.೩, ರೆಡ್ ಎಫ್.ಎಂ.೯೩.೫, ಬಿಗ್ ಎಫ್.ಎಂ.೯೨.೭ ರೇಡಿಯೊ ಸಾರಂಗ್ ಮೊದಲಾದ ಬಾನುಲಿ ಕೇಂದ್ರಗಳೂ ಇದ್ದು ಯಶಸ್ವಿಯಾಗಿ ಕಾರ್ಯಾಚರಿಸುತ್ತಿವೆ ಹಾಗೂ ಲಕ್ಷಾಂತರ ಕೇಳುಗರನ್ನು ಹೊಂದಿವೆ.

ಜನಪದ ಕಲಾ ಮಾಧ್ಯಮಗಳಾದ ನಾಟಕ ತಂಡಗಳಲ್ಲಿ 'ತೆಲಿಕೆದ ಬೊಳ್ಳಿ' ದೇವದಾಸ್ ಕಾಪಿಕಾಡ್ ಹಾಗೂ ಶರ್ಮಿಳಾ ಡಿ. ಕಾಪಿಕಾಡ್ ನೇತೃತ್ವದ 'ಚಾ ಪರ್ಕ' ನಾಟಕ ತಂಡ, ವಿಜಯ ಕುಮಾರ್ ಕೊಡಿಯಾಲ್ ಬೈಲ್‌ರ 'ಅಸಲ್', ಕುಸಲ್ದರಸೆ ನವೀನ್ ಡಿ. ಪಡೀಲ್‌ರವರ 'ಲಕುಮಿ' ತಂಡಗಳು ದಕ್ಷಿಣ ಕನ್ನಡ ಜಿಲ್ಲೆಯಲ್ಲಿನ ಪ್ರಮುಖ ನಾಟಕ ತಂಡಗಳಾಗಿವೆ. ಇನ್ನುಳಿದಂತೆ ಹಲವಾರು ನಾಟಕ ತಂಡಗಳು ಗ್ರಾಮಗ್ರಾಮಗಳಲ್ಲಿ ಹುಟ್ಟಿಕೊಂಡು ತನ್ನದೇ ಆದ ರೀತಿಯಲ್ಲಿ ಸಮಾಜದಲ್ಲಿ ಹೊಸ ಛಾಪನ್ನು ಮೂಡಿಸಿವೆ ಎನ್ನಬಹುದು.

ಯಕ್ಷಗಾನ ಕಲಾಮಾಧ್ಯಮವನ್ನು ಪರಿಗಣಿಸಿದಾಗ ಕಟೀಲು ಮೇಳ, ಬಪ್ಪನಾಡು ಮೇಳ, ಶ್ರೀಮಂಗಳಾದೇವಿ ಮೇಳ, ಧರ್ಮಸ್ಥಳ ಮೇಳ, ಸಸಿಹಿತ್ಲು ಮೇಳ ದಕ್ಷಿಣ ಕನ್ನಡ ಜಿಲ್ಲೆಯಲ್ಲಿನ ಪ್ರಮುಖ ಯಕ್ಷಗಾನ ಮೇಳಗಳಾಗಿದ್ದು ಗ್ರಾಮಗ್ರಾಮಗಳಲ್ಲಿಯೂ ಸಣ್ಣಪುಟ್ಟ ಯಕ್ಷಗಾನ ಕಲಾತಂಡಗಳು ಮಾಧ್ಯಮದ ಕಾರ್ಯವನ್ನು ನಿರ್ವಹಿಸುತ್ತಿವೆ. ಜನಪದ ಕಲಾ ಮಾಧ್ಯಮದಲ್ಲಿ ಒಂದಾದ 'ಹರಿಕಥೆ'(ಕಥಾಕಾಲಕ್ಷೇಪ)ಯ ಕುರಿತು ಹೇಳ ಹೊರಟರೆ ಈ ಕ್ಷೇತ್ರದಲ್ಲಿ ಪಳಗಿದ ಕೇವಲ ಬೆರಳೆಣಿಕೆಯಷ್ಟು ವ್ಯಕ್ತಿಗಳು ಮಾತ್ರ ಕಾಣಸಿಗುತ್ತಾರೆ. ಅಪರೂಪದ ಸಂದರ್ಭದಲ್ಲಾದರೂ ಹರಿಕಥೆಯು ತನ್ನ ವಿಶಿಷ್ಟ ಶೈಲಿಯಿಂದ ಜನಮನವನ್ನು ರಂಜಿಸುತ್ತಿದೆ.

೩.೩ ದಕ್ಷಿಣ ಕನ್ನಡ ಜಿಲ್ಲೆಯ ಮಾಧ್ಯಮಕ್ಕೆ ಮಹಿಳೆಯರ ಕೊಡುಗೆ

ದಕ್ಷಿಣ ಕನ್ನಡ ಜಿಲ್ಲೆಯ ಮಾಧ್ಯಮಗಳೆಂದಾಗ ದೃಶ್ಯ, ಮುದ್ರಣ, ಬಾನುಲಿ, ಜನಪದ ಮಾಧ್ಯಮಗಳು ಒಳಗೊಳ್ಳುತ್ತವೆ. ಜಿಲ್ಲೆಯಲ್ಲಿ ಹಲವು ದೈನಿಕಗಳು, ವಾರಪತ್ರಿಕೆಗಳು, ಪಾಕ್ಷಿಕಗಳು, ಮಾಸಪತ್ರಿಕೆಗಳು, ವಾರ್ಷಿಕ ಪತ್ರಿಕೆಗಳು, ಸಂಜೆ ಪತ್ರಿಕೆಗಳು, ಕೇಬಲ್ ವಾಹಿನಿಗಳು, ದೂರದರ್ಶನ, ಎಫ್‌ಎಂ ರೇಡಿಯೊ ಕೇಂದ್ರಗಳು, ಆಕಾಶವಾಣಿ ಕೇಂದ್ರ, ವೆಬ್‌ಸೈಟ್ ನ್ಯೂಸ್, ಚಲನಚಿತ್ರ ತಂಡಗಳು ಒಂದೆಡೆಯಾದರೆ, ಜನಪದ ಮಾಧ್ಯಮಗಳಾದ ಯಕ್ಷಗಾನ, ನಾಟಕ,

ಹರಿಕಥೆಗಳು ಜನಜೀವನದಲ್ಲಿ ಹಾಸುಹೊಕ್ಕಾಗಿವೆ. ಈ ಎಲ್ಲ ಕ್ಷೇತ್ರಗಳನ್ನು ಅವಲೋಕಿಸಿದಾಗ ಕೇವಲ ಕೆಲವೇ ಮಂದಿ ಮಹಿಳೆಯರು ಮಾಧ್ಯಮ ಜಗತ್ತಿನಲ್ಲಿ ತೆರೆಮರೆಯಲ್ಲಿದ್ದುಕೊಂಡು ಅಥವಾ ಬಹಿರಂಗವಾಗಿ ತಮ್ಮದೇ ಆದ ರೀತಿಯಲ್ಲಿ ಕೊಡುಗೆಗಳನ್ನು ನೀಡುತ್ತಿರುವುದು ಕಂಡು ಬರುತ್ತದೆ.

ದಕ್ಷಿಣ ಕನ್ನಡದಲ್ಲಿ ಎಲ್ಲರ ಮನೆಮಾತಾಗಿರುವ ಮಣಿಪಾಲ್ ಮೀಡಿಯ ನೆಟ್‌ವರ್ಕ್‌ನ 'ತರಂಗ' ವಾರಪತ್ರಿಕೆ, 'ತುಷಾರ' ಹಾಗೂ 'ರೂಪತಾರಾ' ಮಾಸ ಪತ್ರಿಕೆಗಳನ್ನು ಗಣನೆಗೆ ತೆಗೆದುಕೊಂಡರೆ ಹೆಸರಾಂತ ಮಹಿಳಾ ಪತ್ರಕರ್ತೆ ಸಂಧ್ಯಾ ಪೈಯವರೇ ನಿರ್ವಹಿಸುತ್ತಿರುವುದು ಗಮನಾರ್ಹ. ಸಂಧ್ಯಾ ಪೈ ದಿಟ್ಟತನದಿಂದ ಈ ಪತ್ರಿಕೆಗಳ ಮೂಲಕ ತನ್ನ ಪ್ರತಿಭೆ, ಸಾಮರ್ಥ್ಯಗಳನ್ನು ಸಾಕ್ಷೀಕರಿಸಿದ್ದಾರೆ. 'ಉದಯವಾಣಿ' ದೈನಿಕ ಮತ್ತು 'ತುಂತುರು' ಮಕ್ಕಳ ಪತ್ರಿಕೆಯ ಮೂಲಕವೂ ಆವರು ತನ್ನ ಕ್ರಿಯಾಶೀಲ, ಆಡಳಿತಾತ್ಮಕ ಸಾಮರ್ಥ್ಯ ಹಾಗೂ ಬೌದ್ಧಿಕ ಗುಣಮಟ್ಟವನ್ನು ಸಾಧಿಸಿ ತೋರಿಸಿದ್ದಾರೆ. ಅವರಲ್ಲಿ ಸಾಧನೆಯ ಗುಟ್ಟಿನ ಕುರಿತಾಗಿ ಕೇಳಿದರೆ ತುಂಬಾ ಸರಳವಾಗಿ, " ಈ ಮಟ್ಟ ತಲುಪಬೇಕಾದರೆ ನಾನೋರ್ವಳೇ ಕಾರಣಳಲ್ಲ. ಟೀಮ್ ವರ್ಕ್ ಕಾರಣ" ಎನ್ನುತ್ತಾರೆ. ಈ ಮಾತು ಅವರ ವಿಶಿಷ್ಟತೆಯನ್ನು ಎತ್ತಿತೋರಿಸುತ್ತದೆ.

ಟಿ.ವಿ.ಧಾರಾವಾಹಿಗಳನ್ನು ತಯಾರಿಸುವುದು ಸಂಧ್ಯಾ ಪೈಯವರ ಆಸಕ್ತ ಕ್ಷೇತ್ರ..ಕನ್ನಡದ ಪ್ರಮುಖ ವಾಹಿನಿಗಳಲ್ಲೂ ಅವರ ಧಾರಾವಾಹಿಗಳು ಪ್ರಸಾರವಾಗುತ್ತಿವೆ. ಸ್ವತಃ ಬರೆದು ನಿರ್ದೇಶಿಸುತ್ತಿರುವ ೨೫೨ ಸಂಚಿಕೆಗಳ 'ಬಿದಿಗೆ ಚಂದ್ರಮ' ಟೆಲಿ ಧಾರಾವಾಹಿ 'ಈ ಟಿವಿ' ಕನ್ನಡ ವಾಹಿನಿಯಲ್ಲಿ ಪ್ರಸಾರವಾಗಿದೆ. ಸಂಧ್ಯಾ ಪೈ ರೂಪಿಸಿರುವ ಧಾರಾವಾಹಿಗಳಲ್ಲಿ 'ಬಿದಿಗೆ ಚಂದ್ರಮ' ಮತ್ತು 'ಗುಪ್ತಗಾಮಿನಿ' – 'ಆರ್ಯಭಟ' ಸಾಂಸ್ಕೃತಿಕ ಪ್ರತಿಷ್ಠಾನದಿಂದ ೮ ಪ್ರಶಸ್ತಿಗಳನ್ನು ಪಡೆದಿರುವುದು ನಿಜಕ್ಕೂ ಆಶ್ಚರ್ಯದಾಯಕ ವಿಚಾರ.

'ತರಂಗ' ವಾರಪತ್ರಿಕೆಯಲ್ಲಿ ಸಂಧ್ಯಾ ಪೈಯವರ 'ಪ್ರಿಯ ಓದುಗ' ಅಂಕಣ ಹೆಚ್ಚಿನ ಎಲ್ಲ ಓದುಗರಿಗೂ ಬಹು ಪ್ರಿಯ. ಈ ಅಂಕಣವು ಉಪನಿಷತ್ತುಗಳು, ವೇದಾಂತ, ಭಗವದ್ಗೀತೆ, ಯೋಗ, ತಂತ್ರ ಮೊದಲಾದ ಆರೋಗ್ಯಕಾರಿ ಮತ್ತು ಸಮಕಾಲೀನ ಚಿಂತನೆಗಳನ್ನು ಒಳಗೊಂಡಿದ್ದು ಸಂಧ್ಯಾರ ಅನುಭವ, ಪಾಂಡಿತ್ಯವನ್ನು ನಿದರ್ಶಿಸುತ್ತದೆ. ಪತ್ರಿಕೋದ್ಯಮ ಮಾತ್ರವಲ್ಲದೆ ಸಾಮಾಜಿಕ ಕಾರ್ಯಕರ್ತೆಯಾಗಿರುವ ಸಂಧ್ಯಾ ಪೈ ಮಹಿಳಾಪರ

ಹೋರಾಟಗಳನ್ನು ನಡೆಸುತ್ತಾ ಬಂದಿದ್ದಾರೆ. ಅವರ ಸಾಧನೆಗಾಗಿ ಅತ್ತಿಮಬ್ಬೆ ಪ್ರಶಸ್ತಿ, ವರ್ಷದ ವ್ಯಕ್ತಿ ೨೦೦೩ ಪ್ರಶಸ್ತಿ, ಸಾಧನಾ ಪ್ರಶಸ್ತಿ, ಶ್ರೀಮಾತಾ ಪ್ರಶಸ್ತಿಗಳು ಸಂದಿವೆ. ಮಾಧ್ಯಮ ಲೋಕಕ್ಕೆ ಸಂಧ್ಯಾ ಪೈಯವರ ಕೊಡುಗೆ ಅನನ್ಯವಾದುದೇ ಆಗಿದೆ.

ಜಿಲ್ಲೆಯ ಮಾಧ್ಯಮ ಲೋಕಕ್ಕೆ ಅನನ್ಯ ಕೊಡುಗೆ ನೀಡುತ್ತಿರುವ ಇನ್ನೋರ್ವ ಪ್ರಮುಖ ಮಹಿಳೆಯೆಂದರೆ 'ಅನುಪಮ' ಮಾಸಪತ್ರಿಕೆಯ ಸಂಪಾದಕಿ ಶಹನಾಝ್ ಎಂ. ಮುಸ್ಲಿಂ ಮಹಿಳೆಯಾದರೂ 'ಪರ್ದಾ'ದ ಒಳಗಿದ್ದೇ ಬಾಹ್ಯ ಜಗತ್ತಿಗೆ ಕಾಲಿಟ್ಟು ತಮ್ಮ ಮನಮುಟ್ಟುವ ಬರವಣಿಗೆಯ ಮುಖಾಂತರ ಓದುಗರನ್ನು ಬದಲಾವಣೆಗಳಿಗೆ ಸ್ಪಂದಿಸುವಂತೆ ಸಾಮಾಜಿಕ ಕಳಕಳಿಯನ್ನು ಬೆಳೆಸುವಂತೆ ಪ್ರಯತ್ನಿಸಿದಾಕೆ.

೧೯೯೨ರಲ್ಲಿ ಚಿತ್ರಾ ಪಬ್ಲಿಕೇಶನ್ಸ್ ಮೂಲಕ 'ಕರಾವಳಿ ಅಲೆ' ಸಂಜೆ ಪತ್ರಿಕೆಯನ್ನು ಕರಾವಳಿಯಾದ್ಯಂತ ಮನೆಮನ ಮುಟ್ಟಿಸುವ ಕೆಲಸವನ್ನು ಮಾಡಿದವರು ರೋಹಿಣಿ ಮತ್ತು ಬಿ.ವಿ.ಸೀತಾರಾಂ ಜೋಡಿ. ರೋಹಿಣಿ ತಮ್ಮ ಪತಿಯೊಂದಿಗೆ ರಾಜಕಾರಣಿಗಳ, ಅಧಿಕಾರಿಗಳ, ಪೊಲೀಸರ, ಜನಪ್ರತಿನಿಧಿಗಳ ಭ್ರಷ್ಟಾಚಾರಗಳನ್ನು ಬಯಲಿಗೆಳೆದು ಸಮಾಜವನ್ನು ಉತ್ತಮ ಹಾದಿಯಲ್ಲಿ ಸಾಗುವಂತೆ ಮಾಡಲು ಹಗಲಿರುಳೆನ್ನದೆ ಶ್ರಮಿಸಿದಾಕೆ.

ಇನ್ನುಳಿದಂತೆ ತಮ್ಮ ಮನಮುಟ್ಟುವ ಬರಹಗಳಿಂದ ಓದುಗರನ್ನು ಆಕರ್ಷಿಸುತ್ತ ಮುನ್ನಡೆಯುತ್ತಿರುವ ಸಾರಾ ಅಬೂಬಕರ್ ಮುದ್ರಣ ಮಾಧ್ಯಮ ಲೋಕಕ್ಕೆ ಅನುಪಮ ಕೊಡುಗೆಯನ್ನೇ ನೀಡಿದ್ದಾರೆ. ಮುಸ್ಲಿಂ ಮಹಿಳೆಯಾಗಿದ್ದುಕೊಂಡು ಹೆಣ್ಣೆಂದರೆ ಯಾರು ಎಂಬುದನ್ನು ತೋರಿಸಿಕೊಟ್ಟ ಈ ಧೀಮಂತ ಮಹಿಳೆಯದು ಸಾಹಿತ್ಯ ಲೋಕದಲ್ಲಿ ಅಚ್ಚಳಿಯದ ಹೆಸರೆನ್ನಬಹುದು. ತಮ್ಮ ಲೇಖನಗಳ ಮೂಲಕ ಸಮಾಜದಲ್ಲಿ ಮಿಂಚಿನ ಸಂಚಾರವನ್ನುಂಟು ಮಾಡಿರುವ ಹಾಗೂ ಮಾಡುತ್ತಿರುವ ಅನೇಕ ಮಹಿಳಾಮಣಿಗಳು ದಕ್ಷಿಣ ಕನ್ನಡದಲ್ಲಿ ಹೆಸರು ಮಾಡಿದ್ದಾರೆ. ಅವರಲ್ಲಿ ಪ್ರಮುಖರೆಂದರೆ ಚಂದ್ರಭಾಗಿ ರೈ, ಆನಂದಿ ಸದಾಶಿವ ರಾವ್, ನಿರ್ಮಲಾ ಕಾಮತ್, ಡಾ. ಭುವನೇಶ್ವರಿ ಹೆಗಡೆ, ಡಾ. ಚಂದ್ರಕಲಾ ನಂದಾವರ, ಡಾ. ಸಬೀಹಾ ಭೂಮಿಗೌಡ, ಉಷಾ ಪಿ. ರೈ, ಡಾ. ಧರಣೀದೇವಿ ಮಾಲಗತ್ತಿ, ಮುಮ್ತಾಜ್ ಬೇಗಂ.

ಬಾನುಲಿ ಜಗತ್ತಿನಲ್ಲಿ ತಮ್ಮ ಸುಮಧುರ ಧ್ವನಿ, ಮಾತುಗಳ ಮೂಲಕ ವಿಶಿಷ್ಟ ಸೇವೆ ಸಲ್ಲಿಸುತ್ತಿರುವ ಮಹಿಳಾಮಣಿಗಳಲ್ಲಿ ನಾರಾಯಣಿ ದಾಮೋದರ್, ಶಕುಂತಲಾ ಆರ್. ಕಿಣಿ, ಮಾಲತಿ ಆರ್. ಭಟ್, ಕನ್ಸೆಪ್ಟಾ ಫೆರ್ನಾಂಡಿಸ್, ಶಾರದಾ ಪ್ರಮುಖರು.ಇವರು ಕೇಳುಗರಿಗೆ ಆಸಕ್ತಿ ಮೂಡಿಸುವಂಥ ಅನೇಕ ಕಾರ್ಯಕ್ರಮಗಳನ್ನು ನಡೆಸಿಕೊಡುತ್ತಿದ್ದಾರೆ. ನಾರಾಯಣಿ ದಾಮೋದರ್ ಹರಿಕಥೆ ಪ್ರಸ್ತುತಪಡಿಸುವವರಾಗಿದ್ದು, ಜನಪದ ಮಾಧ್ಯಮದ ಸೇವಾ ಕೈಂಕರ್ಯದಲ್ಲೂ ತೊಡಗಿದ್ದಾರೆ.

ಲೀಲಾವತಿ ಬೈಪಡಿತ್ತಾಯ ಯಕ್ಷಗಾನ ಕ್ಷೇತ್ರದಲ್ಲಿ ಚಿರಪರಿಚಿತ ಹೆಸರು. ಯಕ್ಷಗಾನದಲ್ಲಿ ಪಡುವಲ ಪಾಯದ ತೆಂಕು ತಿಟ್ಟಿನಲ್ಲಿ ತಮ್ಮ ಸುಶ್ರಾವ್ಯ ಕಂಠದ ಮೂಲಕ ಕಲಾಸೇವೆಗೈಯುತ್ತಿರುವ ಏಕೈಕ ಮಹಿಳಾ ಭಾಗವತೆ. ಯಕ್ಷಗಾನ ಭಾಗವತಿಕೆಯ ತರಗತಿಗಳನ್ನೂ ನಡೆಸುತ್ತಿರುವ ಲೀಲಾವತಿ ಬೈಪಡಿತ್ತಾಯರು ಜನಪದ ಮಾಧ್ಯಮದ ಬೆಳವಣಿಗೆಗಾಗಿ ಹಗಲಿರುಳೆನ್ನದೆ ಶ್ರಮಿಸುತ್ತಿದ್ದಾರೆ.

ಚಲನಚಿತ್ರ ಮಾಧ್ಯಮದಲ್ಲಿಯೂ ಮಹಿಳಾಮಣಿಗಳು ಅಪರೂಪವಾದ ಕೊಡುಗೆಯನ್ನು ನೀಡಿದ್ದಾರೆ. ಚಲನಚಿತ್ರ ಮಾಧ್ಯಮದಲ್ಲಿ ದಕ್ಷಿಣ ಕನ್ನಡದವರೇ ಆದ ಲೀಲಾವತಿ,ಜಯಮಾಲಾರ ಕೊಡುಗೆ ಎಂದೆಂದಿಗೂ ವಿಶಿಷ್ಟ. ಐಶ್ವರ್ಯಾ ರೈ ನಟಿಯಾಗಿ, ಮಿಸ್ ವರ್ಲ್ಡ್ ಆಗಿ ಖ್ಯಾತಿ ಪಡೆದರೆ ಶಿಲ್ಪಾ ಶೆಟ್ಟಿ ನಟಿಯಾಗಿ ಮಾಡೆಲಿಂಗ್ ಕ್ಷೇತ್ರದಲ್ಲೂ ಮಿಂಚಿದ್ದು ವಿಶೇಷ. ಬಾಲಿವುಡ್‌ನ ಸ್ನೇಹಾ ಉಳ್ಳಾಲ್, ಅನುಷಾ ಶೆಟ್ಟಿ ತಮಿಳು, ತೆಲುಗು-ಕನ್ನಡ ಭಾಷಾ ನಟಿ ರಾಧಿಕಾ, ಸರೋಜಿನಿ ಶೆಟ್ಟಿ, ಗೀತಾ ಸುರತ್ಕಲ್ ಮೊದಲಾದವರು ಅಮೋಘ ನಟನಾ ಪ್ರತಿಭೆಗೆ ಹೆಸರಾಗಿದ್ದಾರೆ.

ದಕ್ಷಿಣ ಕನ್ನಡ ಜಿಲ್ಲೆಯಲ್ಲಿನ ನಾಟಕ ಕ್ಷೇತ್ರದಲ್ಲಿ ಶರ್ಮಿಳಾ ಡಿ. ಕಾಪಿಕಾಡ್ 'ಚಾಪರ್ಕ' ತಂಡದ ನೇತೃತ್ವ ವಹಿಸಿಕೊಂಡು ಹಲವಾರು ಮಹಿಳೆಯರನ್ನು ಕಲಾ ಸೇವೆ ಮಾಡಲು ಪ್ರೋತ್ಸಾಹಿಸಿದಾಕೆ. ಪ್ರಸ್ತುತ ದಕ್ಷಿಣ ಕನ್ನಡ ಜಿಲ್ಲೆಯಲ್ಲಿನ 'ಚಾಪರ್ಕ' , 'ಲಕುಮಿ', 'ಅಸಲ್' ಕಲಾತಂಡಗಳಲ್ಲಿ ಮಹಿಳೆಯರೂ ಪಾತ್ರ ವಹಿಸುತ್ತಿದ್ದಾರೆ. ರಾತ್ರಿ ಪ್ರದರ್ಶನಗಳಲ್ಲೂ ಪುರುಷರಂತೆ ಸಮಾನವಾಗಿ ಸೈ ಎನಿಸಿಕೊಂಡಿದ್ದಾರೆ.

ಉಲ್ಲೇಖ

೧. ಜಿಲ್ಲಾ ಪಂಚಾಯತ್ ದ.ಕ, ೨೦೦೯, "ದ.ಕ.ಜಿಲ್ಲೆಯ ಅಂಕಿ ಅಂಶಗಳ ನೋಟ", ಜಿಲ್ಲಾ ಸಂಖ್ಯಾ ಸಂಗ್ರಹಣಾಧಿಕಾರಿ ದ.ಕ. ಮಂಗಳೂರು ಪ್ರಕಟಣೆ.

೨. ವಿಕಿಪೀಡಿಯಾ.ಒರ್ಗ್/ವಿಕಿ/ದಕ್ಷಿಣಕನ್ನಡ.

೩. ಚಿರಂಜೀವಿ, ೨೦೦೩, "ಕರ್ನಾಟಕ ಪತ್ರಿಕೋದ್ಯಮ", ಸಪ್ನಾ ಬುಕ್ ಹೌಸ್, ಬೆಂಗಳೂರು.

೪. ಕೃಷ್ಣಗೋಪಾಲ, ೧೯೯೧, "ಕರ್ನಾಟಕ ಪತ್ರಿಕಾ ಇತಿಹಾಸ", ಕರ್ನಾಟಕ ಪತ್ರಿಕಾ ಅಕಡಮಿ, ಬೆಂಗಳೂರು.

೫. ದಾಮೋದರ ಐತಾಳ.ಕೆ, ೨೦೦೭, "ಅವಿಭಜಿತ ದಕ್ಷಿಣ ಕನ್ನಡ ಜಿಲ್ಲೆಯ ಧೀಮಂತ ಪತ್ರಕರ್ತರು", ಅಖಿಲಭಾರತ ೭೪ನೆಯ ಕನ್ನಡ ಸಾಹಿತ್ಯ ಸಮ್ಮೇಳನದ ಪ್ರಕಟಣೆ, ಉಡುಪಿ.

******

ಅಧ್ಯಾಯ ೪

ಮಾಹಿತಿ ವಿಶ್ಲೇಷಣೆ

೪.೧. ಮಾಧ್ಯಮದಲ್ಲಿನ ಪುರುಷರು ಮತ್ತು ಮಹಿಳೆಯರು

೪.೨ ಹುದ್ದೆ

೪.೩ ತೃಪ್ತಿ

೪.೪. ವಾರ್ಷಿಕ ಆದಾಯದ ಮಟ್ಟ

೪.೫. ತಿಂಗಳ ವೇತನದ ಲಭ್ಯತೆ

೪.೬. ಮಾಧ್ಯಮದಲ್ಲಿನ ಆಸಕ್ತ ವಿಷಯ

೪.೭. ಕಾರ್ಯಕ್ಷೇತ್ರದಲ್ಲಿನ ಸ್ವಾತಂತ್ರ್ಯ

೪.೮. ಕೌಟುಂಬಿಕ ಒತ್ತಡ

೪.೯ ಸಾಮಾನ್ಯ ಮಹಿಳೆಯರ ಸ್ಥಾನಮಾನ – ಉನ್ನತಿ ಸಾಧ್ಯತೆ

೪.೧೦ ಲೈಂಗಿಕ ಕಿರುಕುಳಕ್ಕೆ ಒಳಗಾದ ಬಗ್ಗೆ

೪.೧೧ ಕೆಲಸದ ಪಾಳಿ

೪.೧೨ ಮಾಧ್ಯಮದಲ್ಲಿನ ಭದ್ರತೆ

ಅಧ್ಯಯ ೪

ಮಾಹಿತಿ ವಿಶ್ಲೇಷಣೆ

ಸಮೀಕ್ಷೆಯು ಮಾಧ್ಯಮದಲ್ಲಿ ದುಡಿಯುವ ಮಹಿಳೆಯರ ಸ್ಥಿತಿಗತಿ ಕುರಿತಾಗಿ ನಿಷ್ಕರ್ಷ ಮಾಹಿತಿಯನ್ನು ಒದಗಿಸುತ್ತದೆ. ಮಾಧ್ಯಮದಲ್ಲಿ ದುಡಿಯುವ ಮಹಿಳೆಯರು ಕೇವಲ ಮಾಧ್ಯಮದ ಮಾತ್ರವಲ್ಲ ಸಮಾಜದಲ್ಲಿನ ಆಗುಹೋಗುಗಳಲ್ಲಿ ಬದಲಾವಣೆಯ ಹೊಸಗಾಳಿ ಬೀಸುವಂತೆ ಮಾಡಿದ್ದಾರೆ. ಸಮೀಕ್ಷೆಯು ಮಾಧ್ಯಮದಲ್ಲಿ ದುಡಿಯುವ ಮಹಿಳೆಯರ ವೃತ್ತಿ, ಪ್ರವೃತ್ತಿ, ತೃಪ್ತಿಯ ಕುರಿತಾಗಿ ಮಾತ್ರವಲ್ಲದೆ ಕೌಟುಂಬಿಕ ಸಹಕಾರಗಳ ಕುರಿತು ಕೇಂದ್ರಿಕೃತಗೊಂಡಿದೆ.

ಮಾಹಿತಿಯನ್ನು ಪ್ರಶ್ನಾವಳಿ, ಸಂದರ್ಶನ ಮತ್ತು ಅವಲೋಕನದ ಮೂಲಕ ವಿಶ್ಲೇಷಣೆ ಮಾಡಲಾಗಿದೆ. ಅಧ್ಯಾಯದಲ್ಲಿ ರೇಖಾಚಿತ್ರಗಳನ್ನು ಮತ್ತು ಕೋಷ್ಟಕಗಳನ್ನು ಅಳವಡಿಸಲಾಗಿದೆ. ಈ ಆಧ್ಯಯನದಲ್ಲಿ ದಕ್ಷಿಣಕನ್ನಡ ಜಿಲ್ಲೆಯಲ್ಲಿನ ೫ ತಾಲೂಕುಗಳಾದ ಮಂಗಳೂರು, ಬಂಟ್ವಾಳ, ಬೆಳ್ತಂಗಡಿ, ಪುತ್ತೂರು ಮತ್ತು ಸುಳ್ಯದಲ್ಲಿ ಕಾರ್ಯಾಚರಿಸುತ್ತಿರುವ ಮುದ್ರಣ,ದೃಶ್ಯ, ಬಾನುಲಿ ಹಾಗೂ ಜನಪದ ಮಾಧ್ಯಮಗಳಲ್ಲಿ ದುಡಿಯುತ್ತಿರುವ ೧೫೪ ಮಂದಿ ಮಹಿಳೆಯರಿಂದ ಮಾಹಿತಿಯನ್ನು ಪಡೆಯಲಾಗಿದೆ.

ಪ್ರಾಥಮಿಕ ಮೂಲದಿಂದ ಸಂಗ್ರಹಿಸಲಾದ ಅಂಕಿ ಅಂಶಗಳ ವಿಶ್ಲೇಷಣೆಯನ್ನು ಈ ಕೆಳಗೆ ನಮೂದಿಸಲಾಗಿದೆ.

೪.೧ ಪುರುಷರು ಮತ್ತು ಮಹಿಳೆಯರ ಸಂಖ್ಯೆ

ಈ ಕೋಷ್ಟಕದಲ್ಲಿ ಮಾಧ್ಯಮ ಪ್ರಕಾರಗಳಾದ ಮುದ್ರಣ, ದೃಶ್ಯ, ಬಾನುಲಿ ಹಾಗೂ ಜನಪದ ಮಾಧ್ಯಮಗಳನ್ನು ಗಣನೆಗೆ ತೆಗೆದುಕೊಳ್ಳಲಾಗಿದೆ. ದಕ್ಷಿಣ ಕನ್ನಡದ ಮಾಧ್ಯಮಗಳಲ್ಲಿನ ೧೫೪ ಮಂದಿಗೆ ಪ್ರಶ್ನಾವಳಿ ನೀಡಿ ಅಭಿಪ್ರಾಯ ಸಂಗ್ರಹಿಸಲಾಗಿದೆ.

[illegible]

ಮಾಧ್ಯಮ	**ಪುರುಷರು**	**ಮಹಿಳೆಯರು**
ಮುದ್ರಣ	೩೮೦	೮೩
ದೃಶ್ಯ	೧೧೦	೨೧
ಬಾನುಲಿ	೬೦	೩೦
ಜನಪದ	೨೧೦	೨೦
ಒಟ್ಟು	**೭೬೦**	**೧೫೪**

ಕೋಷ್ಟಕ ೪.೧ ಮಾಧ್ಯಮದಲ್ಲಿ ದುಡಿಯುವವರ ಸಂಖ್ಯೆ

ಕೋಷ್ಟಕದಲ್ಲಿ ತೋರಿಸಿದಂತೆ ಮುದ್ರಣ ಮಾಧ್ಯಮದಲ್ಲಿ ದುಡಿಯುವ ಪುರುಷರ ಸಂಖ್ಯೆ ಹೆಚ್ಚಿದ್ದು ಮಹಿಳೆಯರು ಕೇವಲ ೮೩ ಮಂದಿ ಮಾತ್ರ ಇದ್ದರೆ, ದೃಶ್ಯ ಮಾಧ್ಯಮದಲ್ಲಿಯೂ ಪುರುಷರ ಪ್ರಬಲ್ಯತೆ ಕಂಡು ಬಂದಿದೆ. ಅಲ್ಲಿ ಕೇವಲ ೨೧ ಮಂದಿ ಮಹಿಳೆಯರು ಮಾತ್ರ ಕಾರ್ಯನಿರ್ವಹಿಸುತ್ತಿದ್ದಾರೆ. ಬಾನುಲಿಯಲ್ಲಿ ದುಡಿಯುವ ಮಹಿಳೆಯರ ಸಂಖ್ಯೆ ಪುರುಷರ ಸಂಖ್ಯೆಯ ಅರ್ಧದಷ್ಟಿದೆ ಹಾಗೂ ಜನಪದ ಮಾಧ್ಯಮಗಳಲ್ಲಿ ಶೇಕಡಾ ೮.೭ ಮಂದಿ ಮಾತ್ರ ಮಹಿಳೆಯರಿದ್ದಾರೆ. ಮಾಧ್ಯಮ ಕ್ಷೇತ್ರದಲ್ಲಿ ಪುರುಷರ ಪ್ರಾಬಲ್ಯ ಹೆಚ್ಚಿರುವ ಕಾರಣ ಮಹಿಳೆಯರು ಅಲ್ಲಿ ದುಡಿಯುವ ಅವಕಾಶದಿಂದ ವಂಚಿತರಾಗಿದ್ದಾರೆನ್ನುವುದನ್ನು ತೋರಿಸಿಕೊಡುತ್ತದೆ.

೪.೨ ಹುದ್ದೆ

ವಿವಿಧ ಪ್ರಕಾರದ ಮಾಧ್ಯಮಗಳಲ್ಲಿ ಮಹಿಳೆಯರು ವಿಭಿನ್ನ ರೀತಿಯ ಹುದ್ದೆಗಳನ್ನು ನಿರ್ವಹಿಸುತ್ತಿದ್ದಾರೆ.ಕೆಲವರಿಗೆಸಂಪಾದಕೀಯ,ಇನ್ನುಕೆಲವರಿಗೆ ಉಪಸಂಪಾದಕೀಯ,ವರದಿಗಾರಿಕೆ,ನಿರೂಪಣೆ ಉದ್ಘೋಷಣೆ,ಕಾರ್ಯಕ್ರಮ ಸಂಯೋಜನೆ ಅಥವಾ ತಾಂತ್ರಿಕ ಹುದ್ದೆಗಳು ಲಭಿಸಿರುತ್ತದೆ.

ಹುದ್ದೆ	ಮಹಿಳೆಯರ ಸಂಖ್ಯೆ
ಸಂಪಾದಕೀಯ	೨
ಉಪಸಂಪಾದಕೀಯ	೫೧
ವರದಿಗಾರಿಕೆ	೨೦
ನಿರೂಪಕಿ/ಉದ್ಘೋಷಕಿಯಾಗಿ	೨೫
ಕಲಾವಿದೆಯಾಗಿ	೨೦
ಕಾರ್ಯಕ್ರಮ ಸಂಯೋಜಕಿಯಾಗಿ	೮
ತಾಂತ್ರಿಕ	೧೦
ಕಛೇರಿ ಸಹಾಯಕಿಯಾಗಿ	೧೬
ಛಾಯಗ್ರಹಣ	೨

ಕೋಷ್ಟಕ ೪.೨ ಮಾಧ್ಯಮದ ವಿವಿಧ ಹುದ್ದೆಗಳಲ್ಲಿ ಮಹಿಳೆಯರು

ಈ ಕೋಷ್ಟಕದಲ್ಲಿ ಮುದ್ರಣ, ದೃಶ್ಯ, ಬಾನುಲಿ ಹಾಗೂ ಜನಪದ ಮಾಧ್ಯಮಗಳಲ್ಲಿ ಮಹಿಳೆಯರು ನಿರ್ವಹಿಸುತ್ತಿರುವ ವಿವಿಧ ಹುದ್ದೆಗಳ ಬಗ್ಗೆ ಹೇಳಲಾಗಿದೆ. ಸಂಪಾದಕಿಯರಾಗಿ ದುಡಿಯುವ ಹಾಗೂ ಛಾಯಾಗ್ರಾಹಕರಾಗಿ ದುಡಿಯುವ ಮಹಿಳೆಯರ ಸಂಖ್ಯೆ ಅತೀ ಕಡಿಮೆಯಿದೆ. ಉಪಸಂಪಾದಕರಾಗಿ ೩೩.೧೨%, ವರದಿಗಾರಿಕೆಯಲ್ಲಿ ೧೨.೯೯%, ನಿರೂಪಕಿ/ಉದ್ಘೋಷಕಿಯರಾಗಿ ೧೬.೨೩%, ಕಲಾವಿದೆಯರಾಗಿ ೧೨.೯೯%, ಕಾರ್ಯಕ್ರಮ ಸಂಯೋಜಕಿಯರಾಗಿ ೫.೧೯%, ತಾಂತ್ರಿಕ ಹುದ್ದೆಗಳಲ್ಲಿ ೬.೪೯%, ಕಛೇರಿ ಸಹಾಯಕಿಯರಾಗಿ ೧೦.೩೯%, ಮಹಿಳೆಯರು ದುಡಿಯುತ್ತಿದ್ದಾರೆ. ಈ ಮೇಲಿನ ಅಂಕಿ ಅಂಶಗಳು ಪ್ರಮೇಯದಲ್ಲಿ ಹೇಳಲಾದ ಮಹಿಳೆಯರಲ್ಲಿ ಸಮಾನ ಅವಕಾಶಗಳು, ಇಲ್ಲದಿರುವುದು ತಾರತಮ್ಯಕ್ಕೆ ಈಡು ಮಾಡಿದ್ದನ್ನು ಪುಷ್ಠೀಕರಿಸುತ್ತದೆ.


೪.೩ ತೃಪ್ತಿ

ಕೆಲವೇ ಕೆಲವು ಕ್ಷೇತ್ರವು ಮನುಷ್ಯನಲ್ಲಿ ತೃಪ್ತ ಭಾವವನ್ನು ಮೂಡಿಸುತ್ತದೆ.ಆದರೂ ದುಡಿಮೆಯ ಕ್ಷೇತ್ರವೆಂದಾಗ ಅಲ್ಲಿ ಮಹಿಳೆಯರಿಗೆ ಕೊಂಚಮಟ್ಟಿಗಾದರೂ ಮಾನಸಿಕ ನೆಮ್ಮದಿಯಿದ್ದಲ್ಲಿ ಮುಂದುವರಿಯಲು ಸಾಧ್ಯವಾಗುತ್ತದೆ.ಮಾತ್ರವಲ್ಲ ಅಭಿವೃದ್ಧಿಯೂ ಸಾಧ್ಯವಾಗುತ್ತದೆ.

ತೃಪ್ತಿ	ಮಹಿಳೆಯರು	ಶೇಕಡ
ಉನ್ನತ ಮಟ್ಟದಲ್ಲಿ ನೀಡಿಲ್ಲ	೯೦	೫೮%
ಸಮಾಧಾನವಿಲ್ಲ	೩೮	೨೪.೬%
ಸಮಾಧಾನವಿದೆ	೨೬	೧೬.೮%

ಕೋಷ್ಟಕ ೪.೩ ವೃತ್ತಿ ಕ್ಷೇತ್ರದಲ್ಲಿನ ತೃಪ್ತಿ

ಈ ಮೇಲಿನ ಕೋಷ್ಟಕದಲ್ಲಿ ಮಾಧ್ಯಮ ಕ್ಷೇತ್ರದ ವಿವಿಧ ಪ್ರಕಾರಗಳಾದ ಮುದ್ರಣ, ಬಾನುಲಿ, ದೃಶ್ಯ ಹಾಗೂ ಜನಪದ ಮಾಧ್ಯಮಗಳಲ್ಲಿ ದುಡಿಯುತ್ತಿರುವ ಸಮೀಕ್ಷೆ ಮಾಡಲಾದ ೧೫೪ ಮಂದಿ ಮಹಿಳೆಯರಲ್ಲಿ ೯೦ ಮಂದಿ ಮಾಧ್ಯಮಕ್ಷೇತ್ರವು ಉನ್ನತ ಮಟ್ಟದಲ್ಲಿ ತೃಪ್ತಿಯನ್ನು ನೀಡಿಲ್ಲವೆಂದರೆ, ೩೮ ಮಂದಿ ಮಹಿಳೆಯರಿಗೆ ಮಾಧ್ಯಮ ಕ್ಷೇತ್ರದಲ್ಲಿ ಸಮಾಧಾನವಿಲ್ಲವಾಗಿದೆ ಹಾಗೂ ೨೬ ಮಂದಿ ಮಹಿಳೆಯರಿಗೆ ಮಾಧ್ಯಮ ಸಮಾಧಾನವನ್ನು ನೀಡಿದೆ ಎನ್ನುವುದನ್ನು ಸೂಚಿಸುತ್ತದೆ.



ನಕ್ಷೆ ೪.೧

೪.೪ ವಾರ್ಷಿಕ ಆದಾಯದ ಮಟ್ಟ

ವಾರ್ಷಿಕ ಆದಾಯ	ಮಾಧ್ಯಮದಲ್ಲಿ ದುಡಿಯುವ ಮಹಿಳೆಯರು	ಶೇಕಡವಾರು
೪೫ ಸಾವಿರದಿಂದ ೭೫ ಸಾವಿರ	೮೪	೫೪.೫೫
೭೫ ಸಾವಿರದಿಂದ ೧.೫ ಲಕ್ಷದವರೆಗೆ	೩೫	೨೨.೭೩
೧.೫ ಲಕ್ಷದಿಂದ ಮೇಲ್ಪಟ್ಟ	೨೭	೧೭.೫೩
೩ ಲಕ್ಷದಿಂದ ಮೇಲ್ಪಟ್ಟ	೮	೫.೧೯

ಕೋಷ್ಟಕ ೪.೪ ಮಹಿಳೆಯರ ಸಂಪಾದನೆ

ಮೇಲಿನ ಕೋಷ್ಟಕದಲ್ಲಿ ಸಂಪರ್ಕವಾದ ೧೫೪ ಮಂದಿ ದುಡಿಯುವ ಮಹಿಳೆಯರ ಪೈಕಿ ೫೪.೫೫% ಮಂದಿ ಮಹಿಳೆಯರು ೪೫ ಸಾವಿರದಿಂದ ೭೫ ಸಾವಿರ ವಾರ್ಷಿಕ ಆದಾಯ ಹೊಂದಿದವರಾಗಿದ್ದಾರೆ ಎಂದು ಸೂಚಿಸಲಾಗಿದೆ. ೨೨.೭೩% ಮಂದಿ ಮಹಿಳೆಯರು ೭೫ ಸಾವಿರದಿಂದ ೧.೫ ಲಕ್ಷದವರೆಗೆ ವಾರ್ಷಿಕ ಆದಾಯವನ್ನು ಹೊಂದಿದ್ದು, ೧೭.೫೩ ಮಂದಿ ೧.೫ ಲಕ್ಷದಿಂದ ಮೇಲ್ಪಟ್ಟ ವಾರ್ಷಿಕ ಆದಾಯ ಪಡೆಯುತ್ತಿದ್ದಾರೆ ಹಾಗೂ ೫.೧೯% ಮಂದಿ ಮಹಿಳೆಯರು ೩ ಲಕ್ಷದಿಂದ ಮೇಲ್ಪಟ್ಟು ವಾರ್ಷಿಕ ಆದಾಯವನ್ನು ಪಡೆಯುತ್ತಿದ್ದಾರೆ.



ನಕ್ಷೆ ೪.೨

೪.೫ ತಿಂಗಳ ವೇತನ ಲಭ್ಯತೆ

ಮಾಧ್ಯಮ	ಒಟ್ಟು ಮಹಿಳೆಯರು	ಸಮಯಕ್ಕೆ ಸರಿಯಾಗಿ ಸಿಗುವುದಿಲ್ಲ	ಸಮಯಕ್ಕೆ ಸರಿಯಾಗಿ ಸಿಗುತ್ತದೆ
ಮುದ್ರಣ	೮೩	೧೫	೬೮
ದೃಶ್ಯ	೨೧	೧೫	೬
ಬಾನುಲಿ	೩೦	೦	೩೦
ಜನಪದ	೨೦	೫	೧೫

ಕೋಷ್ಟಕ ೪.೫ ತಿಂಗಳ ಸಂಪಾದನೆ

ಮೇಲಿನ ಕೋಷ್ಟಕದಲ್ಲಿ ಹೇಳಿರುವಂತೆ ಸಂಪರ್ಕವಾದ ೧೫೪ ಮಾಧ್ಯಮದಲ್ಲಿ ದುಡಿಯುವ ಮಹಿಳೆಯರಲ್ಲಿ ಮುದ್ರಣ ಮಾಧ್ಯಮಕ್ಕೆ ಸೇರಿದ ೬೮ ಮಂದಿಗೆ ತಿಂಗಳ ವೇತನವು ಸಮಯಕ್ಕೆ ಸರಿಯಾಗಿ ಲಭಿಸಿದರೆ ೧೫ ಮಂದಿಗೆ ಸಮಯಕ್ಕೆ ಸರಿಯಾಗಿ ತಿಂಗಳ ವೇತನ ಲಭಿಸುತ್ತಿಲ್ಲ. ದೃಶ್ಯಮಾಧ್ಯಮದಲ್ಲಿ ಸಂಪರ್ಕವಾದ ೨೧ ಮಹಿಳೆಯರಲ್ಲಿ ೧೫ ಮಂದಿಗೆ ತಿಂಗಳ ವೇತನ ಸಮಯಕ್ಕೆ ಸರಿಯಾಗಿ ಲಭಿಸಿದರೆ ೬ ಮಂದಿಗೆ ಸಮಯಕ್ಕೆ ಸರಿಯಾಗಿ ಲಭಿಸುತ್ತಿಲ್ಲ.

ಬಾನುಲಿ ಮಾಧ್ಯಮದ ೩೦ ಮಂದಿ ದುಡಿಯುವ ಮಹಿಳೆಯರಲ್ಲಿ ಎಲ್ಲರಿಗೂ ತಿಂಗಳ ವೇತನ ಸಮಯಕ್ಕೆ ಸರಿಯಾಗಿ ಲಭಿಸುತ್ತಿದೆ. ಜನಪದ ಮಾಧ್ಯಮದಲ್ಲಿ ದುಡಿಯುವ ೨೦ ಮಂದಿ ಮಹಿಳೆಯರಲ್ಲಿ ೧೫ ಮಂದಿಗೆ ತಿಂಗಳ ವೇತನ ಸಮಯಕ್ಕೆ ಸರಿಯಾಗಿ ಲಭಿಸುತ್ತಿದೆ. ಉಳಿದ ೫ ಮಂದಿಗೆ ಅದು ಸಮಯಕ್ಕೆ ಸರಿಯಾಗಿ ಲಭಿಸುತ್ತಿಲ್ಲ. ಇತರರಿಗೆ ಹೋಲಿಸಿದಲ್ಲಿ ದೃಶ್ಯಮಾಧ್ಯಮದಲ್ಲಿ ದುಡಿಯುವ ಮಹಿಳೆಯರಲ್ಲಿ ಸಮಯಕ್ಕೆ ಸರಿಯಾಗಿ ತಿಂಗಳ ವೇತನ ಪಡೆಯದವರೇ ಹೆಚ್ಚಾಗಿದ್ದಾರೆ.

೪.೬ ಮಾಧ್ಯಮದಲ್ಲಿ ಆಸಕ್ತ ವಿಷಯ

ಆಸಕ್ತ ವಿಷಯ	ಮಹಿಳೆಯರು
ಪರಿಸರ	೧೧
ಕ್ರೀಡೆ	೧೮
ಮಹಿಳೆ	೨೯
ವಾಣಿಜ್ಯ	೧೬
ರಾಜಕೀಯ	೨೫
ಸಾಂಸ್ಕೃತಿಕ	೪೨
ಇತರ	೧೩

ಕೋಷ್ಟಕ ೪.೬ ಮಹಿಳೆಯರಿಗಿರುವ ಆಸಕ್ತಿ

ಈ ಕೋಷ್ಟಕದಲ್ಲಿ ಸೂಚಿಸಿದಂತೆ ಸಂಪರ್ಕವಾದ ೧೫೪ ಮಂದಿ ಮಹಿಳೆಯರಲ್ಲಿ ೧೧ ಮಂದಿಗೆ ಮಾಧ್ಯಮದ ಆಸಕ್ತ ವಿಷಯ ಪರಿಸರವಾಗಿದೆ. ೧೮ ಮಂದಿ ಮಹಿಳೆಯರು ಕ್ರೀಡಾ ವಿಷಯದಲ್ಲಿ ಆಸಕ್ತಿ ತೋರಿದ್ದಾರೆ, ಅಲ್ಲದೆ ೨೯ ಮಂದಿ ಮಹಿಳಾ ವಿಷಯದಲ್ಲಿ, ೧೬ ಮಂದಿ ವಾಣಿಜ್ಯ ವಿಷಯದಲ್ಲಿ, ೨೫ ಮಂದಿ ರಾಜಕೀಯ ವಿಷಯದಲ್ಲಿ, ೪೨ ಮಂದಿ ಸಾಂಸ್ಕೃತಿಕ ವಿಷಯದಲ್ಲಿ ಹಾಗೂ ೧೩ ಮಂದಿ ಮಹಿಳೆಯರು ಇತರ ವಿಷಯಗಳಲ್ಲಿ ಆಸಕ್ತಿ ಹೊಂದಿದ್ದಾರೆ. ಸಾಂಸ್ಕೃತಿಕ ವಿಷಯದಲ್ಲಿ ಆಸಕ್ತಿಯಿರುವ ಮಹಿಳೆಯರ ಸಂಖ್ಯೆ ಹೆಚ್ಚಿದೆ.

೪.೭ ಕಾರ್ಯಕ್ಷೇತ್ರದಲ್ಲಿನ ಸ್ವಾತಂತ್ರ್ಯ

ಕಾರ್ಯಕ್ಷೇತ್ರದಲ್ಲಿ ಸ್ವಾತಂತ್ರ್ಯ	ಮಹಿಳೆಯರ ಸಂಖ್ಯೆ
ಸಂಪೂರ್ಣ ಸ್ವಾತಂತ್ರ್ಯವಿದೆ	೪೪
ಅತ್ಯಲ್ಪ	೯೦
ಸ್ವಾತಂತ್ರ್ಯವಿಲ್ಲ	೨೦

ಕೋಷ್ಟಕ ೪.೭ ಮಹಿಳೆಯರಿಗಿರುವ ಸ್ವಾತಂತ್ರ್ಯ

ಮೇಲಿನ ಕೋಷ್ಟಕದಲ್ಲಿ ಸೂಚಿಸಿದಂತೆ ಸಂಪರ್ಕಿಸಲಾದ ಮಾಧ್ಯಮದಲ್ಲಿ ದುಡುಯುವ ೧೫೪ ಮಹಿಳೆಯರಲ್ಲಿ ೪೪ ಮಂದಿ ಮಾಧ್ಯಮದ ಕಾರ್ಯಕ್ಷೇತ್ರದಲ್ಲಿ ಸಂಪೂರ್ಣ ಸ್ವಾತಂತ್ರ್ಯವಿದೆಯೆಂದೂ, ೯೦ ಮಂದಿ ಅತ್ಯಲ್ಪ ಪ್ರಮಾಣದ ಸ್ವಾತಂತ್ರ್ಯವಿದೆಯೆಂದೂ ಹಾಗೂ ೨೦ ಮಂದಿ ಮಾಧ್ಯಮ ಕಾರ್ಯಕ್ಷೇತ್ರದಲ್ಲಿ ಸ್ವಾತಂತ್ರವಿಲ್ಲ ಎಂದಿದ್ದಾರೆ. ಒಟ್ಟಿನಲ್ಲಿ ಮಾಧ್ಯಮ ಕ್ಷೇತ್ರದಲ್ಲಿ ಅತ್ಯಲ್ಪ ಪ್ರಮಾಣದ ಸ್ವಾತಂತ್ರ್ಯವೆಂದ ಮಹಿಳೆಯರ ಪ್ರಮಾಣ ಶೇ. ೫೮.೪೪ ರಷ್ಟಿದ್ದು ಉಳಿದೆಲ್ಲಕ್ಕಿಂತ ಹೆಚ್ಚಿದೆ.

೪.೮ ಕೌಟುಂಬಿಕ ಒತ್ತಡ

ಮಾಧ್ಯಮ	ಕೌಟುಂಬಿಕ ಒತ್ತಡಗಾದವರು	ಮಾಧ್ಯಮದಲ್ಲಿ ದುಡಿಯುವ ಮಹಿಳೆಯರ ಸಂಖ್ಯೆ
ಮುದ್ರಣ	೮೩	೮೩
ದೃಶ್ಯ	೨೧	೨೧
ಬಾನುಲಿ	೩೦	೩೦
ಜನಪದ	೨೦	೨೦

ಕೋಷ್ಟಕ ೪.೮ ಕೌಟುಂಬಿಕ ಒತ್ತಡಕ್ಕೊಳಗಾದ ಮಹಿಳೆಯರು


ಸಮೀಕ್ಷೆ ಸಂದರ್ಭ ಸಂಪರ್ಕವಾದ ೮೩ ಮಂದಿ ಮುದ್ರಣ ಮಾಧ್ಯಮದಲ್ಲಿ ದುಡಿಯುವ ಮಹಿಳೆಯರ ಪೈಕಿ ೮೩ ಮಂದಿಯು ಕೌಟುಂಬಿಕ ಒತ್ತಡಕ್ಕೊಳಗಾಗಿದ್ದಾರೆ. ದೃಶ್ಯಮಾಧ್ಯಮದ ೨೧ ಮಂದಿ ಮಹಿಳೆಯರು, ಬಾನುಲಿಯಲ್ಲಿ ೩೦ ಮಂದಿ ಹಾಗೂ ಜನಪದ ಮಾಧ್ಯಮದಲ್ಲಿ ೨೦ ಮಂದಿಯೂ ಕೌಟುಂಬಿಕ ಒತ್ತಡಕ್ಕೆ ಒಳಗಾಗಿದ್ದಾರೆ. ಮುದ್ರಣ, ದೃಶ್ಯ, ಬಾನುಲಿ, ಜನಪದ ಮಾಧ್ಯಮಗಳಲ್ಲಿ ಎಲ್ಲಾ ಮಹಿಳೆಯರು ಕೌಟುಂಬಿಕ ಒತ್ತಡಕ್ಕೆ ಒಳಗಾಗಿದ್ದಾರೆ ಎನ್ನುವುದನ್ನು ಮೇಲಿನ ಕೋಷ್ಟಕ ಸ್ಪಷ್ಟಪಡಿಸುತ್ತದೆ.

೪.೯ ಸಾಮಾನ್ಯ ಮಹಿಳೆಯರ ಸ್ಥಾನಮಾನ – ಉನ್ನತಿ ಸಾಧ್ಯತೆ

ಮಹಿಳೆಯರು	ಸಾಧ್ಯ	ಸಾಧ್ಯವಿಲ್ಲ	ಸ್ವಲ್ಪಮಟ್ಟಿಗೆ
೧೫೪	೧೦೫	೦	೪೯

ಕೋಷ್ಟಕ ೪.೯ಮಾಧ್ಯಮದ ಮಹಿಳೆಯರಿಂದ ಸಾಮಾನ್ಯ ಮಹಿಳೆಯರ ಉನ್ನತಿ ಸಾಧ್ಯತೆ

ಮೇಲಿನ ಕೋಷ್ಟಕದಲ್ಲಿ ಸಮೀಕ್ಷೆಯಲ್ಲಿ ಸಂಪರ್ಕಿಸಲಾದ ಒಟ್ಟು ೧೫೪ ಮಾಧ್ಯಮದಲ್ಲಿ ದುಡಿಯುವ ಮಹಿಳೆಯರಲ್ಲಿ ೧೦೫ ಮಹಿಳೆಯರು ಮಾಧ್ಯಮದಲ್ಲಿ ದುಡಿಯುವ ಮಹಿಳೆಯರಿಂದ ಸಾಮಾನ್ಯ ಮಹಿಳೆಯರ ಉನ್ನತಿ ಸಾಧ್ಯ ಎನ್ನುವುದನ್ನು ಒಪ್ಪಿಕೊಂಡಿದ್ದಾರೆ. ಅಲ್ಲದೆ ೪೯ ಮಂದಿ ಮಹಿಳೆಯರು ಸಾಮಾನ್ಯ ಮಹಿಳೆಯರ ಉನ್ನತಿ ಸ್ವಲ್ಪಮಟ್ಟಿಗೆ ಸಾಧ್ಯ ಎಂದಿದ್ದಾರೆ. ಮಾಧ್ಯಮದಲ್ಲಿ ದುಡಿಯುವ ಮಹಿಳೆಯರಿಂದ ಸಾಮಾನ್ಯ ಮಹಿಳೆಯರ ಉನ್ನತಿ ಸಾಧ್ಯವಿಲ್ಲ ಎನ್ನುವುದನ್ನು ಯಾವ ಮಹಿಳೆಯರೂ ಪ್ರಸ್ತಾಪಿಸಿಲ್ಲ. ಇದು ಪ್ರಮೇಯ ೧೧ರಲ್ಲಿ ತಿಳಿಸಿದಂತೆ ಮಾಧ್ಯಮಗಳಲ್ಲಿ ವೃತ್ತಿನಿರತ ಮಹಿಳೆಯರಿಂದ ಸಾಮಾನ್ಯ ಮಹಿಳೆಯರ ಶೋಷಣೆಯನ್ನು ನಿಲ್ಲಿಸಲು ಸಾಧ್ಯವಿದೆ ಎನ್ನುವುದನ್ನು ಪುಷ್ಟೀಕರಿಸುತ್ತದೆ.



ನಕ್ಷೆ ೩

೪.೧೦ ಲೈಂಗಿಕ ಕಿರುಕುಳಕ್ಕೆ ಒಳಗಾದ ಬಗ್ಗೆ

ಲೈಂಗಿಕ ಕಿರುಕುಳ	ಮಹಿಳೆಯರು
ಮಾನಸಿಕವಾಗಿ	೦
ಮಾನಸಿಕ/ ದೈಹಿಕ ಎರಡೂ	೦
ದೈಹಿಕ	೦
ಒಳಗಾಗಿಲ್ಲ	೧೫೪

ಕೋಷ್ಟಕ ೪.೧೦ ಲೈಂಗಿಕ ಕಿರುಕುಳಕ್ಕೆ ಬಲಿಯಾದವರು

ಮೇಲಿನ ಕೋಷ್ಟಕದಲ್ಲಿ ನೀಡಲಾದ ಅಂಕಿ-ಅಂಶಗಳ ಪ್ರಕಾರ ಮಾನಸಿಕವಾಗಿ, ಮಾನಸಿಕ/ದೈಹಿಕ ಎರಡೂ ರೀತಿಯಲ್ಲಿ ಅಥವಾ ದೈಹಿಕವಾಗಿ ಲೈಂಗಿಕ ಕಿರುಕುಳಕ್ಕೆ ಒಳಗಾದ ಬಗ್ಗೆ ಸಮೀಕ್ಷೆಯಲ್ಲಿ ಸಂಪರ್ಕಿಸಲಾದ ಮಾಧ್ಯಮದಲ್ಲಿ ದುಡಿಯುವ ೧೫೪ ಮಂದಿಯೂ ತಿಳಿಸಿಲ್ಲ. ಅವರೆಲ್ಲರೂ ಲೈಂಗಿಕ ಕಿರುಕುಳಕ್ಕೆ ಒಳಗಾಗಿಲ್ಲವೆಂದೇ ಹೇಳಿದ್ದಾರೆ. ಇದು ಪ್ರಮೇಯ ೮ ರಲ್ಲಿ ಹೇಳಿರುವಂತೆ ವೃತ್ತಿಕ್ಷೇತ್ರದಲ್ಲಿ ಲೈಂಗಿಕ ಕಿರುಕುಳಕ್ಕೊಳಗಾದರೂ ಉದ್ಯೋಗದ ಭದ್ರತೆಯ ದೃಷ್ಟಿಯಿಂದ ಮೌನವಹಿಸುತ್ತಿದ್ದಾರೆಂದು ಊಹಿಸಬಹುದಾಗಿದೆ.

೪.೧೧ ಕೆಲಸದ ಪಾಳಿ

ಒಟ್ಟು ಮಹಿಳೆಯರು	ರಾತ್ರಿಪಾಳಿಯಲ್ಲಿ ಕೆಲಸ ನಿರ್ವಹಿಸುವವರು	ರಾತ್ರಿಪಾಳಿಯಲ್ಲಿ ಕೆಲಸ ನಿರ್ವಹಿಸದವರು
೧೫೪	೨೦	೧೩೪

ಕೋಷ್ಟಕ ೪. ೧೧ ರಾತ್ರಿಪಾಳಿಯಲ್ಲಿ ದುಡಿಯುವ ಮಹಿಳೆಯರು

ಮೇಲಿನ ಕೋಷ್ಟಕದಲ್ಲಿ ಸಮೀಕ್ಷೆಯಲ್ಲಿ ಸಂಪರ್ಕಿಸಲಾದ ೧೫೪ ಮಂದಿಯಲ್ಲಿ ಕೇವಲ ೨೦ ಮಂದಿ ಮಾತ್ರ ರಾತ್ರಿಪಾಳಿಯಲ್ಲಿ ಕೆಲಸ ನಿರ್ವಹಿಸುತ್ತಿರುವ ಬಗ್ಗೆ ಮಾಹಿತಿ ನೀಡಿರುತ್ತಾರೆ. ಅಂದರೆ ಕೇವಲ ೧೨.೯೯% ಮಂದಿ ಮಹಿಳೆಯರು ಮಾಧ್ಯಮದಲ್ಲಿ ರಾತ್ರಿಪಾಳಿಯಲ್ಲಿ ದುಡಿಯುತ್ತಿರುವರೆಂದು ಮನಗಾಣಬಹುದು.

೪.೧೨ ಮಾಧ್ಯಮದಲ್ಲಿನ ಭದ್ರತೆ

ಭದ್ರತೆ	ಮಹಿಳೆಯರು
ಉತ್ತಮ	೫೦
ಮಧ್ಯಮ	೧೫
ಏನೇನು ಸಾಲದು	೨೦
ಭದ್ರತೆಯೇ ಇಲ್ಲ	೬೯

ಕೋಷ್ಟಕ ೪.೧೨ ಮಹಿಳೆಯರಿಗಿರುವ ಭದ್ರತೆ

ಮೇಲಿನ ಕೋಷ್ಟಕದಲ್ಲಿ ಸಮೀಕ್ಷೆಯಲ್ಲಿ ಸಂಪರ್ಕಿಸಲಾದ ಮಂದಿಯ ಭದ್ರತೆಯ ಕುರಿತಾಗಿ ವ್ಯಕ್ತಪಡಿಸಿದ ಅಭಿಪ್ರಾಯಗಳಿವೆ. ೩೨.೪೭% ಮಂದಿ ಮಹಿಳೆಯರು ಮಾಧ್ಯಮದಲ್ಲಿ ಉತ್ತಮ ಭದ್ರತೆಯಿದೆಯೆಂದು ಹೇಳಿದರೆ, ೯.೭೪% ಮಂದಿ ಮಹಿಳೆಯರು ಭದ್ರತೆ ಮಧ್ಯಮವೆಂದೂ, ೧೨.೯೯% ಮಂದಿ ಮಹಿಳೆಯರು ಮಾಧ್ಯಮದಲ್ಲಿನ ಭದ್ರತೆ ಏನೇನೂ

ಸಾಲದು ಎಂದಿದ್ದಾರೆ. ಅಲ್ಲದೆ ೪೪.೮೧% ಮಂದಿ ಮಹಿಳೆಯರು ಮಾಧ್ಯಮದಲ್ಲಿ ಭದ್ರತೆಯೇ ಇಲ್ಲ ಎಂದು ಹೇಳಿದ್ದಾರೆ. ಇಲ್ಲಿ ಏನೇನು ಭದ್ರತೆಯಿಲ್ಲ ಎಂದು ತಿಳಿಸಿದ ಮಹಿಳೆಯರ ಪ್ರಮಾಣ ಅತ್ಯಂತ ಹೆಚ್ಚು. ಆದರೂ ಇಂದಿನ ದಿನಗಳಲ್ಲಿ ಹೆಚ್ಚಿನ ಮಹಿಳೆಯರು ಮಾಧ್ಯಮಗಳತ್ತ ಒಲವು ತೋರಿಸುತ್ತಿದ್ದಾರೆ. ಇದು ಪ್ರಮೇಯ ೪ ರಲ್ಲಿ ಹೇಳಿರುವ ಹಾಗೆ ಮಾಧ್ಯಮದಲ್ಲಿ ಭದ್ರತೆಯಿಲ್ಲ ಎನ್ನುವ ಕಾರಣಕ್ಕೆ ಮಾಧ್ಯಮದಲ್ಲಿ ದುಡಿಯುವುದಕ್ಕೆ ಮಹಿಳೆಯರು ಹಿಂಜರಿಯುತ್ತಿಲ್ಲ ಎನ್ನುವುದಕ್ಕೆ ಒತ್ತುನೀಡುತ್ತದೆ.

******

ಅಧ್ಯಾಯ ೫

ಸಾರ ಮತ್ತು ಉಪಸಂಹಾರ

೫.೧ ಸಾರ

೫.೨ ಅಧ್ಯಯನದ ಶೋಧ

೫.೩ ಕೊನೆಯ ಮಾತು

೫.೪ ಸಲಹೆ–ಸೂಚನೆಗಳು

೫.೪.೧ ಮಾಧ್ಯಮಕ್ಕೆ ಮತ್ತು ಮಾಧ್ಯಮದಲ್ಲಿ ದುಡಿಯುವ ಮಹಿಳೆಯರಿಗೆ ಸಲಹೆ ಸೂಚನೆಗಳು

೫.೪.೨ ಸರಕಾರಕ್ಕೆ ಮತ್ತು ಸಮಾಜಕ್ಕೆ ಇರುವ ಸಲಹೆ ಸೂಚನೆಗಳು

ಅಧ್ಯಾಯ ೫

ಸಾರ ಮತ್ತು ಉಪಸಂಹಾರ

೫.೧ ಸಾರ

ನಮ್ಮ ಸಮಾಜದಲ್ಲಿ ಬದಲಾವಣೆಯ ಗಾಳಿ ಬೀಸುತ್ತಿದೆ. ಈ ಸಂದರ್ಭದಲ್ಲಿ ಮಹಿಳೆ ವೃತ್ತಿಪರಳಾಗಿ ಗುರುತಿಸಿಕೊಳ್ಳುವಂತೆ ಮಾನಸಿಕ, ಕೌಟುಂಬಿಕ, ಸಾಂಸ್ಥಿಕ ಹಾಗೂ ಸಮಾಜ ಮಟ್ಟಗಳೆಲ್ಲದರಲ್ಲಿಯೂ ಪುರುಷ ಪಾತ್ರ ಬದಲಾವಣೆಗೊಳ್ಳಬೇಕು. ಮಗನಾಗಿ, ತಂದೆಯಾಗಿ ಗಂಡಸಿನ ಪಾತ್ರದಲ್ಲಿ ಸುಧಾರಣೆ ಮಹಿಳೆಯರನ್ನು ಹೆಚ್ಚು ಸಬಲರನ್ನಾಗಿ ಮಾಡುತ್ತದೆ. ಕುಟುಂಬ ಹಾಗೂ ಸಮಾಜ ಗಂಡು–ಹೆಣ್ಣಿಗೆ ಸಮಾನ ಅವಕಾಶಗಳು ಸಾಮಾನ್ಯ ಜವಾಬ್ದಾರಿಗಳಿವೆ ಎಂಬ ಅಂಶವನ್ನು ಅರಿಯಬೇಕಾಗುತ್ತದೆ.

ಸಮೂಹ ಮಾಧ್ಯಮ ಕ್ಷೇತ್ರದಲ್ಲಿ ಮಹಿಳೆಯರ ಪಾತ್ರ ಮಹತ್ತರವಾದುದು. ಗ್ರಾಮೀಣ ಮಹಿಳೆಯರು ಮಾಧ್ಯಮ ಕ್ಷೇತ್ರದಲ್ಲಿ ಒಲವು ತೋರುತ್ತಿದ್ದಾರೆ. ಮಾತ್ರವಲ್ಲ, ಸಾಧನಾಶೀಲೆಯರಾಗಿ ಮುಂದುವರಿಯುತ್ತಿದ್ದಾರೆ. ಶಿಕ್ಷಣದಲ್ಲೂ ಹೆಚ್ಚಿನ ಆಸಕ್ತಿಯನ್ನು ಬೆಳೆಸಿಕೊಂಡಿರುವ ಮಹಿಳೆಯರು "ಸಮೂಹ ಸಂವಹನ ಮತ್ತು ಪತ್ರಿದೋದ್ಯಮ" ವಿಷಯವನ್ನು ಅಭ್ಯಸಿಸುವುದರಲ್ಲಿ ಯಶಸ್ವಿಯಾಗುತ್ತಿದ್ದಾರೆ.

ಇಂದಿನ ದಿನಗಳಲ್ಲಿ ಮಾಧ್ಯಮ ಕ್ಷೇತ್ರದಲ್ಲಿನ ವಿವಿಧ ಹುದ್ದೆಗಳು ಬಹುಮಂದಿ ಮಹಿಳೆಯರನ್ನು ಆಕರ್ಷಿಸುತ್ತಿದೆ. ಸಂಪಾದಕಿಯಾಗಿ, ಉಪ ಸಂಪಾದಕಿಯಾಗಿ, ವರದಿಗಾರ್ತಿಯಾಗಿ, ಛಾಯಾಗ್ರಾಹಕಿಯಾಗಿ, ನಿರೂಪಕಿಯಾಗಿ, ಉದ್ಘೋಷಕಿಯಾಗಿ, ಕಲಾವಿದೆಯಾಗಿ, ಕಚೇರಿ ಸಹಾಯಕಿಯಾಗಿ, ಕಾರ್ಯಕ್ರಮ ಸಂಯೋಜಕಿಯಾಗಿ... ಹೀಗೆ ವಿವಿಧ ಹುದ್ದೆಗಳನ್ನು ನಿರ್ವಹಿಸಬಲ್ಲ ಸಾಮರ್ಥ್ಯವನ್ನು ಬೆಳೆಸಿಕೊಂಡಿರುವ ಮಹಿಳೆ ಪುರುಷರಷ್ಟೇ ಸಮರ್ಥಳು ಎನ್ನುವುದನ್ನು ಸ್ಪಷ್ಟಪಡಿಸುತ್ತಿದ್ದಾಳೆ.

ಮಹಿಳೆಯರ ಬೌದ್ಧಿಕ ಹಾಗೂ ಮಾಧ್ಯಮ ಕ್ಷೇತ್ರದಲ್ಲಿನ ವೃತ್ತಿ ಸಾಮರ್ಥ್ಯವನ್ನು ಪರಿಗಣಿಸಿದಾಗ ಪುರುಷರಿಗಿಂತಲೂ ಒಂದು ಕೈ ಮೇಲೆನ್ನಬಹುದು. ಪುರುಷರಷ್ಟೇ ಸಮಾನವಾಗಿ ಕಾರ್ಯ ನಿರ್ವಹಿಸುವ ಮಹಿಳೆಯರಿಂದ ದೇಶದ, ಸಮಾಜದ ಸರ್ವತೋಮುಖ

ಬೆಳವಣಿಗೆಯಾಗಲು ಸಾಧ್ಯವಿದೆ. ಮಾಧ್ಯಮ ಕ್ಷೇತ್ರದಲ್ಲಿ ದುಡಿಯುವ ಮಹಿಳೆಯರ ಸ್ಥಿತಿಗತಿಯನ್ನು ಸುಧಾರಿಸುವ ನಿಟ್ಟಿನಲ್ಲಿ ಶ್ರಮಿಸುವ ಜವಾಬ್ದಾರಿ ಮಾಧ್ಯಮ ಹಾಗೂ ಸರಕಾರಕ್ಕಿದ್ದು, ಅಗತ್ಯ ಕ್ರಮಗಳನ್ನು ಕೈಗೊಳ್ಳಬೇಕಾದ ಅವಶ್ಯಕತೆಯಿದೆ.

ಮೊದಲನೆಯ ಅಧ್ಯಾಯದಲ್ಲಿ ಅಧ್ಯಯನದ ಮಹತ್ವ, ವ್ಯಾಪ್ತಿಯನ್ನು ತಿಳಿಸಲಾಗಿದೆ. ಅಲ್ಲದೆ, ಯಾವ ಉದ್ದೇಶಗಳನ್ನು ಮುಂದಿಟ್ಟುಕೊಂಡು ಅಧ್ಯಯನವನ್ನು ಕೈಗೊಳ್ಳಲಾಗಿದೆ, ಅಧ್ಯಯನವು ಏಕೆ ಮಹತ್ವಪೂರ್ಣವಾಗಿದೆ, ವ್ಯಾಪ್ತಿಯಲ್ಲಿ ಯಾವೆಲ್ಲ ಪರಿಕಲ್ಪನೆ ವಿಷಯಗಳನ್ನು ಬಳಸಿಕೊಳ್ಳಲಾಗಿದೆ ಎಂದು ವಿವರಿಸಲಾಗಿದೆ. ಪ್ರಸ್ತುತ ಅಧ್ಯಯನವು ದಕ್ಷಿಣ ಕನ್ನಡ ಜಿಲ್ಲೆಯಲ್ಲಿನ ಮಾಧ್ಯಮಗಳಲ್ಲಿ ದುಡಿಯುವ ಮಹಿಳೆಯರ ಸ್ಥಿತಿಗತಿಯನ್ನು ಅರಿಯುವ ಹಾಗೂ ಅವರ ಅಭಿವೃದ್ಧಿಗಾಗಿನ ಮೂಲೋದ್ದೇಶವನ್ನು ಹೊಂದಿದೆ.

ಎರಡನೆಯ ಅಧ್ಯಾಯದಲ್ಲಿ ಸಮೂಹ ಮಾಧ್ಯಮ, ಅದರ ಗುಣಲಕ್ಷಣಗಳು, ಕಾರ್ಯಗಳು ಹಾಗೂ ಅವುಗಳಿಂದಾಗುವ ಸಾಮಾಜಿಕ ಪರಿವರ್ತನೆಯ ಕುರಿತು ವಿವರಿಸಲಾಗಿದೆ. ಅಲ್ಲದೆ, ಭಾರತದಲ್ಲಿನ ಮಾಧ್ಯಮ ಪ್ರಕಾರಗಳಾದ ಪತ್ರಿಕೆ, ಬಾನುಲಿ, ಟೆಲಿವಿಷನ್, ಸಿನಿಮಾ, ಜನಪದ ಮಾಧ್ಯಮಗಳು, ಅಂತರ್ಜಾಲದ ಕುರಿತಾದ ಮಾಹಿತಿಗಳಿದ್ದು, ಮಾಧ್ಯಮ ಕಾನೂನು, ಪತ್ರಕರ್ತರ ಕರ್ತವ್ಯಗಳು, ಅವರ ಜವಾಬ್ದಾರಿಗಳು, ಪತ್ರಿಕೋದ್ಯಮ ಶಿಕ್ಷಣದ ಕುರಿತಾಗಿ ವಿವರಣೆಯನ್ನೊಳಗೊಂಡಿದೆ.ಅಲ್ಲದೆ ದುಡಿಯುವ ಮಹಿಳೆಯರ ಸ್ಥಿತಿಗತಿ, ಮಹಿಳೆ, ಶಿಕ್ಷಣ, ಸಮಾಜದ ಕುರಿತು ಮಾಧ್ಯಮದಲ್ಲಿ ಮಹಿಳೆ ಹಾಗೂ ಮಾಧ್ಯಮದಲ್ಲಿ ದುಡಿಯುವ ಮಹಿಳೆ ಎದುರಿಸುತ್ತಿರುವ ಸವಾಲುಗಳು ಏನೇನು ಎನ್ನುವುದನ್ನು ತಿಳಿಯಪಡಿಸುತ್ತದೆ.

ಮೂರನೆಯ ಅಧ್ಯಾಯದಲ್ಲಿ ದಕ್ಷಿಣ ಕನ್ನಡದಲ್ಲಿ ಮಾಧ್ಯಮದ ಬೆಳವಣಿಗೆ ಹೇಗಾಯಿತು, ಪ್ರಸ್ತುತ ಕಾರ್ಯಾಚರಿಸುತ್ತಿರುವ ಮಾಧ್ಯಮಗಳಾವುವು ಎನ್ನುವುದನ್ನು ಹಾಗೂ ಧೀಮಂತ ಪತ್ರಕರ್ತರ ಕುರಿತು ವಿವರಿಸಲಾಗಿದೆ. ಅಲ್ಲದೆ, ದಕ್ಷಿಣ ಕನ್ನಡ ಜಿಲ್ಲೆಯ ಮಾಧ್ಯಮಕ್ಕೆ ಮಹಿಳೆಯರು ಯಾವ ರೀತಿಯಲ್ಲಿ ಕೊಡುಗೆಗಳನ್ನು ನೀಡಿದ್ದಾರೆ ಎನ್ನುವುದರ ಮಾಹಿತಿಯನ್ನು ನೀಡಲಾಗಿದೆ.

ನಾಲ್ಕನೆಯ ಅಧ್ಯಾಯದಲ್ಲಿ ದಕ್ಷಿಣ ಕನ್ನಡದಲ್ಲಿನ ವಿವಿಧ ಮಾಧ್ಯಮ ಸಂಸ್ಥೆಗಳಲ್ಲಿ ದುಡಿಯುತ್ತಿರುವ ಮಹಿಳೆಯರಿಂದ ಸಂಗ್ರಹಿಸಿದ ಮಾಹಿತಿಯ ಕುರಿತು ವಿಶ್ಲೇಷಿಸಲಾಗಿದೆ. ಈ ವಿಶ್ಲೇಷಣೆಯು ಅವರ ತೃಪ್ತಿ, ಆಸಕ್ತ ವಿಷಯ, ವೃತ್ತಿ ಸ್ವಾತಂತ್ರ್ಯ, ವೇತನ, ಪದೋನ್ನತಿ, ಕಿರುಕುಳ, ರಾತ್ರಿ ಪಾಳಿಯಲ್ಲಿನ ಕಾರ್ಯ ಹಾಗೂ ಭದ್ರತೆ ಕುರಿತಾದ ವಿಶ್ಲೇಷಣೆಯನ್ನೊಳಗೊಂಡಿದೆ.

ಕೊನೆಯ ಅಧ್ಯಾಯದಲ್ಲಿ ಇಡೀ ಅಧ್ಯಯನದ ಸಾರ, ಶೋಧ, ಕೊನೆಯ ಮಾತು ಮತ್ತು ಕೆಲವು ಸಲಹೆ ಸೂಚನೆಗಳನ್ನು ನೀಡಲಾಗಿದೆ.

೫.೨ ಅಧ್ಯಯನದ ಶೋಧ

ಮಾಧ್ಯಮದಲ್ಲಿ ದುಡಿಯುವ ಮಹಿಳೆಯರ ಬದುಕು ಹೂವಿನ ಸುಪ್ಪತ್ತಿಗೆಯಾಗಿಲ್ಲ. ಇತರ ಕ್ಷೇತ್ರಗಳಲ್ಲಿ ದುಡಿಯುವ ಮಹಿಳೆಯರ ಬದುಕಿಗಿಂತ ತುಂಬ ವಿಭಿನ್ನವಾದುದಾಗಿದೆ ಎನ್ನುವುದು ಅಧ್ಯಯನದಿಂದ ಕಂಡುಕೊಂಡಂತಹ ವಿಚಾರ. ಅವರ ಸ್ಥಿತಿಗತಿಯನ್ನು ಸುಧಾರಿಸಲು ಅವರಿಂದ ಸಾಮಾನ್ಯ ಮಹಿಳೆಯರ ಉನ್ನತಿ ಸಾಧ್ಯವಾಗುವಂತೆ ಮಾಡಲು ಇನ್ನಷ್ಟು ಅಧ್ಯಯನಗಳ ಅವಶ್ಯಕತೆಯಿದೆ, ಮಾಧ್ಯಮದಲ್ಲಿ ದುಡಿಯುವ ಮಹಿಳೆಯರು ಯಾವ ರೀತಿಯ ಸ್ಥಿತಿಯನ್ನು ಎದುರಿಸುತ್ತಿದ್ದಾರೆ, ಅವರಿಗಿರುವ ಕಾರ್ಯಕ್ಷೇತ್ರದಲ್ಲಿನ ಸ್ವಾತಂತ್ರ್ಯ, ಭದ್ರತೆ ಹೇಗಿದೆ ಎನ್ನುವುದು ಗಮನಿಸಬೇಕಾದ ಅಂಶ. ಈ ಅಧ್ಯಯನದಲ್ಲಿ ಮಾಧ್ಯಮದಲ್ಲಿ ದುಡಿಯುವ ಮಹಿಳೆಯರ ಸ್ಥಿತಿಗತಿ ಕುರಿತಾದ ದತ್ತಾಂಶ ವಿಶ್ಲೇಷಣೆಯ ಕೆಲವು ಶೋಧಗಳನ್ನು ಈ ಕೆಳಗೆ ತಿಳಿಸಲಾಗಿದೆ.

- ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಕನ್ನಡ, ಇಂಗ್ಲಿಷ್, ತುಳುಭಾಷೆಯ ದೈನಿಕಗಳು ಸೇರಿದಂತೆ ತುಳು, ಕೊಂಕಣಿ ಭಾಷೆಯ ಹಲವಾರು ನಿಯತ ಕಾಲಿಕಗಳಿವೆ. ಆಕಾಶವಾಣಿ ಸೇರಿದಂತೆ ಜಿಲ್ಲೆಯಲ್ಲಿ ಮೂರು ಎಫ್.ಎಮ್.ಬಾನುಲಿ ಕೇಂದ್ರಗಳು, ದೂರದರ್ಶನ ಕೇಂದ್ರದ ವಿಭಾಗೀಯ ಕಚೇರಿ, ಬೆರಳೆಣಿಕೆಯ ಖಾಸಗಿ ವಾಹಿನಿಗಳು ಹಾಗೂ ವೆಬ್‌ಸೈಟ್ ವಾಹಿನಿಗಳು ಕಾರ್ಯನಿರ್ವಹಿಸುತ್ತಿವೆ.
- ಜಿಲ್ಲೆಯ ಮಾಧ್ಯಮಗಳಲ್ಲಿ ದುಡಿಯುವ ೧೫೪ ಮಂದಿ ಮಹಿಳೆಯರು ಸಮೀಕ್ಷೆಗೊಳಪಟ್ಟಿದ್ದು ಶೇ.೮೩.೧೫ ರಷ್ಟು ಪುರುಷರ ಪ್ರಾಬಲ್ಯತೆಯಿದೆ.

- ಮಹಿಳಾ ಪತ್ರಿಕೆಗಳ ಸಂಪಾದಕತ್ವದ ಜವಾಬ್ದಾರಿಯನ್ನು ಹೊಂದಿರುವ ಮಹಿಳೆಯರ ಸಂಖ್ಯೆ ಹಾಗೂ ಮಹಿಳಾ ಛಾಯಾಗ್ರಾಹಕರ ಸಂಖ್ಯೆ ಕೇವಲ ಬೆರಳೆಣಿಕೆಗೆ ಮೀಸಲಾಗಿದೆ.
- ಸಮೀಕ್ಷೆಗೊಳಪಟ್ಟ ೧೫೪ ಮಂದಿ ಮಹಿಳೆಯರಲ್ಲಿ ಶೇ. ೨೪.೬೮ರಷ್ಟು ಮಹಿಳೆಯರಿಗೆ ಮಾಧ್ಯಮದಲ್ಲಿನ ದುಡಿತ ಅತೃಪ್ತಿ ತಂದಿದೆ.
- ಕೇವಲ ಶೇ. ೫.೧೯ರಷ್ಟು ಮಂದಿ ಮಾತ್ರ ೩ ಲಕ್ಷಕ್ಕಿಂತ ಹೆಚ್ಚಿನ ವಾರ್ಷಿಕ ಆದಾಯವನ್ನು ಹೊಂದಿದ್ದಾರೆ ಹಾಗೂ ೪೫ ಸಾವಿರ ರೂಪಾಯಿಂದ ೭೫ ಸಾವಿರ ರೂಪಾಯಿವರೆಗಿನ ವಾರ್ಷಿಕ ಆದಾಯವನ್ನು ಶೇಕಡ ೫೪.೫೫ ಪಡೆದಿದ್ದಾರೆ.
- ಕೇವಲ ಬಾನುಲಿಯಲ್ಲಿ ದುಡಿಯುವ ಮಹಿಳೆಯರಿಗೆ ಮಾತ್ರ ತಿಂಗಳ ವೇತನ ಸಮಯಕ್ಕೆ ಸರಿಯಾಗಿ ಲಭಿಸುತ್ತಿದೆ.
- ಶೇ.೫೮ ರಷ್ಟು ಮಹಿಳೆಯರಿಗೆ ಮಾಧ್ಯಮ ಕಾರ್ಯಕ್ಷೇತ್ರದಲ್ಲಿರುವ ಸ್ವಾತಂತ್ರ್ಯ ಅತ್ಯಲ್ಪ.
- ಶೇ.೧೦೦ ರಷ್ಟು ಮಹಿಳೆಯರು ಕೌಟುಂಬಿಕ ಒತ್ತಡಕ್ಕೆ ಒಳಗಾಗಿದ್ದಾರೆ.
- ಲೈಂಗಿಕ ಕಿರುಕುಳಕ್ಕೆ ಒಳಗಾದ ಬಗ್ಗೆ ಯಾರು ಪ್ರಸ್ತಾಪಿಸಿಲ್ಲ.
- ಮಾಧ್ಯಮಗಳಲ್ಲಿ ಭದ್ರತೆಯೇ ಇಲ್ಲವೆಂದವರು ಶೇ. ೪೪.೮ ಮಂದಿ.

೫.೩ ಕೊನೆಯ ಮಾತು

ಮಹಿಳೆಯರು ಸ್ವತಃ ಯಾವುದೇ ಕಾರ್ಯಕ್ಕಿಳಿದರೂ ಯಶಸ್ವಿಯಾಗಬಲ್ಲರು. ಪುರುಷ ಪ್ರಧಾನ ವ್ಯವಸ್ಥೆಯಲ್ಲಿ ಪುರುಷ ಚಿಂತನೆಗಳು ರೂಪಿಸಿದ ಎಲ್ಲ ನಿಯಮ, ಕಟ್ಟುಪಾಡು, ಆಚರಣೆಗಳ ಸಂಕೋಲೆಯಲ್ಲಿ ಇಷ್ಟು ಕಾಲವೂ ನರಳಿದ ಮಹಿಳೆಯರಿಗೆ ಹೊಸ ಮಾರ್ಗಗಳು ಗೋಚರಿಸುತ್ತಿವೆ. ಮಹಿಳೆಯರು ಶಿಕ್ಷಣ ಸಂಸ್ಥೆಗಳಲ್ಲಿ ವಿಶ್ವವಿದ್ಯಾನಿಲಯಗಳಲ್ಲಿ ದೊರೆಯುತ್ತಿರುವ 'ಮಾಧ್ಯಮ ಶಿಕ್ಷಣ'ವನ್ನು ಪಡೆದುಕೊಂಡು ಹಳೆಯ ಕಂದಾಚಾರಗಳನ್ನು ಕೊಡಹುತ್ತಾ ಸಾಧನೆಯ ಹಾದಿಯಲ್ಲಿ ಹೊಸ ಹೆಜ್ಜೆಗಳನ್ನಿರಿಸುತ್ತಿದ್ದಾರೆ.

ಈ ಸಂದರ್ಭದಲ್ಲಿ ಮಾಧ್ಯಮದಲ್ಲಿ ದುಡಿಯುವ ಮಹಿಳೆಯರ ಸ್ಥಿತಿಗತಿ ಸುಧಾರಿಸಲು ಕಚೇರಿ ಕೆಲಸದೊಂದಿಗೆ ಕುಟುಂಬ ನಿರ್ವಹಣೆಯ ಜವಾಬ್ದಾರಿಯನ್ನು ಸರಿದೂಗಿಸಲು ಸೂಕ್ತ ಯೋಜನೆಗಳು, ಕಾರ್ಯನೀತಿಗಳು ಜಾರಿಗೊಳ್ಳಬೇಕಾಗಿದೆ. ಮಾಧ್ಯಮದಲ್ಲಿ ದುಡಿಯುವ

ಮಹಿಳೆಯರಿಗೂ ಪುರುಷ ಸಮಾನ ವೇತನ, ಅವಕಾಶ, ಸೌಲಭ್ಯಗಳು ಸಿಗುವಂತಾಗಬೇಕು. ಅಲ್ಲದೆ, ಕ್ರಿಯಾಶೀಲತೆಯೆನ್ನುವುದು ಸಾಧನೆಯ ಪಥದಲ್ಲಿ ಸಾಗುವಂತೆ ಮಾಡಬಲ್ಲುದು. ಹೀಗಿರುವಾಗ ಅದಕ್ಕೆ ತಕ್ಕುದಾದ ಅವಕಾಶ, ಸ್ವಾತಂತ್ರ್ಯವನ್ನು ನೀಡಿದಲ್ಲಿ ಮಾಧ್ಯಮದಲ್ಲಿ ದುಡಿಯುವ ಮಹಿಳೆಯರು ಸರ್ವತೋಮುಖ ಅಭಿವೃದ್ಧಿಗೆ ಕಾರಣರಾಗುವುದರಲ್ಲಿ ಎರಡು ಮಾತಿಲ್ಲ.

ಕುಟುಂಬದ ಸದಸ್ಯರು, ಸಮಾಜ, ಸರಕಾರ ಮಾಧ್ಯಮದಲ್ಲಿ ದುಡಿಯುವ ಮಹಿಳೆಯರ ಪಾತ್ರವನ್ನು ಅರಿತುಕೊಂಡು ಪೂರ್ಣ ಸಹಕಾರ, ಪ್ರೋತ್ಸಾಹ ನೀಡಿದಲ್ಲಿ ಅವರು ನಿಂತ ನೀರಿನಂತಾಗದೆ ಹರಿಯುವ ನೀರಾಗಿ ಎಲ್ಲ ಕ್ಷೇತ್ರಗಳಲ್ಲೂ ಪ್ರಗತಿಪರ ಬದಲಾವಣೆಗೆ ಕಾರಣರಾಗಬಲ್ಲರು, ದೇಶದ ಅಭಿವೃದ್ಧಿಗೆ ಮುನ್ನುಡಿಯಾಗಬಲ್ಲರು. ಮೋಸ, ವಂಚನೆ, ಅಪ್ರಾಮಾಣಿಕತೆಯ ಬಿರುಗಾಳಿಗೆ ಒಳಗಾಗಿರುವ ಪ್ರಜಾಪ್ರಭುತ್ವ ವ್ಯವಸ್ಥೆಯ ನಾಲ್ಕನೆಯ ಅಂಗವೆನಿಸಿದ ಮಾಧ್ಯಮರಂಗವನ್ನು ತಮ್ಮ ನಿಷ್ಠೆ, ಪ್ರಾಮಾಣಿಕತೆಯ ಮೂಲಕ ಮಹಿಳೆಯರು ಮುನ್ನಡೆಸಬಲ್ಲರು.

೫.೪ ಸಲಹೆ–ಸೂಚನೆಗಳು

ಜಾಗತೀಕರಣದ ಪರಿಣಾಮವಾಗಿ ಮಹಿಳೆಯರು ವೇಗದ ಜಗತ್ತಿನಲ್ಲಿ ಸ್ಪರ್ಧಿಸಬೇಕಾಗಿದೆ. ಅಸ್ತಿತ್ವವನ್ನು ಉಳಿಸಿಕೊಳ್ಳಬೇಕಾದರೆ ಪ್ರತಿಕ್ಷಣವೂ ಮಹಿಳೆಯರು ಮುನ್ನುಗ್ಗಬೇಕಾದುದು ಅನಿವಾರ್ಯ. ಇದು ಎಲ್ಲ ಕ್ಷೇತ್ರಗಳಂತೆ ಮಾಧ್ಯಮ ಕ್ಷೇತ್ರಕ್ಕೂ ಅನ್ವಯಿಸುತ್ತದೆ. ಸಮೂಹ ಮಾಧ್ಯಮದ ವಿವಿಧ ಪ್ರಕಾರಗಳಲ್ಲಿ ಪ್ರಮುಖವಾಗಿ ಮದ್ರಣ, ದೃಶ್ಯ, ಬಾನುಲಿಯಲ್ಲಿ ಸೇವೆ ಸಲ್ಲಿಸುತ್ತಿರುವ ಎಲ್ಲರೂ ಪರಿಸರ, ಕ್ರೀಡೆ, ಮಹಿಳೆ, ವಾಣಿಜ್ಯ, ರಾಜಕೀಯ, ಸಾಂಸ್ಕೃತಿಕ ಹೀಗೆ ವಿಭಿನ್ನ ರಂಗಗಳಲ್ಲಿ ಆಸಕ್ತಿಯನ್ನು ಬೆಳೆಸಿಕೊಳ್ಳಬೇಕಾಗಿದೆ. ಮಾತ್ರವಲ್ಲ, ಭಾಷಾ ಜ್ಞಾನವನ್ನು ಹೆಚ್ಚಿಸಿಕೊಳ್ಳಬೇಕಾದುದು ಅತ್ಯಗತ್ಯ. ಕೌಟುಂಬಿಕ ಸ್ಥಿತಿಗತಿಯನ್ನರಿತುಕೊಂಡು ಸೇವೆಯಲ್ಲಿ ಮುಂದುವರಿದಲ್ಲಿ ಯಾವುದೇ ತೊಂದರೆ ಬಂದರೂ ಧೈರ್ಯದಿಂದ ಎದುರಿಸುವ ಶಕ್ತಿ ಮಹಿಳೆಯರಿಗಿದೆ. ಸಹೋದ್ಯೋಗಿಗಳ ಅಥವಾ ಮೇಲಧಿಕಾರಿಗಳಿಂದ ಲೈಂಗಿಕ ಕಿರುಕುಳಕ್ಕೆ ಒಳಗಾದಲ್ಲಿ ಧೈರ್ಯವಾಗಿ ಪ್ರತಿಭಟಿಸಿ ಸೇವೆಯಲ್ಲಿ ಮುಂದುವರಿಯುವ ಸಾಮರ್ಥ್ಯವನ್ನು ಮಹಿಳೆಯರು ಬೆಳೆಸಿಕೊಳ್ಳಬೇಕಾಗಿದೆ.

ಮಾಧ್ಯಮದಲ್ಲಿ ದುಡಿಯುವ ಮಹಿಳೆಯರು ತಮ್ಮ ಉಡುಪುಗಳತ್ತ ಗಮನ ಕೊಡಬೇಕಾಗಿದೆ. ಲೈಂಗಿಕ ಪ್ರಚೋದನೆಗೆ ಆಸ್ಪದ ನೀಡುವಂತಿರುವ ಮೈ ಕಾಣುವಂತಿರುವ ಅಥವಾ ಬಿಗಿ ಉಡುಪುಗಳನ್ನು ಧರಿಸದೇ ಇರುವುದೇ ಒಳಿತು. ಆದುದರಿಂದ ಅತಿ ಸರಳವೂ ಅಲ್ಲದ ಸಭ್ಯತೆಯನ್ನು ಮೀರದ ಉಡುಪುಗಳಿರಲಿ.

ಮಾಧ್ಯಮದಲ್ಲಿ ದುಡಿಯುವ ಓರ್ವ ಮಹಿಳೆಯಾಗಿ ಇನ್ನುಳಿದ ಮಹಿಳೆಯರಿಗೆ ಸಹಾಯ, ಸಲಹೆ, ಮಾರ್ಗದರ್ಶನ ನೀಡುತ್ತ ಬಂದಲ್ಲಿ ಮಹಿಳೆಯರ ಒಗ್ಗಟ್ಟನ್ನು ಯಾರಿಗೂ ಮುರಿಯಲಾಗದು. ಮಹಿಳೆಯರೆಲ್ಲರ ಸ್ಥಿತಿಗತಿ ಸುಧಾರಿಸಬಹುದು. ಪುರುಷ ಸಹೋದ್ಯೋಗಿಗಳೊಂದಿಗೆ ಅವಶ್ಯಕತೆಗೆ ತಕ್ಕಂತೆ ಸಭ್ಯ ರೀತಿಯಲ್ಲಿ ವರ್ತಿಸುವುದರಿಂದ ಹೆಚ್ಚಿನ ಪ್ರಯೋಜನವಾದೀತು.

೫.೪.೧ ಮಾಧ್ಯಮಕ್ಕೆ ಮತ್ತು ಮಾಧ್ಯಮದಲ್ಲಿ ದುಡಿಯುವ ಮಹಿಳೆಯರಿಗೆ ಸಲಹೆ ಸೂಚನೆಗಳು

- ಮಹಿಳೆಯರಿಗೆ ಸೂಕ್ತ ಭದ್ರತೆ ಹಾಗೂ ರಕ್ಷಣೆ ನೀಡುವುದು.
- ಮಾಧ್ಯಮದಲ್ಲಿ ದುಡಿಯುವ ಮಹಿಳೆಯರಿಗೆ ಲೈಂಗಿಕ/ಮಾನಸಿಕ/ದೈಹಿಕ ಕಿರುಕುಳ ನೀಡಿದವರ ಮೇಲೆ ಸೂಕ್ತ ಕ್ರಮ ಕೈಗೊಳ್ಳುವುದು.
- ರಾತ್ರಿ ಪಾಳಿಯಲ್ಲಿ ದುಡಿಯಲು ಮಹಿಳೆಯರಿಗೆ ಅವಕಾಶ ನೀಡದಿರುವಲ್ಲಿಯೂ ಗಮನ ಹರಿಸುವುದು.
- ಪುರುಷರಿಗಿದ್ದಂತೆ ಸಮಾನ ವೇತನವನ್ನು ನೀಡುವುದು.
- ಆಧುನಿಕವಾದ ಮೈ ಕಾಣುವಂತಿರುವ ಉಡುಪುಗಳನ್ನು ಧರಿಸಲೇ ಬೇಕೆಂದು ಒತ್ತಡ ನೀಡದಿರುವುದು.
- ಕೇವಲ ಅಂದಚೆಂದಕ್ಕೆ ಮಾತ್ರ ಆದ್ಯತೆ ನೀಡದೆ ಮಹಿಳೆಯರ ಸಾಮರ್ಥ್ಯಕ್ಕೆ ಹೆಚ್ಚು ಬೆಲೆ ಕೊಡುವುದು.
- ಭಡ್ತಿ ನೀಡುವುದಕ್ಕೆ ತಾರತಮ್ಯ ಮಾಡದಿರುವುದು.
- ಆಸಕ್ತ ಮಹಿಳೆಯರಿಗೆ ಉಚಿತ ತರಬೇತಿ ನೀಡುವುದು.

- ಗರ್ಭಧಾರಣೆ, ಹೆರಿಗೆ ಸಮಯದಲ್ಲಿ ಸೇವೆಯಿಂದ ಕೈಬಿಡದೆ ರಜಾ ಸೌಲಭ್ಯ ಒದಗಿಸುವುದು.
- ಶೌಚಾಲಯ, ಗ್ರೀನ್ ರೂಂಗಳಲ್ಲಿ ಗುಪ್ತ ಕ್ಯಾಮರಗಳನ್ನು ಅಳವಡಿಸದಂತೆ ಭದ್ರತಾ ವ್ಯವಸ್ಥೆಯನ್ನು ಬಲಪಡಿಸುವುದು.
- ಅವಶ್ಯಕ ಶಿಕ್ಷಣ ಮುಂದುವರಿಸಲು ಬಯಸುವ ಮಹಿಳೆಯರಿಗೆ ಸೌಲಭ್ಯ ಕಲ್ಪಿಸುವುದು.
- ಮಹಿಳೆಯರಿಗೂ ಪಂಥಾಹ್ವಾನ ನೀಡುವ ಕೆಲಸಗಳನ್ನು ನೀಡುವುದು.
- ಮಹಿಳೆಯರು ಸಹೋದ್ಯೋಗಿಗಳೊಂದಿಗೆ ಸಭ್ಯ ರೀತಿಯಲ್ಲಿ ವರ್ತಿಸುವುದು.
- ದೈಹಿಕವಾಗಿ/ಮಾನಸಿಕವಾಗಿ/ಲೈಂಗಿಕವಾಗಿ ಕಿರುಕುಳಕ್ಕೆ ಒಳಗಾದಾಗ ಕಾನೂನಿನ ನೆರವು ಪಡೆಯುವ ತಿಳುವಳಿಕೆ ಬೆಳೆಸಿಕೊಂಡಿರುವುದು.
- ಸಾಮಾಜಿಕ, ರಾಜಕೀಯ ಭ್ರಷ್ಟಾಚಾರ, ಪಕ್ಷಪಾತ ಧೋರಣೆಗಳಿಂದ ತನ್ನ ಅಸ್ತಿತ್ವವನ್ನೇ ಕಳೆದುಕೊಳ್ಳುವ ಸ್ಥಿತಿಯಲ್ಲಿರುವ ಮಾಧ್ಯಮಕ್ಕೆ ಮಹಿಳೆಯರು ತಮ್ಮ ಕಾಣಿಕೆಗಳನ್ನು ನೀಡುವುದು.
- ಸಮಾಜದ ಜನರೊಡನೆ ಸಂಪರ್ಕದಲ್ಲಿರಬೇಕಾದ ಸಂದರ್ಭದಲ್ಲಿ ಮಹಿಳೆಯರು ತಮ್ಮ ಸುರಕ್ಷತೆಗೂ ಹೆಚ್ಚಿನ ಪ್ರಾಶಸ್ತ್ಯ ಕೊಡುವುದು.

೫.೪.೨ ಸರಕಾರಕ್ಕೆ ಮತ್ತು ಸಮಾಜಕ್ಕೆ ಇರುವ ಸಲಹೆ-ಸೂಚನೆಗಳು

- ಕುಲದೀಪ್ ನಯ್ಯರ್ ನೇತೃತ್ವದ ಸಮಿತಿಯು ಕೇಂದ್ರ ಸರಕಾರಕ್ಕೆ ಸಲ್ಲಿಸಿದ ವರದಿಯಲ್ಲಿ ಪತ್ರಕರ್ತರ ಸ್ಥಿತಿಗತಿ ಮತ್ತು ನಿವೃತ್ತಿ ವೇತನದ ಕುರಿತು ಪ್ರಸ್ತಾಪಿಸಲ್ಪಟ್ಟಿದ್ದು, ಮಾಧ್ಯಮದಲ್ಲಿ ದುಡಿಯುವ ಎಲ್ಲ ಮಹಿಳೆಯರಿಗೂ ಈ ಸೌಲಭ್ಯ ವಿಶೇಷಗಳು ಅನ್ವಯಿಸಬೇಕು.
- ಸರಕಾರವು ಮಾಧ್ಯಮದ ಮಹಿಳೆಯರ ಕುರಿತು ತನ್ನದೇ ಆದ ವಿಶೇಷ ಪ್ಯಾಕೇಜ್ ರೂಪಿಸಬೇಕು ಮತ್ತು ಇದರಲ್ಲಿ ಕನಿಷ್ಠ ಬೀಡಿ ಕಟ್ಟುವವರಿಗೆ ಲಭಿಸುವಂತಹ ಸೌಲಭ್ಯಗಳಾದರೂ ಸಿಗುವಂತಿರಬೇಕು.
- ಪತ್ರಿಕಾ ಮತ್ತು ದೂರದರ್ಶನದ ವರದಿಗಾರ್ತಿಯರಿಗೆ ರಕ್ಷಣಾ ವ್ಯವಸ್ಥೆಯನ್ನು ಕಲ್ಪಿಸುವುದು ಮತ್ತು ವಿಶೇಷವಾದ ವಿಮಾ ಸೌಲಭ್ಯವನ್ನು ರೂಪಿಸಿ ಶರತ್ತು ಬದ್ಧವಾಗಿ ಸರಕಾರವೇ ಅದನ್ನು ಪೂರೈಸುವುದು.

- ಮಹಿಳೆಯರಿಗಾಗಿಯೇ ಸರಕಾರಿ ನಿಯಂತ್ರಿತವಾದ ಮಾಧ್ಯಮ ಶಿಕ್ಷಣಾಲಯಗಳನ್ನು ಮತ್ತು ಸೌಲಭ್ಯಗಳನ್ನು ವ್ಯವಸ್ಥೆಗೊಳಿಸುವುದು.
- ಬೃಹತ್ ನಗರಗಳಲ್ಲಿ ಮಾಧ್ಯಮದ ಮಹಿಳೆಯರು ಒಂದೇ ಕಡೆ ನೆಲೆ ನಿಲ್ಲುವಂತೆ ಉಚಿತ ವಸತಿ ನಿಲಯದ ಸೌಲಭ್ಯ ನೀಡುವುದು.
- ಈಗಾಗಲೇ ಪತ್ರಿಕೋದ್ಯಮಿಗಳ ಪರವಾಗಿ ಕೇಂದ್ರ ಮತ್ತು ರಾಜ್ಯಾಡಳಿತಕ್ಕೆ ಸಲ್ಲಿಸಲಾದ ಎರಡು ಆಯೋಗಗಳ ವರದಿಯಲ್ಲಿ ಮಹಿಳೆಯರ ಪರವಾದ ಅಂಶಗಳನ್ನು ಪರಿಗಣಿಸುವುದು.
- ಮಾಧ್ಯಮದಲ್ಲಿ ದುಡಿಯುವ ಮಹಿಳೆಯರ ಬದುಕಿನ ಸ್ಥಿತಿಗತಿಯನ್ನು ಸುಧಾರಣೆಗೊಳಿಸಲು ವಿಶೇಷ ಸಮಿತಿ ರೂಪಿಸಿ ಸೂಕ್ತ ಯೋಜನೆಗಳನ್ನು ಜಾರಿಗೆ ತರುವುದು.
- ಮಾಧ್ಯಮಗಳಲ್ಲಿ ನೆರವಾಗುವಂತೆ ತಾಂತ್ರಿಕ ಶಿಕ್ಷಣವನ್ನು ಮಹಿಳೆಯರಿಗೆ ಒದಗಿಸುವುದು.
- ಮಹಿಳೆಯರಿಗೆ ಮಾಧ್ಯಮ ಸಂಸ್ಥೆಗಳು ನೀಡುತ್ತಿರುವ ಮಾಸಿಕ ವೇತನ ಸರಿಯಾಗಿ ಲಭಿಸುತ್ತಿದೆಯೇ ಎನ್ನುವುದನ್ನು ಪರೀಕ್ಷಿಸಿ ತಪ್ಪಿತಸ್ಥ ಮಾಧ್ಯಮ ಸಂಸ್ಥೆಯ ವಿರುದ್ಧ ಸೂಕ್ತ ಕ್ರಮ ಕೈಗೊಳ್ಳುವುದು.
- ಕಿರುಕುಳಕ್ಕೊಳಗಾಗುವ ಮಾಧ್ಯಮದಲ್ಲಿ ದುಡಿಯುವ ಮಹಿಳೆಯರ ರಕ್ಷಣೆಗೆ ಕಟಿಬದ್ಧವಾಗುವುದು.
- ಮಾಧ್ಯಮದ ಮಹಿಳೆಯರ ಅಭಿವ್ಯಕ್ತಿ ಸ್ವಾತಂತ್ರ್ಯಕ್ಕೆ ಅವಕಾಶ ನೀಡುವುದು.
- ಮಾಧ್ಯಮದಲ್ಲಿ ದುಡಿಯುವ ಮಹಿಳೆಯರನ್ನು ಗುರುತಿಸಿ ಪ್ರೋತ್ಸಾಹಿಸುವುದು.
- ಮಾಧ್ಯಮದಲ್ಲಿ ದುಡಿಯುವ ಮಹಿಳೆಯರು ಅವ್ಯವಸ್ಥೆಯ ವಿರುದ್ಧ ಪ್ರತಿಭಟಿಸಿದ ಸಂದರ್ಭದಲ್ಲಿ ಬರುವಂತಹ ಬೆದರಿಕೆಗಳಿದ್ದಾಗ ಸಾಮಾಜಿಕ ಸಂಘಟನೆಗಳು ಬೆಂಬಲಕ್ಕೆ ನಿಲ್ಲುವುದು.
- ಸಮಾಜ ಮತ್ತು ಮಾಧ್ಯಮ ಒಂದಕ್ಕೊಂದು ಪೂರಕವಾಗಿರುವ ಅಂಶಗಳು. ಮಾಧ್ಯಮದ ಮಹಿಳೆಯರು ಸಮಾಜದ ಅಭಿವೃದ್ಧಿಗಾಗಿ ಮಾಡುವ ಎಲ್ಲಾ ಕೆಲಸಗಳಿಗೆ ಪ್ರತಿಯಾಗಿ ಸಮಾಜವೂ ಸ್ಪಂದಿಸುವುದು.


- ಮಾಧ್ಯಮದಲ್ಲಿ ದುಡಿಯುವ ಎಷ್ಟೋ ಮಹಿಳೆಯರು ತಮ್ಮ ಸಮಸ್ಯೆಗಳನ್ನು ಮುಚ್ಚಿಡುತ್ತಾರೆ. ಈ ಸಮಸ್ಯೆಗಳ ನಿವಾರಣೆಗೆ ಸಮಾಜ ಸಹಕರಿಸುವುದು.
- ಮಾಧ್ಯಮದ ಮಹಿಳೆಯರನ್ನು ಸಭ್ಯ ರೀತಿಯಲ್ಲಿ ನೋಡುವುದು.

******

ಅನುಬಂಧ –೧

ಕರ್ನಾಟಕ






ದಕ್ಷಿಣ ಕನ್ನಡ

ಅನುಬಂಧ –೨

ದಕ್ಷಿಣ ಕನ್ನಡ



ಅನುಬಂಧ –೩

ಮಾಧ್ಯಮದಲ್ಲಿ ದುಡಿಯುವ ಮಹಿಳೆ- ದ.ಕ.ಜಿಲ್ಲೆಯಲ್ಲಿ ಒಂದು ಅಧ್ಯಯನ

ಪ್ರಶ್ನಾವಳಿ

೧. ನಿಮ್ಮ ಹೆಸರು :

೨. ನೀವು ಯಾವ ಪ್ರದೇಶಕ್ಕ ಸೇರಿದವರು? : ಗ್ರಾಮೀಣ ☐ ನಗರ ☐

೩. ನಿಮ್ಮ ವಯಸ್ಸು

೧೮ ರಿಂದ ೨೫ ವರ್ಷ ☐ ೨೫ ರಿಂದ ೩೫ ವರ್ಷ ☐

೩೫ ರಿಂದ ೪೫ ವರ್ಷ ☐ ೪೫ ರಿಂದ ಮೇಲ್ಪಟ್ಟು ☐

೪. ವಿದ್ಯಾಭ್ಯಾಸ : ಪದವಿಪೂರ್ವ ☐ ಕಂಪೂಟರ್‌ಜ್ಞಾನ ☐

ಪದವಿ ☐ ತಾಂತ್ರಿಕ ☐ ಪತ್ರಿಕೋದ್ಯಮ/ಸ್ನಾತಕೋತ್ತರ ಪದವಿ ☐

ಡಿಪ್ಲೋಮಾ ☐

೫. ವಾರ್ಷಿಕ ಆದಾಯ

೫೭ ಸಾವಿರದಿಂದ ೧.೫ ಲಕ್ಷದವರೆಗೆ ☐ ೪೫ ಸಾವಿರದಿಂದ ೭೫ ಸಾವಿರದವರೆಗೆ ☐

೩ ಲಕ್ಷದಿಂದ ಮೇಲ್ಪಟ್ಟು ☐ ೧.೫ ಲಕ್ಷದಿಂದ ಮೇಲ್ಪಟ್ಟು ☐

೬. ವೈವಾಹಿಕ ಸ್ಥಿತಿಗತಿ

ವಿವಾಹಿತ ☐ ಅವಿವಾಹಿತ ☐ ಇತರ ☐

೭. ನಿಮಗೆ ಸ್ವಂತ ಮನೆ/ವಾಹನ ಇದೆಯೇ?

ಎರಡೂ ಇದೆ ☐ ಎರಡೂ ಇಲ್ಲ ☐

ಮನೆ ಮಾತ್ರ ಇದೆ ☐ ವಾಹನ ಮಾತ್ರ ಇದೆ ☐

೮. ನಿಮ್ಮ ವೇತನವನ್ನು ಮನೆಯವರು ಎಷ್ಟರ ಮಟ್ಟಿಗೆ ಅವಲಂಬಿಸಿದ್ದಾರೆ?

೦% ☐ ೫೦% ☐ ೭೫% ☐ ೧೦೦% ☐

೯. ನಿಮ್ಮ ಸಂಬಳದ ಖರ್ಚಿನ ಉದ್ದೇಶ:

ಉಳಿತಾಯ ☐ ಮನೆ ಖರ್ಚು ☐

ವಸ್ತ್ರ/ಆಭರಣ ಖರೀದಿ ☐ ಸಾಲ ತೀರಿಸಲು ☐

೧೦.ನಿಮ್ಮ ಸಂಬಳದ ಖರ್ಚಿನ ನಿಯಂತ್ರಣ ಯಾರ ಕೈಯಲ್ಲಿದೆ ?

ನನ್ನ ☐ ಗಂಡನ ☐ ಪಾಲಕರ ☐

೧೧. ಅ.ನೀವು ಕೆಲಸ ಮಾಡುತ್ತಿರುವ ಮಾಧ್ಯಮ?

ಮುದ್ರಣ ☐ ದೃಶ್ಯ ☐ ಬಾನುಲಿ ☐ ಜನಪದ ☐

ಇತರ ☐

ಆ. ಸಂಸ್ಥೆಯ ಹೆಸರು:

ಇ. ಎಷ್ಟುವರ್ಷಗಳಿಂದ? ☐

೧೨. ನಿಮಗೆ ಮಾಧ್ಯಮದಲ್ಲಿ ಸೇವೆ ಸಲ್ಲಿಸಲು ಆಸಕ್ತಿ ಮೂಡಿದ ಬಗೆ?

ಸ್ವಯಂ ಪ್ರೇರಣೆ ☐ ಮನೆಯವರ ಒತ್ತಡ ☐ ಸ್ನೇಹಿತರ ಪ್ರೇರಣೆ ☐

ಆಕಸ್ಮಿಕವಾಗಿ ☐ ಪ್ರತಿಷ್ಠೆಗಾಗಿ ☐ ಬೇರೆ ದಾರಿ ಇಲ್ಲದೆ ☐

೧೩. ನೀವು ಮಾಧ್ಯಮದ ಯಾವ ಕ್ಷೇತ್ರದಲ್ಲಿ ಕೆಲಸ ಮಾಡುತ್ತಿದ್ದೀರಿ?

ಸಂಪಾದಕೀಯ ☐ ವರದಿಗಾರಿಕೆ ☐

ಉಪಸಂಪಾದಕೀಯ ☐ ಛಾಯಾಗ್ರಹಣ ☐

ನಿರೂಪಕಿ/ಉದ್ಘೋಷಕಿಯಾಗಿ ☐ ಕಾರ್ಯಕ್ರಮ ಸಂಯೋಜಕಿಯಾಗಿ ☐

ಕಲಾವಿದೆಯಾಗಿ ☐ ಕಛೇರಿ ಸಹಾಯಕಿಯಾಗಿ ☐

೧೪. ನೀವು ಸೇವೆ ಸಲ್ಲಿಸಿದ ಕ್ಷೇತ್ರ ನಿಮಗೆ ತೃಪ್ತಿ ನೀಡಿದೆಯೇ?

ಉನ್ನತಮಟ್ಟದಲ್ಲಿ ನೀಡಿಲ್ಲ ☐ ಸಮಾಧಾನವಿಲ್ಲ ☐ ಸಮಾಧಾನವಿದೆ ☐

೧೫. ಮಾಧ್ಯಮದಲ್ಲಿ ನಿಮ್ಮ ಆಸಕ್ತಿಯ ವಿಷಯ ಯಾವುದು?

ಪರಿಸರ ☐ ಕ್ರೀಡೆ ☐ ಮಹಿಳೆ ☐ ಇತರ ☐

ವಾಣಿಜ್ಯ ☐ ರಾಜಕೀಯ ☐ ಸಾಂಸ್ಕೃತಿಕ ☐

೧೬. ನಿಮ್ಮ ಕ್ರಿಯಾಶೀಲತೆಗೆ ಅವಕಾಶವಿದೆಯೇ?

ಇದೆ ☐ ಸ್ವಲ್ಪ ಮಟ್ಟಿಗೆ ☐ ಇಲ್ಲ ☐

೧೭. ನಿಮ್ಮ ಭಾಷಾ ಪರಿಜ್ಞಾನ

	ಓದಲು	**ಬರೆಯಲು**	**ಮಾತನಾಡಲು**
ಕನ್ನಡ	☐	☐	☐
ತುಳು	☐	☐	☐
ಇಂಗ್ಲೀಷ್	☐	☐	☐
ಹಿಂದಿ	☐	☐	☐
ಕೊಂಕಣಿ	☐	☐	☐
ಉರ್ದು	☐	☐	☐
ಮಲಯಾಳಂ	☐	☐	☐

೧೮. ನಿಮ್ಮ ಕಾರ್ಯಕ್ಷೇತ್ರದಲ್ಲಿ ನಿಮಗೆ ಸ್ವಾತಂತ್ರ್ಯ ಇದೆಯೇ?

ಸಂಪೂರ್ಣವಾಗಿದೆ ☐ ಅತ್ಯಲ್ಪ ☐ ಸ್ವಾತಂತ್ರ್ಯವಿಲ್ಲ ☐

೧೯. ನಿಮ್ಮ ಹಾಗೂ ಪುರುಷ ಸಹೋದ್ಯೋಗಿಗಳ ನಡುವಿನ ಸಂಬಂಧ ಹೇಗಿದೆ?

ಉತ್ತಮ ☐ ಸಮಾಧಾನಕರ ☐ ಅತೃಪ್ತಿಕರ ☐

೨೦. ತಿಂಗಳ ವೇತನ ಸಮಯಕ್ಕೆ ಸರಿಯಾಗಿ ಸಿಗುತ್ತದೆಯೇ?

ಹೌದು ☐ ಇಲ್ಲ ☐

೨೧. ನಿಮ್ಮ ಸಂಸ್ಥೆಯಲ್ಲಿ ಪದೋನ್ನತಿ ನೀಡುವಲ್ಲಿ ಮಹಿಳೆ ಮತ್ತು ಪುರುಷರೆಂಬ ತಾರತಮ್ಯ ಮಾಡುತ್ತಾರೆಯೇ?

ಹೌದು ☐ ಇಲ್ಲ ☐ ಕೆಲವು ಸಂದರ್ಭದಲ್ಲಿ ☐

೨೨. ಅ. ನಿಮ್ಮ ವೃತ್ತಿಗೆ ನಿಮ್ಮ ಕುಟುಂಬದವರ ಸಹಕಾರ ಹೇಗಿದೆ?

ಪ್ರೋತ್ಸಾಹದಾಯಕ ☐ ತೃಪ್ತಿಕರ ☐ ಸಹಕಾರವೇ ಇಲ್ಲ ☐

ಆ. ಕೌಟುಂಬಿಕ ಒತ್ತಡ ನಿಮ್ಮವೃತ್ತಿಗೆ ಕಿರಿಕಿರಿ ಮಾಡುವುದೇ?

ಹೌದು ☐ ಒಮ್ಮೊಮ್ಮೆ ☐

೨೩. ಸಮಾಜದಲ್ಲಿ ಮಾಧ್ಯಮದಲ್ಲಿ ದುಡಿಯುವ ಮಹಿಳೆಯರಿಗೆ ಇರುವ ಸ್ಥಾನಮಾನವೇನು?

ಗೌರವಯುತ ☐ ಸಾಮಾನ್ಯ ☐

ಅಭಿಮಾನದಿಂದ ಕಾಣುತ್ತಾರೆ ☐ ಸಂಶಯದೃಷ್ಟಿಯಿಂದ ಕಾಣುತ್ತಾರೆ ☐

೨೪. ಮಾಧ್ಯಮಗಳಲ್ಲಿ ದುಡಿಯುವ ಮಹಿಳೆಯರಿಂದ ಸಾಮಾನ್ಯ ಮಹಿಳೆಯರ ಸ್ಥಾನಮಾನ, ಸಾಮಾಜಿಕ ಉನ್ನತಿ ಸಾಧ್ಯವೇ?

ಸಾಧ್ಯವಿದೆ ☐ ಸಾಧ್ಯವಿಲ್ಲ ☐ ಸ್ವಲ್ಪಮಟ್ಟಿಗೆ ☐

೨೫. ಅ.ನೀವು ಸಹೋದ್ಯೋಗಿಗಳಿಂದ/ಮೇಲಧಿಕಾರಿಗಳಿಂದ ಲೈಂಗಿಕ ಕಿರುಕುಳಕ್ಕೆ ಒಳಗಾಗಿದ್ದೀರಾ?

ಮಾನಸಿಕವಾಗಿ ☐ ಮಾನಸಿಕ/ದೈಹಿಕ ಎರಡೂ ರೀತಿಯಲ್ಲಿ ☐

ದೈಹಿಕವಾಗಿ ☐ ಇಲ್ಲ ☐

ಆ. ತಮ್ಮ ಉಡುಪಿನ ಶೈಲಿ ಯಾವ ರೀತಿಯದು?

ಅತೀಸರಳ ☐ ಸರಳ ☐ ನೂತನ ಶೈಲಿಯದು ☐

೨೬. ಅ. ನೀವು ದುಡಿಯುತ್ತಿರುವ ಕ್ಷೇತ್ರದಲ್ಲಿ ನಿಮ್ಮ ಪರಿಶ್ರಮಕ್ಕೆ ಮನ್ನಣೆ ದೊರೆಯುತ್ತಿದೆಯೇ?

ಹೌದು ☐ ಇಲ್ಲ ☐ ಕೆಲಸಂದರ್ಭದಲ್ಲಿ ☐

ಆ. ಬೇರೆ ವೃತ್ತಿಗೆ ಸೇರುವ ಆಸಕ್ತಿ ಇದೆಯೇ?

ಹೌದು ☐ ಇಲ್ಲ ☐

೨೭. ಅ. ಯಾವ ಸಹೋದ್ಯೋಗಿಗಳಿಂದ ನಿಮಗೆ ಹೆಚ್ಚು ಸಹಕಾರ ದೊರೆಯುತ್ತದೆ?

ಮಹಿಳೆಯರಿಂದ ☐ ಪುರುಷರಿಂದ ☐

ಆ. ನಿಮ್ಮ ಸಹೋದ್ಯೋಗಿಗಳೊಂದಿಗೆ ನೀವು ಹೇಗೆ ವರ್ತಿಸುತ್ತೀರಿ?

ಅತ್ಯಂತ ಮುಕ್ತವಾಗಿ ☐ ಕಟ್ಟುನಿಟ್ಟಾಗಿ ☐ ಅವಶ್ಯಕತೆಗೆ ತಕ್ಕಂತೆ ☐

೨೮. ಅ. ನೀವು ರಾತ್ರಿಪಾಳಿಯಲ್ಲಿ ಕಾರ್ಯ ನಿರ್ವಹಿಸುತ್ತೀರಾ?

ಹೌದು ☐ ಇಲ್ಲ ☐

ಆ. ಹೌದಾದಲ್ಲಿ :

ತೃಪ್ತಿಕರ ☐ ಅತೃಪ್ತಿಕರ ☐ ತೀರಾ ಅತೃಪ್ತಿಕರ ☐

೨೯. ಆ. ಮಾಧ್ಯಮದಲ್ಲಿ ಯಾರಿಗೆ ಹೆಚ್ಚು ಆದ್ಯತೆ ನೀಡಲಾಗುತ್ತದೆ?

ಪುರುಷರಿಗೆ ☐ ಮಹಿಳೆಯರಿಗೆ ☐ ತಾರತಮ್ಯವಿಲ್ಲ ☐

ಆ. ನಿಮ್ಮ ಪ್ರಕಾರ ಮಾಧ್ಯಮದಲ್ಲಿ ದುಡಿಯುವ ಮಹಿಳೆಯ ಉಡುಪು/ನಡವಳಿಕೆ ಹೇಗಿದ್ದರೆ ಹೆಚ್ಚಿನ ಆದ್ಯತೆ ಸಿಗುತ್ತದೆ?

ಶೋಕಿಯಾಗಿ/ಮುಕ್ತವಾಗಿದ್ದಲ್ಲಿ ☐ ಸರಳವಾಗಿದ್ದಲ್ಲಿ ☐

ಕಟುನಿಟ್ಟಾಗಿದ್ದಲ್ಲಿ ☐ ಸಭ್ಯರೀತಿಯಲ್ಲಿದ್ದಲ್ಲಿ ☐

೩೦. ಮಾಧ್ಯಮದಲ್ಲಿ ನಿಮಗಿರುವ ಭದ್ರತೆ ಹೇಗಿದೆ?

ಉತ್ತಮ ☐ ಏನೇನೂ ಸಾಲದು ☐

ಮಧ್ಯಮ ☐ ಭದ್ರತೆಯೇ ಇಲ್ಲ ☐

ಗ್ರಂಥ ಸೂಚಿ

ಗ್ರಂಥಸೂಚಿ

೧. ತೇಜಸ್ವಿ ನವಿಲೂರು, ೨೦೦೭, "ಸಂವಹನ ಸಿದ್ಧಾಂತ ಹಾಗೂ ಸಂಶೋಧನೆ", ಮಾನಸ ಗಂಗೋತ್ರಿ ಪ್ರಕಾಶನ, ಮೈಸೂರು.

೨. ನಂದಾ ಡಿ.ಎಸ್., ೧೯೯೯, "ಮಹಿಳೆ ಮತ್ತು ಅಗ್ನಿ", ವಿಕಾಸ ಪ್ರಕಾಶನ, ಬೆಂಗಳೂರು.

೩. ಜ್ಯೋತಿ, ಶಶಿಕುಮಾರ್, ೨೦೦೭ "ಮಹಿಳಾ ಸಾಮಾಜಿಕತೆ", ಕನ್ನಡ ವಿ.ವಿ. ಪ್ರಕಾಶನ,ಹಂಪಿ.

೪. ಎನ್.ಕೆ. ವರ್ಮಾ ೨೦೦೬, "ಮೀಡಿಯ ಆ್ಯಂಡ್ ವಿಮನ್", ಮೋಹಿತ್ ಪಬ್ಲಿಕೇಶನ್ಸ್, ನ್ಯೂಡೆಲ್ಲಿ.

೫. ವಿಮಲ್ ಬಾಲಸುಬ್ರಹ್ಮಣ್ಯನ್, ೧೯೮೮, "ಮಿರರ್ ಇಮೇಜ್", ಸಿಇಡಿ ಪಬ್ಲಿಕೇಶನ್ಸ್, ಮುಂಬಯಿ.

೬. ಡಿ.ಎಸ್ ಚಂದ್ರಶೇಖರ್ ,೨೦೦೧, "ಸಮಾಜ ವಿಜ್ಞಾನಗಳಲ್ಲಿ ಸಂಶೋಧನಾ ವಿಧಾನಗಳು" ಪ್ರಸಾರಾಂಗ ಕನ್ನಡ ವಿ.ವಿ.ಹಂಪಿ ಪ್ರಕಾಶನ ,ಮೈಸೂರು.

೭. ಜೋಸೆಫ್ ಕೆ.ಜೆ. ೨೦೦೭, "ಸಂವಹನ ಮನೋವಿಜ್ಞಾನ", ಕ.ರಾ.ಮು.ವಿ.ವಿ.ಪ್ರಕಾಶನ, ಮೈಸೂರು.

೮. ತೇಜಸ್ವಿ ನವಿಲೂರು ಮತ್ತು ಸತ್ಯೇಂದ್ರ ರಾವ್ ಬಿ.ವಿ., ೨೦೦೭ ಅ, "ಅಭಿವೃದ್ಧಿಗಾಗಿ ಸಂವಹನ" ಕ.ರಾ.ಮು.ವಿ.ವಿ. ಪ್ರಕಾಶನ, ಮೈಸೂರು.

೯. ಬಾಸಿಲ್‌ಹನ್ಸ್.ವಿ. ೨೦೧೦, ವಿಮೆನ್, ಹೆಲ್ತ್ ಆಂಡ್ ಪ್ರೊಡಕ್ಟಿವಿಟಿ, ಸರ್‌ಕಾರ್ ಸಿದ್ಧಾರ್ಥ ಮತ್ತು ಐಸಾಕ್ ವ್ಯಾಕು ಅಚೀಂಪಾಂಗ್, "ಜೆಂಡರ್ ಪವರ್ಟಿ ಆಂಡ್ ಸಸ್ಟನೇಬಲ್ ಲೈವ್ಲಿಹುಡ್", ಅರೈಸ್ ಪಬ್ಲಿಷರ್ಸ್ ಆಂಡ್ ಡಿಸ್ಟ್ರಿಬ್ಯೂಟರ್ಸ್, ನೂಡೆಲ್ಲಿ.

೯. ತೇಜಸ್ವಿ ನವಿಲೂರು ಮತ್ತು ಸತ್ಯೇಂದ್ರ ರಾವ್ ಬಿ.ವಿ., ೨೦೦೭ಆ "ಸಂವಹನ ಪ್ರಕ್ರಿಯೆಯ ಪರಿಚಯ", ಕ.ರಾ.ಮು.ವಿ.ವಿ. ಪ್ರಕಾಶನ, ಮೈಸೂರು.

೧೦. ಜಿ.ವಿ.ಜೋಶಿ ಮತ್ತು ನೋಬರ್ಟ್ ಲೋಬೋ ೨೦೦೯ "ಕರಾವಳಿ ಕರ್ನಾಟಕದ ಅರ್ಥವ್ಯವಸ್ಥೆ ಹಿಂದಿನಿಂದ ಇಂದಿನವರೆಗೆ", ಮಂಗಳ ಪ್ರಕಾಶನ, ಮಂಗಳೂರು.

೧೦. ತೇಜಸ್ವಿ ನವಿಲೂರು, ೨೦೦೭ ಇ, "ಭಾರತೀಯ ಪತ್ರಿಕೋದ್ಯಮ" ಕ.ರಾ.ಮು.ವಿ.ವಿ. ಪ್ರಕಾಶನ, ಮೈಸೂರು.

೧೧. ತೇಜಸ್ವಿ ನವಿಲೂರು, ೨೦೦೭ಈ, "ಬಾನುಲಿ", ಕ.ರಾ.ಮು.ವಿ.ವಿ. ಪ್ರಕಾಶನ,ಮೈಸೂರು.

೧೨. ತೇಜಸ್ವಿ ನವಿಲೂರು, ೨೦೦೭ಉ, "ಟೆಲಿವಿಷನ್", ಕ.ರಾ.ಮು.ವಿ.ವಿ. ಪ್ರಕಾಶನ,ಮೈಸೂರು.

೧೩. ಮಧುಕೀಶ್ವರ್, ೧೯೯೩ ಗಾಂಧೀಜಿ ಮತ್ತು ಮಹಿಳೆಯರು, ಜನಪದ ಸೇವಾ ಟ್ರಸ್ಟ್, ಲೇಲುರು.

೧೪. ತೇಜಸ್ವಿ ನವಿಲೂರು, ೨೦೦೭ಜ, "ಸಿನಿಮಾ", ಕ.ರಾ.ಮು.ವಿ.ವಿ. ಪ್ರಕಾಶನ, ಮೈಸೂರು.

೧೫. ತೇಜಸ್ವಿ ನವಿಲೂರು, ೨೦೦೭ಬ "ಜನಪದ ಮಾಧ್ಯಮಗಳು" ಕ.ರಾ.ಮು.ವಿ.ವಿ. ಪ್ರಕಾಶನ, ಮೈಸೂರು.

೧೬. ಮಧುಸುಧನ್ ಕೆ.ಪಿ., ಡೆವಲಪ್‌ಮೆಂಟ್ ಆಫ್ ಮಾಸ್ ಕಮ್ಯೂನಿಕೇಶನ್ ಫ್ಯೂಚರ್‌ಸ್ಟಿಕ್ ಎಪ್ರೋಚ್, "ವಿಮನ್ ಇನ್ ಜರ್ನಲಿಸಂ" ವೊಲುಂ ೨.

೧೭. ತೇಜಸ್ವಿ ನವಿಲೂರು, ೨೦೦೭ವ, ರಾವ್ ಸತ್ಯೇಂದ್ರ ಬಿ.ವಿ., "ಅಂತರ್ಜಾಲ", ಕ.ರಾ.ಮು.ವಿ.ವಿ. ಪ್ರಕಾಶನ, ಮೈಸೂರು.

೧೮. ಮಹೇಶ್ಚಂದ್ರ ಗುರು, ತೇಜಸ್ವಿ ನವಿಲೂರು, ೨೦೦೭, "ಮಾಧ್ಯಮ ಕಾನೂನುಗಳು", ಕ.ರಾ.ಮು.ವಿ.ವಿ. ಪ್ರಕಾಶನ, ಮೈಸೂರು.

೧೯. ತೇಜಸ್ವಿ ನವಿಲೂರು, ಸತ್ಯೇಂದ್ರ ರಾವ್ ಬಿ.ವಿ, ೨೦೦೭ವ, "ಮಾಧ್ಯಮ ಧೋರಣೆಗಳು ಮತ್ತು ನೀತಿ ಸಂಹಿತೆ", ಕ.ರಾ.ಮು.ವಿ.ವಿ. ಪ್ರಕಾಶನ,ಮೈಸೂರು.

೨೦. ಸಂದೀಪ್ ಆರ್.ಮುಪ್ಪಿಡಿ, ೨೦೦೮, ನಂ.೨, "ಮೀಡಿಯ ಏಶಿಯ", ಆ್ಯನ್ ಏಶಿಯನ್ ಕಮ್ಯುನಿಕೇಶನ್ ಕ್ವಾರ್ಟರ್ಲಿ.

೨೧. ಹೇಮಲತಾ, ೨೦೦೬, "ಮಹಿಳೆ ಮತ್ತು ದುಡಿಮೆ, ಮಹಿಳಾ ಅಭಿವೃದ್ಧಿ ಯೋಜನೆಗಳು" ಮಹಿಳಾ ಅಧ್ಯಯನ ಕೇಂದ್ರ ಪ್ರಕಾಶನ,ಮೈಸೂರು.

೨೨. ಚಂದ್ರಪೂಜಾರಿ ಎಂ.(ಸಂ) ೨೦೦೯, "ಅಭಿವೃದ್ಧಿ ಅಧ್ಯಯನ"–'ದುಡಿಯುವ ಮಹಿಳೆಯ ಸಾಮಾಜಿಕ ಸ್ವರೂಪ', ಸಂಪುಟ ೭, ಸಂಚಿಕೆ ೧, ಕನ್ನಡ ವಿ.ವಿ. ಹಂಪಿ.

೨೩. ಆರ್ಯಾಂಬ ಪಟ್ಟಾಭಿ, ೨೦೦೦, "ಮಹಿಳೆ", ಉದಯ ರವಿ ಪ್ರಿಂಟರ್ಸ್, ಮೈಸೂರು.

೨೪. ತೇಜಸ್ವಿ ನವಿಲೂರು ೨೦೦೭ಬ, "ಮಾಧ್ಯಮದ ಮುಂದಿರುವ ಸವಾಲುಗಳು' ಕ.ರಾ.ಮು.ವಿ.ವಿ. ಮೈಸೂರು.

೨೫. ವರ್ಮಾ. ೨೦೦೬, "ಮೀಡಿಯ ಆ್ಯಂಡ್ ವಿಮೆನ್", ಮೋಹಿತ್ ಪಬ್ಲಿಕೇಶನ್ಸ್, ನ್ಯೂಡೆಲ್ಲಿ.

೨೬. ಪ್ರವೀಣ್ ಫೆರ್ನಾಂಡಿಸ್, ೨೦೦೭, "೨೧ನೆ ಶತಮಾನದ ಮಹಿಳೆ, ಸಮಾನತೆ, ಅಭಿವೃದ್ಧಿ ಕ್ರಾಂತಿ, ಐಬಿಎಚ್ ಪ್ರಕಾಶನ, ಬೆಂಗಳೂರು.

೨೭. ಗುಪ್ತಾ ವಿ.ಎಸ್, ೧೯೯೭ , "ನ್ಯಾಶನಲ್ ಮೀಡಿಯ ಪಾಲಿಸಿ", ಕಾನ್ಸೆಪ್ಟ್ ಪಬ್ಲಿಶಿಂಗ್

ಕಂಪನಿ, ನ್ಯೂಡೆಲ್ಲಿ.

೨೮. ದ.ಕ.ಜಿಲ್ಲೆಯ ಅಂಕಿ ಅಂಶಗಳ ನೋಟ, ೨೦೦೯ ಜಿಲ್ಲಾ ಸಂಖ್ಯಾ ಸಂಗ್ರಹಣಾಧಿಕಾರಿ ದ.ಕ. ಮಂಗಳೂರು ಪ್ರಕಟಣೆ.

೨೯. ವಿಕಿಪೀಡಿಯಾ.ಒರ್ಗ್/ವಿಕಿ/ದಕ್ಷಿಣಕನ್ನಡ.

೩೦. ಚಿರಂಜೀವಿ, ೨೦೦೩, ಕರ್ನಾಟಕ ಪತ್ರಿಕೋದ್ಯಮ, ಸಪ್ನಾ ಬುಕ್ ಹೌಸ್, ಬೆಂಗಳೂರು.

೩೧. ಕೃಷ್ಣಗೋಪಾಲ, ೧೯೯೧, ಕರ್ನಾಟಕ ಪತ್ರಿಕಾ ಇತಿಹಾಸ, ಕರ್ನಾಟಕ ಪತ್ರಿಕಾ ಅಕಡಮಿ, ಬೆಂಗಳೂರು.

೩೨. ದಾಮೋದರ ಐತಾಳ.ಕೆ. ೨೦೦೭, ಅವಿಭಜಿತ ದಕ್ಷಿಣ ಕನ್ನಡ ಜಿಲ್ಲೆಯ ಧೀಮಂತ ಪತ್ರಕರ್ತರು, ಅಖಿಲಭಾರತ ೭೪ನೆಯ ಕನ್ನಡ ಸಾಹಿತ್ಯ ಸಮ್ಮೇಳನ, ಉಡುಪಿ.

೩೩. ಡಬ್ಲ್ಯು.ಡಬ್ಲ್ಯು.ಡಬ್ಲ್ಯು.ಯೂಸರ್‌ಡೈರೆಕ್ಟರಿ.ಇನ್‌ಫೊ/ಕನ್ನಡ ಇ–ಪೇಪರ್ಸ್.

೩೪. ಡಬ್ಲ್ಯು.ಡಬ್ಲ್ಯು.ಡಬ್ಲ್ಯು.ಡಬ್ಲ್ಯು ೩ ನ್ಯೂಸ್ಸ್ ಪೇಪರ್ಸ್.ಕಾಮ್

೩೫. ಡಬ್ಲ್ಯು.ಡಬ್ಲ್ಯು.ಡಬ್ಲ್ಯು.ಇಂಡಿಯಾಟುಗೆದರ್.ಆರ್ಗ್,೨೦೦೪,ಜುಲೈ

೩೬. ಡಬ್ಲ್ಯು.ಡಬ್ಲ್ಯು.ಡಬ್ಲ್ಯು.ದೈಜಿವರ್ಲ್ಡ್.ಕಾಮ್/ಚಾನಾ/ಎಕ್ಸ್‌ಕ್ಲುಸಿವ್

೩೭. ಡಬ್ಲ್ಯು.ಡಬ್ಲ್ಯು.ಡಬ್ಲ್ಯು. ವರ್ಲ್ಡ್‌ಲಿಂಗೊ.ಕಾಮ್/ಮಾ/ಎನ್‌ವಿಕಿ/ಇಎನ್/ಕರಾವಳಿ ಅಲೆ.